# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಮಂಗಳವಾರ, ಆಗಸ್ಟ್ 23, 2022

ಸಂಪುಟ : 49 ಸಂಚಿಕೆ : 101 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com




# ಗಣೇಶನ ಹಬ್ಬ: ಗಲಭೆ ಸಲ್ಲ

## ಕಟ್ಟೆಚ್ಚರ ವಹಿಸಲು ಗೃಹ ಇಲಾಖೆಗೆ ಸರ್ಕಾರದ ಆದೇಶ

ಬೆಂಗಳೂರು, ಆ. 22 - ಗಣೇಶೋತ್ಸವ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಕೋಮು ಗಲಭೆಗಳಿಗೆ ಅವಕಾಶ ನೀಡದಂತೆ ಕಟ್ಟೆಚ್ಚರ ವಹಿಸಲು ಗೃಹ ಇಲಾಖೆಗೆ ಸರ್ಕಾರ ಆದೇಶಿಸಿದೆ.

ಗಣೇಶೋತ್ಸವ ಎಲ್ಲೆಲ್ಲಿ ಆಚರಣೆ, ಮಾಡುತ್ತಿರುವವರು ಯಾರು, ಇದಕ್ಕೆ ಸ್ಥಳೀಯ ಸಂಸ್ಥೆಗಳ ಅನುಮತಿ ಪಡೆಯಲಾಗಿದೆಯೇ, ಅನುಮತಿ ಪಡೆದಿದ್ದರೆ, ಇವರು ಏನೆಲ್ಲ ವ್ಯವಸ್ಥೆ ಮಾಡಿಕೊಂಡಿದ್ದಾರೆ, ಯಾವ ರೀತಿ ಮೆರವಣಿಗೆ ಮಾಡುತ್ತಾರೆ ಎಂಬೆಲ್ಲ ಸಂಗ್ರಹ ಇರಬೇಕು ಎಂದು ತಿಳಿಸಲಾಗಿದೆ.

ರಾಜ್ಯ ವಿಧಾನಸಭಾ ಚುನಾವಣಾ ಸಮೀಪ ಇರುವ ಹಿನ್ನೆಲೆಯಲ್ಲಿ ಕಿಡಿಗೇಡಿಗಳು ಈ ಹಬ್ಬವನ್ನು ರಾಜಕೀಯವಾಗಿ ಬಳಸಿಕೊಳ್ಳುವ ಸಾಧ್ಯತೆ ಇದೆ.

ಬೆಂಗಳೂರು, ಮೈಸೂರು, ಶಿವಮೊಗ್ಗ, ಬೆಳಗಾವಿ, ಹುಬ್ಬಳ್ಳಿ ಸೇರಿದಂತೆ ಕೆಲವು ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿನ ಸೂಕ್ಷ್ಮ ಸ್ಥಳಗಳಲ್ಲಿ ಗಣೇಶೋತ್ಸವ ನಡೆಸುವವರ ಬಗ್ಗೆ ಬಾರಿ ಎಚ್ಚರಿಕೆ ವಹಿಸಬೇಕು ಮತ್ತು ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಲಾಗಿದೆ.

**ವಿಶೇಷ ಕಾರ್ಯಾಚರಣೆ ಆರಂಭಿಸಿ, ರಾಜ್ಯದ ಯಾವ ಯಾವ ಸ್ಥಳಗಳಲ್ಲಿ ಗಣೇಶ ಮೂರ್ತಿ ಪ್ರತಿಷ್ಠಾಪನೆ ಮಾಡಲಾಗುತ್ತದೆ ಎಂಬುದರ ಬಗ್ಗೆ ಮೊದಲೇ ಮಾಹಿತಿ ಸಂಗ್ರಹಿಸುವಂತೆ ಸೂಚಿಸಿದೆ.**

ಗಣೇಶೋತ್ಸವವನ್ನು ದೊಡ್ಡ ಪ್ರಮಾಣದಲ್ಲಿ ಆಚರಣೆ ಮಾಡಿದರೆ ಅದನ್ನು ವಿಶಾಲವಾದ ಪ್ರದೇಶದಲ್ಲಿ ನಡೆಸುವಂತೆ ಸೂಚಿಸಿ. ಸಣ್ಣಪುಟ್ಟ ಗಲ್ಲಿಗಳಲ್ಲಿ ದೊಡ್ಡದಾಗಿ ಮಾಡಿದರೆ, ಆ ಬಗ್ಗೆ ಎಚ್ಚರಿಕೆ ವಹಿಸುವುದು.

ಹಬ್ಬದ ಆಚರಣೆಯಿಂದ (2ನೇ ಪುಟಕ್ಕೆ)

# ಆನೆಕೊಂಡದಲ್ಲಿ ಸಂಭ್ರಮದ ಕಾರಣಿಕ ಮಹೋತ್ಸವ

ದಾವಣಗೆರೆ, ಆ. 22- ಐತಿಹಾಸಿಕ ಶ್ರೀ ಕ್ಷೇತ್ರ ಆನೆಕೊಂಡ ಕಾರಣಿಕ ಹಾಗೂ ಜಾತ್ರಾ ಮಹೋತ್ಸವ ಶ್ರಾವಣದ ಕಡೆಯ ಸೋಮವಾರವಾದ ಇಂದು ವಿಜೃಂಭಣೆಯಿಂದ ಜರುಗಿತು.

**'ರಾಮ ರಾಮ ಎಂದು ನುಡಿದೀತಲೇ
ಶೃಂಗಾರದ ಗಿಳಿಗೆ ಮಹಾತಾಯಿ ಆಶೀರ್ವಾದ ಮಾಡ್ಯಾಳಲೇ
ನರಲೋಕದ ಜನಕ್ಕೆ ಆನೆ ಮುತ್ತಿನುಂಡೆ ಕೊಟ್ಟೀತಲೇ
ದೇಶದ ಮೇಲೆ ಹಾನಿಗಳ ಮೇಲೆ ಹಾನಿ ಆದೀತಲೇ ಎಚ್ಚರ !!!'**

ಎಂದು ಕಾರಣಿಕ ನುಡಿಯಲಾಯಿತು.



ಕಾರಣಿಕಕ್ಕೂ ಮುನ್ನ ಸಂಜೆ ಆನೆಕೊಂಡದ ಶ್ರೀ ಬಸವೇಶ್ವರ ಸ್ವಾಮಿ, ನೀಲಾನಹಳ್ಳಿಯ ಶ್ರೀ ಆಂಜನೇಯ ಸ್ವಾಮಿ, ನಿಟುವಳ್ಳಿಯ ಶ್ರೀ ದುರ್ಗಾಂಬಿಕಾ ದೇವಿ ಸೇರಿದಂತೆ ಸುತ್ತ ಮುತ್ತಲಿನ ಗ್ರಾಮಗಳ ಒಂಭತ್ತು ದೇವರುಗಳ ಮೆರವಣಿಗೆ ನಡೆಯಿತು.

ಆನೆಕೊಂಡ, ದಾವಣಗೆರೆ ನಗರ ಸೇರಿದಂತೆ ನೆರೆಯ ಗ್ರಾಮಗಳಿಂದ ಆಗಮಿಸಿದ್ದ ಅಪಾರ ಭಕ್ತರು ಕಾರಣಿಕಕ್ಕೆ ಸಾಕ್ಷಿಯಾದರು.

ಸಂಜೆ ಪಲ್ಲಕ್ಕಿಯಲ್ಲಿ ದೇವರ ಮೂರ್ತಿಗಳ ಮೆರವಣಿಗೆ ನಡೆಯುತ್ತಿದ್ದಂತೆ ಇತ್ತ ಕಾರಣಿಕ ಸ್ಥಳಕ್ಕೆ ಜನರ ಹಿಂಡು ಹಿಂಡಾಗಿ ಬಂದು ಸೇರುತ್ತಿದ್ದರು. ಕಳೆದ ವರ್ಷಗಳಿಗೆ ಹೋಲಿಸಿದರೆ ಈ ವರ್ಷದ ಕಾರಣಿಕ ತುಸು ತಡವಾದರೂ ಭಕ್ತರು ಮಾತ್ರ ಕುತೂಹಲ ಭರಿತರಾಗಿ ಕಾರಣಿಕ ಕೇಳಲು ನೆರೆದಿದ್ದರು.

ಇತ್ತ ಮುಖ್ಯ ರಸ್ತೆಯಲ್ಲಿ ಜಾತ್ರೆಯ ರಂಗು ಗರಿಗೆದರಿತ್ತು. ಹೆಂಗಳೆಯರಿಗೆ ಬೇಕಾದ ಸರ, ಬಳೆಗಳ ಅಂಗಡಿ, ಮಂಡಕ್ಕಿ-ಮಿರ್ಚಿ, ಮಕ್ಕಳಿಗೆ ಬೇಕಾದ ಆಟದ ಸಾಮಗ್ರಿ ಖರೀದಿ ನಡೆದಿತ್ತು.

# ಸಿದ್ದರಾಮಯ್ಯ ಮೇಲೆ ಮೊಟ್ಟೆ ಎಸೆತ; ರಾಣೇಬೆನ್ನೂರು ಭಾಗಶಃ ಬಂದ್

ರಾಣೇಬೆನ್ನೂರು, ಆ.22- ವಾಮ ಮಾರ್ಗದಿಂದ ಅಧಿಕಾರ ಹಿಡಿಯುವ ಕುತಂತ್ರ ಬುದ್ದಿಯ ಬಿಜೆಪಿ ಯವರು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಜನಪ್ರಿಯತೆ ಕಂಡು ಹೈರಾಣಾಗಿದ್ದಾರೆ. ಜನರ ಸಂಕಷ್ಟ ಅರಿಯಲು ಕೊಡಗಿಗೆ ತೆರಳಿದ್ದ ಸಿದ್ರಾಮಯ್ಯ ಅವರೊಂದಿಗೆ ಬಿಜೆಪಿ ಕಾರ್ಯಕರ್ತರು ಅನುಚಿತವಾಗಿ ವರ್ತಿಸಿರುವುದು ಖಂಡನೀಯ ಎಂದು ಮಾಜಿ ಸಭಾಪತಿ ಕೆ.ಬಿ. ಕೋಳಿವಾಡ ಹೇಳಿದರು.

ಇಂದು ಇಲ್ಲಿನ ಕೆಇಬಿ ಗಣೇಶ ದೇವಸ್ಥಾನದಿಂದ ಹೊರಟ ಕಾಂಗ್ರೆಸ್, ಕೆಪಿಜೆಪಿ, ಕುರುಬರ ಸಂಘ ಸೇರಿದಂತೆ ವಿವಿಧ ಸಮಾಜದವರು ಸಂಯುಕ್ತವಾಗಿ ಮೊಟ್ಟೆ ಎಸೆದ ಪ್ರಕರಣ ವಿರೋಧಿಸಿ ನಡೆಸಿದ ಪ್ರತಿಭಟನಾ ಮೆರವಣಿಗೆಗೆ ಚಾಲನೆ ನೀಡಿ ಕೋಳಿವಾಡ ಮಾತನಾಡುತ್ತಿದ್ದರು.

ಪ್ರಮುಖ ಬೀದಿಗಳಲ್ಲಿ ಹಾಯ್ದು ತಹಶೀಲ್ದಾರ್ ಕಛೇರಿಗೆ ಮನವಿ ಅರ್ಪಿಸಿದ ಮೆರವಣಿಗೆಯಲ್ಲಿ ಕೆಪಿಸಿಸಿ ಕಾರ್ಯದರ್ಶಿ ಪ್ರಕಾಶ ಕೋಳಿವಾಡ, ನಗರಸಭೆ ಸದಸ್ಯರಾದ ಪುಟ್ಟಪ್ಪ ಮರಿಯಮ್ಮನರ, ಹುಚ್ಚಪ್ಪ ಮೆಡ್ಲೇರಿ, ನಿಂಗಪ್ಪ ಕೋಡಿಹಳ್ಳಿ, ಸ್ಥಾಯಿ ಸಮಿತಿ ಅಧ್ಯಕ್ಷ ಸಿದ್ದಪ್ಪ ಬಾಗಲರ, ವರ್ತಕರ ಸಂಘದ ಅಧ್ಯಕ್ಷ ಅಶೋಕ ಗಂಗನಗೌಡ್ರ, ಗಂಗಾ ಬ್ಯಾಂಕ್ ಅಧ್ಯಕ್ಷ ರತ್ನಾಕರ ಕುಂದಾಪುರ, ಕುರುಬರ ಸಂಘದ (2ನೇ ಪುಟಕ್ಕೆ)

# ಸಿದ್ದರಾಮಯ್ಯ ಮೆಚ್ಚಿಸಲು 'ಗೂಂಡಾ' ಪದ ಬಳಕೆ



ಹರಿಹರ, ಆ. 22 – ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಅವರನ್ನು ಮೆಚ್ಚಿಸುವ ಸಲುವಾಗಿ ಶಾಸಕ ಎಸ್. ರಾಮಪ್ಪ ಅವರು 'ಆರ್.ಎಸ್.ಎಸ್. ಕಾರ್ಯಕರ್ತರು ಗೂಂಡಾಗಳು' ಎಂಬ ಪದ ಬಳಸಿದ್ದಾರೆ ಎಂದು ಮಾಜಿ ಶಾಸಕ ಬಿ.ಪಿ. ಹರೀಶ್ ಆರೋಪಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯನವರ ಮೇಲೆ ಕೊಡಗಿನಲ್ಲಿ ಮೊಟ್ಟೆ ಎಸೆದ ಬಗ್ಗೆ ಪ್ರತಿಭಟನೆ ನಡೆಸುವಾಗ ರಾಮಪ್ಪ ಅವರು ಬಿಜೆಪಿ ಹಾಗೂ ಆರ್.ಎಸ್.ಎಸ್. ಗೂಂಡಾಗಳು ಎಂಬ ಪದ ಬಳಸಿರುವುದು ಖಂಡನೀಯ ಎಂದಿದ್ದಾರೆ. ಕೊಡಗಿನಲ್ಲಿ ಮೊಟ್ಟೆ ಎಸೆದಿರುವ ವ್ಯಕ್ತಿಗೆ ಶಿಕ್ಷೆ ಆಗಬೇಕು. ಆದರೆ, ತಾನು ಸೆಕ್ಯುಲರ್ (2ನೇ ಪುಟಕ್ಕೆ)

# ಗಣಪತಿ ಪೆಂಡಾಲ್‌ಗಳಲ್ಲಿ ಸಾವರ್ಕರ್, ತಿಲಕ್ ಚಿತ್ರ

ಬೆಂಗಳೂರು, ಆ. 22 – ಮಂಬರುವ ಗಣೇಶೋತ್ಸವದ ಸಂದರ್ಭದಲ್ಲಿ ಗಣಪತಿ ಪೆಂಡಾಲ್‌ಗಳಲ್ಲಿ ಹಿಂದುತ್ವವಾದಿ ವಿನಾಯಕ ದಾಮೋದರ ಸಾವರ್ಕರ್ ಹಾಗೂ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಬಾಲ ಗಂಗಾಧರ ತಿಲಕ್ ಅವರ ಚಿತ್ರಗಳನ್ನು ಅಳವಡಿಸಲು ಹಲವಾರು ಹಿಂದೂ ಸಂಘಟನೆಗಳು ನಿರ್ಧರಿಸಿವೆ. ಆಗಸ್ಟ್ 31ರಿಂದ ಗಣೇಶೋತ್ಸವ ಆರಂಭವಾಗಲಿದೆ.

ಶಿವಮೊಗ್ಗ ಹಾಗೂ ಮಂಗಳೂರುಗಳಲ್ಲಿ ಇತ್ತೀಚೆಗೆ ಸಾವರ್ಕರ್ ಚಿತ್ರಗಳನ್ನು ಅಳವಡಿಸುವುದರ ಬಗ್ಗೆ ವಿವಾದ ಉಂಟಾಗಿತ್ತು. ಇದರ ಬೆನ್ನಲ್ಲೇ ಹಿಂದೂ (2ನೇ ಪುಟಕ್ಕೆ)

# ಮೀಸಲಾತಿ ಹೆಚ್ಚಳಕ್ಕೆ ಸಹಕಾರ



**193ನೇ ದಿನಕ್ಕೆ ಕಾಲಿಟ್ಟ ರಾಜನಹಳ್ಳಿ ಶ್ರೀಗಳ ಧರಣಿ ಸತ್ಯಾಗ್ರಹ:**
**ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಭರವಸೆ**

ಬೆಂಗಳೂರು, ಆ. 22 - ನ್ಯಾ. ನಾಗಮೋಹನ ದಾಸ್ ಆಯೋಗದ ವರದಿ ಜಾರಿಗೊಳಿಸುವ ನಿಟ್ಟಿನಲ್ಲಿ ಕಾನೂನಾತ್ಮಕ ಸಹಕಾರ ನೀಡುವುದಾಗಿ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಶಿ ಹೇಳಿದ್ದಾರೆ.

ಇಲ್ಲಿನ ಫ್ರೀಡಂ ಪಾರ್ಕ್‌ನಲ್ಲಿ ನ್ಯಾ. ನಾಗಮೋಹನ್ ದಾಸ್ ಆಯೋಗದ ವರದಿ ಅನುಷ್ಠಾನಕ್ಕೆ (ಎಸ್ಸಿ ಎಸ್ಟಿ ಮೀಸಲು ಹೆಚ್ಚಳ) ಒತ್ತಾಯಿಸಿ ಕಳೆದ ಆರು ತಿಂಗಳಿಂದ ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿಯವರು ನಡೆಸುತ್ತಿರುವ ಧರಣಿ ಸತ್ಯಾಗ್ರಹದ ಸ್ಥಳಕ್ಕೆ ಭೇಟಿ ನೀಡಿದ ಸಚಿವ ಜೋಶಿ ಅವರು ಸ್ವಾಮೀಜಿ (2ನೇ ಪುಟಕ್ಕೆ)

# ಆಜಾನ್‌ಗಾಗಿ ಲೌಡ್‌ಸ್ಪೀಕರ್ ಬಳಕೆ ಮೂಲಭೂತ ಹಕ್ಕುಗಳ ಉಲ್ಲಂಘನೆಯಲ್ಲ

**ಹೈಕೋರ್ಟ್**

ಬೆಂಗಳೂರು, ಆ. 22 – ಮಸೀದಿಗಳಲ್ಲಿ ಲೌಡ್‌ಸ್ಪೀಕರ್ ಮೂಲಕ ಆಜಾನ್ ಮೊಳಗಿಸುವುದು ಬೇರೆಯವರ ಮೂಲಭೂತ ಹಕ್ಕುಗಳ ಉಲ್ಲಂಘನೆ ಯಲ್ಲ ಎಂದಿರುವ ಕರ್ನಾಟಕ ಹೈಕೋರ್ಟ್, ಮಸೀದಿಗಳಲ್ಲಿ ಸ್ಪೀಕರ್ ಬಳಕೆಗೆ ತಡೆಯಾಜ್ಞೆ ಹೊರಡಿಸಲು ನಿರಾಕರಿಸಿದೆ. ಆದರೆ, ಅಧಿಕಾರಿಗಳು ಶಬ್ದ (3ನೇ ಪುಟಕ್ಕೆ)

# ಬಾಳೆ ಬೆಳೆ ತಂತ್ರಜ್ಞಾನ ಪ್ರಸಾರಕ್ಕೆ ಅತ್ಯುತ್ತಮ ಕೆವಿಕೆ ಪ್ರಶಸ್ತಿ - 2022

ದಾವಣಗೆರೆ, ಏ. 22 - ಬಾಳೆ ಬೆಳೆ ತಂತ್ರಜ್ಞಾನಗಳ ಪ್ರಸರಣ ವಿಚಾರದಲ್ಲಿ ಸಲ್ಲಿಸಿದ ಸೇವೆಗೆ ಜಿಲ್ಲೆಯ ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರ (ದಾವಣಗೆರೆ) ಕ್ಕೆ ರಾಷ್ಟ್ರೀಯ ಬಾಳೆ ಸಂಶೋಧನಾ ಕೇಂದ್ರ (ತಿರುಚಿರಾಪಳ್ಳಿ) ರಾಷ್ಟ್ರೀಯ ಅತ್ಯುತ್ತಮ ಕೆವಿಕೆ 2022 ಪ್ರಶಸ್ತಿ ನೀಡಿದೆ.

ತಮಿಳುನಾಡಿನ ತಿರುಚಿರಾಪಳ್ಳಿಯಲ್ಲಿ ಮೊನ್ನೆ ನಡೆದ ರಾಷ್ಟ್ರೀಯ ಬಾಳೆ ಸಂಶೋಧನಾ ಕೇಂದ್ರದ (ತಿರುಚಿರಾಪಳ್ಳಿ)29ನೇ ಸಂಸ್ಥಾಪನಾ ದಿನಾಚರಣೆ ಸಮಾರಂಭದಲ್ಲಿ ಕೆವಿಕೆ ಮುಖ್ಯಸ್ಥ ಡಾ. ಟಿ.ಎನ್. ದೇವರಾಜ ಹಾಗೂ ಮಣ್ಣು ವಿಜ್ಞಾನಿ ಹೆಚ್.ಎಂ. ಸಣ್ಣಗೌಡ್ರ ಅವರುಗಳು ಪ್ರಶಸ್ತಿ ಸ್ವೀಕರಿಸಿದರು.

ಕಳೆದ 15 ವರ್ಷಗಳಿಂದ ಬಾಳೆ ಬೆಳೆ ತಂತ್ರಜ್ಞಾನಗಳನ್ನು ಮುಂಚೂಣಿ ಪ್ರಾತ್ಯಕ್ಷಿಕೆಗಳು, ಕ್ಷೇತ್ರ ಪ್ರಯೋಗಗಳು, ಪದ್ಧತಿ ಪ್ರಾತ್ಯಕ್ಷಿಕೆಗಳು, ರೈತ ಕ್ಷೇತ್ರ ಪಾಠಶಾಲೆ ಹಾಗೂ ಪೂರಕ ವಿಸ್ತರಣಾ ಮಾಹಿತಿ ಲೇಖನಗಳ ಮೂಲಕ ಬಾಳೆ ಬೆಳೆಗಾರರಿಗೆ ಸೇವೆಯನ್ನು ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರವು ಸಲ್ಲಿಸಿದೆ.

ಡಾ. ಟಿ.ಎನ್. ದೇವರಾಜ ಅವರ ಮುಂದಾಳತ್ವದಲ್ಲಿ ಎಂ.ಜಿ. ಬಸವನಗೌಡ, ಹೆಚ್.ಎಂ. ಸಣ್ಣಗೌಡ್ರ, ಮಲ್ಲಿಕಾರ್ಜುನ (2ನೇ ಪುಟಕ್ಕೆ)

# ಪದವಿ ರಹಿತ ಪರಿಣಿತರು ಉಪನ್ಯಾಸಕ ಹುದ್ದೆಗೆ

**ಶೇ.10ರಷ್ಟು ಹುದ್ದೆಗಳನ್ನು ವಿವಿಧ ವಲಯಗಳ ಪರಿಣಿತರಿಗೆ ನೀಡಲು ಯು.ಜಿ.ಸಿ. ನಿರ್ಧಾರ**

ನವದೆಹಲಿ, ಆ. 22 – ಔಪಚಾರಿಕ ಕಾಲೇಜು ಶಿಕ್ಷಣ ಹಾಗೂ ಪ್ರಬಂಧಗಳ ಪ್ರಕಟಣೆ ಮಾಡದ, ಆದರೆ ವಿವಿಧ ವಲಯಗಳಲ್ಲಿ ಪರಿಣಿತರಾದ ಪ್ರತಿಷ್ಠಿತರನ್ನು ಉಪನ್ಯಾಸಕ ಹುದ್ದೆಗೆ ಸೇರ್ಪಡೆ ಮಾಡಿಕೊಳ್ಳಲು ವಿಶ್ವವಿದ್ಯಾನಿಲಯಗಳ ಧನಸಹಾಯ ಆಯೋಗ (ಯು.ಜಿ.ಸಿ.) ಅನುಮತಿ ನೀಡಿದೆ.

ಕಳೆದ ವಾರ ನಡೆದ ಯು.ಜಿ.ಸಿ.ಯ 560ನೇ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ವಿಶ್ವವಿದ್ಯಾನಿಲಯಗಳು ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳ ಶೇ.10ರಷ್ಟು ಹುದ್ದೆಗಳನ್ನು ವೃತ್ತಿಯಲ್ಲಿ ಅನುಭವ ಹೊಂದಿರುವವರಿಗೆ ನೀಡಬಹುದಾಗಿದೆ. 'ವೃತ್ತಿಪರ ಅಧ್ಯಾಪಕರು' ಎಂಬ ಹೆಸರಿನಲ್ಲಿ ಇವರ ನೇಮಕ ಮಾಡಿಕೊಳ್ಳಲು ಮುಂದಿನ ತಿಂಗಳು ಆದೇಶ ಹೊರಡಿಸಲಾಗುವುದು.

ಇಂಜಿನಿಯರಿಂಗ್, ವಿಜ್ಞಾನ, ಮಾಧ್ಯಮ, ಸಾಹಿತ್ಯ, ಉದ್ಯಮಶೀಲತೆ, ಸಾಮಾಜಿಕ ವಿಜ್ಞಾನ, ಲಲಿತ ಕಲೆ, ನಾಗರಿಕ ಸೇವೆ ಹಾಗೂ (3ನೇ ಪುಟಕ್ಕೆ)

# ಸಿರಿಗೆರೆಯಲ್ಲಿ ಕಾಶಿ ಮಹಾಲಿಂಗಸ್ವಾಮಿಗಳ ಪರವು



**ಶ್ರೀ ತರಳಬಾಳು ಜಗದ್ಗುರುಗಳ ಚಾಲನೆ**

ಸಿರಿಗೆರೆ, ಆ.22- ಶ್ರೀ ಕಾಶಿ ಮಹಾಲಿಂಗ ಸ್ವಾಮೀಜಿ ಅವರನ್ನು ಪವಾಡ ಪುರುಷರು ಎಂದೇ ಬಣ್ಣಿಸುತ್ತಿದ್ದರು. ಅವರು ಮಕ್ಕಳ ಬಗ್ಗೆ ಬಹಳ ಪ್ರೀತಿ, ವಾತ್ಸಲ್ಯ ಇಟ್ಟುಕೊಂಡಿದ್ದರು ಎಂದು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ಸಿರಿಗೆರೆಯ ಕಾಶಿ ಮಹಾ ಲಿಂಗ ಸ್ವಾಮೀಜಿ ಗದ್ದುಗೆಯಲ್ಲಿ ಸೋಮವಾರ ನಡೆದ ಅನ್ನ ದಾಸೋಹ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಗ್ರಾಮೀಣ ಜನರ ಬದುಕಿನ ಬಗ್ಗೆ ಅವರಿಗೆ ಪ್ರೀತಿ, ನಂಬಿಕೆ ಇತ್ತು. ಗ್ರಾಮದ ಭಕ್ತರು ಸೇರಿ ಶ್ರಾವಣ ಮಾಸದ ದಿನದಂದು ಅನ್ನ ದಾಸೋಹ ಕಾರ್ಯಕ್ರಮಕ್ಕೆ ಸಹಕರಿಸುತ್ತಿರುವುದು ಸಂತೋಷದ ಸಂಗತಿ ಎಂದರು.

ಪ್ರತಿ ವರ್ಷದಂತೆ ಶ್ರಾವಣ ಮಾಸದಲ್ಲಿ ಅನ್ನ ದಾಸೋಹ ಕಾರ್ಯಕ್ರಮವನ್ನು ಸಿರಿಗೆರೆ ಗ್ರಾಮಸ್ಥರು ಏರ್ಪಡಿಸುತ್ತಿದ್ದು, ಸಿರಿಗೆರೆ ಹಾಗೂ ಸುತ್ತಮುತ್ತಲಿನ ಗ್ರಾಮದ ಜನರ ಜೊತೆಗೆ ಎಲ್ಲಾ ಶಾಲಾ-ಕಾಲೇಜಿನ ಮಕ್ಕಳು ಪ್ರಸಾದ ಸ್ವೀಕರಿಸಿದರು. ಅನೇಕ ವರ್ಷಗಳಿಂದ ಈ ಸಂಪ್ರದಾಯ ಆಚರಿಸುತ್ತಿರುವ ಗ್ರಾಮಸ್ಥರಿಗೆ ಶ್ರೀ ಕಾಶಿ ಮಹಾಲಿಂಗ ಸ್ವಾಮೀಜಿಯವರ ಪರವು ಮಾಡಿದರೆ ಕಡ್ಡಾಯವಾಗಿ ಗ್ರಾಮಕ್ಕೆ ಮಳೆ ಬರುತ್ತದೆ ಎಂಬ ನಂಬಿಕೆ ಇದೆ. ಸ್ವಾಮೀಜಿ ಅವರ ಪವಾಡ ಎಂಬಂತೆ ಪ್ರತಿವರ್ಷವೂ ಈ ದಿನದಲ್ಲಿ ಮಳೆಯ ಆಗಮನವಾದ ಹಲವಾರು ನಿದರ್ಶನಗಳಿವೆ ಎಂದು ಗ್ರಾಮಸ್ಥರು ಅಭಿಪ್ರಾಯ ವ್ಯಕ್ತಪಡಿಸಿದರು.

ಪರವಿನ ಸ್ಮರಣಾರ್ಥ ಗದ್ದುಗೆಗೆ ಹೋಗುವ ರಸ್ತೆಗೆ ಶ್ರೀ ಕಾಶಿ ಮಹಾಲಿಂಗ (3ನೇ ಪುಟಕ್ಕೆ)


## ಬಂಡೆಬೊಮ್ಮೇನಹಳ್ಳಿ ಕಮಲಮ್ಮ ನಿಧನ



ಚಿತ್ರದುರ್ಗ ಜಿಲ್ಲೆ, ಹೊಳಲ್ಕೆರೆ ತಾಲ್ಲೂಕು ಬಂಡೆಬೊಮ್ಮೇನಹಳ್ಳಿ ವಾಸಿ
ಸಿದ್ರಾಮಜ್ಜರ ವೀರಪ್ಪನವರ ಧರ್ಮಪತ್ನಿ
**ಶ್ರೀಮತಿ ಕಮಲಮ್ಮ**
ಅವರು ದಿನಾಂಕ 22.08.2022ರ ಸೋಮವಾರ ಮಧ್ಯಾಹ್ನ 3.20ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ ಸುಮಾರು 82 ವರ್ಷ ವಯಸ್ಸಾಗಿತ್ತು.
ಪತಿ, ಇಬ್ಬರು ಪುತ್ರರು, ಸೊಸೆಯಂದಿರು, ಮೂವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 23.08.2022ರ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಬಂಡೆಬೊಮ್ಮೇನಹಳ್ಳಿಯ ಮೃತರ ತೋಟದಲ್ಲಿ ನೆರವೇರಿಸಲಾಗುವುದು.
ದುಃಖತಪ್ತ ಕುಟುಂಬ ವರ್ಗ
**ಸಿದ್ರಾಮಜ್ಜರ ವಂಶಸ್ಥರು ಹಾಗೂ ಬಂಧು-ಮಿತ್ರರು.**
**ಮೊ : 90710-48399**

## 11ನೇ ವರ್ಷದ ಪುಣ್ಯಸ್ಮರಣೆ



**ಶರಣ ಕೆ.ಆರ್.ರಮೇಶ್**
ನಿಧನ : 23.08.2011
ನೀನು ನಮ್ಮನ್ನಗಲಿ ಇಂದಿಗೆ ಹನ್ನೊಂದು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ,
**ಶ್ರೀಮತಿ ಕೆ.ಜಿ. ಗಿರಿಜಮ್ಮ ಮತ್ತು ಶ್ರೀ ಕೆ.ಜಿ.ರೇವಣಸಿದ್ದಪ್ಪ**
1ನೇ ದರ್ಜೆ ಗುತ್ತಿಗೆದಾರರು ಹಾಗೂ
ಮಾಜಿ ಪ್ರಧಾನರು, ಕುರ್ಕಿ, ದಾವಣಗೆರೆ ತಾಲ್ಲೂಕು.
ಪತ್ನಿ : **ಶ್ರೀಮತಿ ಸವಿತಾ ರಮೇಶ್ ಕೆ.ಆರ್.**
**ಕು|| ಅನುಷಾ ಕೆ.ಆರ್.**, ಎಂಬಿಬಿಎಸ್, **ಕು|| ಅಮೂಲ್ಯ**
**ಸಹೋದರಿಯರು ಹಾಗೂ ಮಾವಂದಿರು**
**ಬಂಧು-ಮಿತ್ರರು, ಕುರ್ಕಿ.**
**ಜಿ.ಆರ್. ಸರ್ವೀಸ್ ಸ್ಟೇಷನ್, ತೋಳಹುಣಸೆ.**
**ಜ್ಯೋತಿ ಸರ್ವೀಸ್ ಸ್ಟೇಷನ್, ಅಣಜಿ.**

# ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ರಾಜ್ಯ ನೀರಾವರಿ ಯೋಜನೆಗಳಿಗೆ ಆದ್ಯತೆ



## ತರಳಬಾಳು ಜಗದ್ಗುರುಗಳ ಭೇಟಿ ಸಂದರ್ಭದಲ್ಲಿ ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ್

ಸಿರಿಗೆರೆ, ಆ. 22- ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ರಾಜ್ಯದಲ್ಲಿ ನೆನೆಗುದಿಗೆ ಬಿದ್ದಿರುವ ಎಲ್ಲಾ ನೀರಾವರಿ ಯೋಜನೆಗಳನ್ನು ಆದ್ಯತೆಯ ಮೇಲೆ ಪೂರೈಸಲಾಗುವುದು ಎಂದು ಮಾಜಿ ಸಚಿವ ಹಾಗೂ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ್ ಹೇಳಿದರು.

ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರನ್ನು ಭೇಟಿ ಮಾಡಿ ಆಶೀರ್ವಾದ ಪಡೆಯುವ ಸಲುವಾಗಿ ಆಗಮಿಸಿದ್ದ ಅವರು, ಕಾರ್ಯಕರ್ತರು ಮತ್ತು ಪತ್ರಕರ್ತರೊಂದಿಗೆ ಮಾತನಾಡಿದರು.

ಪೂಜ್ಯ ಶ್ರೀಗಳವರ ಮಾರ್ಗದರ್ಶನದಲ್ಲಿ ಭರಮಸಾಗರ ಮತ್ತು ಜಗಳೂರು ಭಾಗದ ಕೆರೆಗಳಿಗೆ ನೀರು ಈಗಾಗಲೇ ಬಂದಿದೆ. ಈ ಭಾಗದಲ್ಲಿ ಅಂತರ್ ಜಲಮಟ್ಟ ಏರಿಕೆಯಾಗಿರುವುದರಿಂದ ಜನರು ಈಗ ಸಂತೃಪ್ತರಾಗಿದ್ದಾರೆ ಎಂದು ಪಾಟೀಲ್ ಹೇಳಿದರು.

ಗೌರವ ಸದ್ಧರ್ಮ ನ್ಯಾಯಪೀಠದಲ್ಲಿ ಪೂಜ್ಯ ಶ್ರೀಗಳವರಿಗೆ ಗೌರವ ಸಮರ್ಪಿಸಿದ ನಂತರ ರಾಜ್ಯ ಕಾಂಗ್ರೆಸ್ ಪಕ್ಷದ ಪ್ರಚಾರ ಸಮಿತಿಯ ಬಹುದೊಡ್ಡ ಹೊಣೆಗಾರಿಕೆಯನ್ನು ನಿಭಾಯಿಸುವ ಜವಾಬ್ದಾರಿ ನನಗೆ ಬಂದಿದೆ. ತಾವು ಆಶೀರ್ವದಿಸಬೇಕು ಎಂದರು.

ವಿದ್ಯುತ್, ನೀರು ಮತ್ತು ವೈಜ್ಞಾನಿಕ ದರಗಳು ರೈತರಿಗೆ ದೊರೆತರೆ ಅವರ ಬದುಕು ಹಸನಾಗಲಿದೆ ಎಂದು ಶ್ರೀಗಳವರು, ರೈತ ಪರ ಕೆಲಸವನ್ನು ದಶಕಗಳಿಗೂ ಹೆಚ್ಚು ಕಾಲದಿಂದ ಮಾಡಿಕೊಂಡು ಬಂದಿದ್ದಾರೆ. ರಾಜ್ಯದ ಎಲ್ಲಾ ನೀರಾವರಿ ಯೋಜನೆಗಳ ಬಗ್ಗೆ ಅವರಿಗೆ ಕುತೂಹಲವಿದೆ. ನಾನು ಈ ಹಿಂದೆ ಜಲಸಂಪನ್ಮೂಲ ಸಚಿವನಾದ ಸಂದರ್ಭದಿಂದಲೂ ಪೂಜ್ಯರ ಒಡನಾಟದಲ್ಲಿರುವೆ. ಅವರ ಆಶೀರ್ವಾದ ಮತ್ತು ಹಾರೈಕೆ ನನ್ನ ಮೇಲಿದೆ ಎಂದರು.

ಎಂ.ಬಿ. ಪಾಟೀಲರು ರಾಜ್ಯದ ಜಲಸಂಪನ್ಮೂಲದ ಬಗ್ಗೆ ಅತೀವ ಕಾಳಜಿ ಇಟ್ಟುಕೊಂಡಿದ್ದಾರೆ. ಅವರಿಗೆ ರಾಜ್ಯದ ನೀರಾವರಿ ಯೋಜನೆಗಳ ಬಗ್ಗೆ ನಿಖರ ಮತ್ತು ಸ್ಪಷ್ಟವಾದ ಮಾಹಿತಿ ಇದೆ. ಭರಮಸಾಗರ ಕೆರೆ ತುಂಬಿಸುವ ವಿಚಾರದಲ್ಲಿಯೂ ಪಾಟೀಲರು ಆಸಕ್ತಿ ತಳೆದು ಕೆಲಸ ನಿರ್ವಹಿಸಿದ್ದರು ಎಂದು ಶ್ರೀಗಳು ಪಾಟೀಲರ ಬಗ್ಗೆ ಮೆಚ್ಚುಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಮಾಜಿ ಸಚಿವ ಎಚ್. ಆಂಜನೇಯ, ಚಿತ್ರದುರ್ಗ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ತಾಜ್‌ಪೀರ್, ಮಾಜಿ ಶಾಸಕ ಉಮಾಪತಿ, ಬೆಂಗಳೂರು ಮಾಜಿ ಮೇಯರ್ ಪುಟ್ಟರಾಜ್, ಭರಮಸಾಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ದುರ್ಗೇಶ್ ಪೂಜಾರ, ಹೊಳಲ್ಕೆರೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹನುಮಂತಪ್ಪ, ಕಾಂಗ್ರೆಸ್ ಮುಖಂಡರಾದ ನರಸಿಂಹ ಮೂರ್ತಿ, ಎಸ್.ಎಂ.ಎಲ್ ಪ್ರವೀಣ್ ಕುಮಾರ್, ಆರ್. ಕೃಷ್ಣಮೂರ್ತಿ, ಗಂಗಾಧರ, ತಿಪ್ಪೇಸ್ವಾಮಿ, ನಿಖಿಲ್ ಕೊಂಡಜ್ಜಿ, ಎಂ.ಜಿ. ದೇವರಾಜ್, ನಾಗರಾಜ್ ಬೆಲ್ಲದ್ ಸೇರಿದಂತೆ ಕಾರ್ಯಕರ್ತರು, ಅಭಿಮಾನಿಗಳು ಹಾಜರಿದ್ದರು.

## ಅಪಾಯಕಾರಿ ಸರಕು ಸಾಗಣೆ ವಾಹನಗಳಿಗೆ ಟ್ರ್ಯಾಕಿಂಗ್ ಕಡ್ಡಾಯ

ನವದೆಹಲಿ, ಆ. 22 – ಅಪಾಯಕಾರಿ ಸರಕುಗಳನ್ನು ಸಾಗಿಸುವ ವಾಹನಗಳಲ್ಲಿ ಟ್ರ್ಯಾಕಿಂಗ್ ಉಪಕರಣ ಅಳವಡಿಕೆಯನ್ನು ಕಡ್ಡಾಯಗೊಳಿಸಿ ಕೇಂದ್ರ ಸಾರಿಗೆ ಇಲಾಖೆ ಆದೇಶ ಹೊರಡಿಸಿದೆ.

ಹೊಸ ಮಾಡೆಲ್ ವಾಹನಗಳಿಗೆ ಸೆಪ್ಟೆಂಬರ್ 1 ರಿಂದ ಟ್ರ್ಯಾಕಿಂಗ್ ಉಪಕರಣ ಕಡ್ಡಾಯವಾಗಿದೆ. ಹಳೆ ವಾಹನಗಳು 2023ರ ಜನವರಿ 1ರ ಒಳಗೆ ಟ್ರ್ಯಾಕಿಂಗ್ ಉಪಕರಣ ಅಳವಡಿಸಿಕೊಳ್ಳಬೇಕಿದೆ.

ರಾಷ್ಟ್ರೀಯ ಅನುಮತಿ ವ್ಯಾಪ್ತಿಗೆ ಬರದ ಕೆಲ ವಾಹನಗಳು, ಅಪಾಯಕಾರಿ ಸರಕುಗಳನ್ನು ಸಾಗಿಸುತ್ತಿದ್ದರೂ ಸಹ ಟ್ರ್ಯಾಕಿಂಗ್ ಉಪಕರಣ ಹೊಂದಿಲ್ಲ. ಈ ಹಿನ್ನೆಲೆಯಲ್ಲಿ ಕೇಂದ್ರ ಸಾರಿಗೆ ಸಚಿವಾಲಯ ಈ ಆದೇಶ ಹೊರಡಿಸಿದೆ.

ಕೇಂದ್ರ ಸರ್ಕಾರದ ಆದೇಶದ ಅನ್ವಯ ನೈಟ್ರೋಜನ್, ಆಕ್ಸಿಜನ್ ಮತ್ತಿತರೆ ಅಪಾಯಕಾರಿ ಅನಿಲ ಹಾಗೂ ಸರಕುಗಳನ್ನು ಸಾಗಿಸುವ ವಾಹನಗಳಿಗೆ ಟ್ರ್ಯಾಕಿಂಗ್ ಉಪಕರಣ ಕಡ್ಡಾಯವಾಗಿದೆ. ಈ ಉಪಕರಣ ವಾಹನವಿರುವ ಸ್ಥಳ ಪತ್ತೆ ಮಾಡಲು ನೆರವಾಗುತ್ತದೆ.

# ತ್ವರಿತ ಸೇವೆ ಒದಗಿಸಿದರೆ ಹಗುರ ಮಾತಿಲ್ಲ



ಗ್ರಾಮ ವಾಸ್ತವ್ಯದಲ್ಲಿ ಜಿಲ್ಲಾಧಿಕಾರಿ ಶಿವಾನಂದ ಕಪಾಸಿ

ಹರಿಹರ, ಆ.22 - ತಾಲ್ಲೂಕಿನ ವಿವಿಧ ಇಲಾಖೆಗಳ ಅಧಿಕಾರಿಗಳು ಜನತೆಗೆ ತ್ವರಿತ ಗತಿಯಲ್ಲಿ ಸೇವೆ ಒದಗಿಸಿದಾಗ ಸಾರ್ವಜನಿಕರು ಸರ್ಕಾರಿ ಇಲಾಖೆಯ ಬಗ್ಗೆ ಹಗುರವಾಗಿ ಮಾತನಾಡುವುದಿಲ್ಲ ಎಂದು ಜಿಲ್ಲಾಧಿಕಾರಿ ಶಿವಾನಂದ ಕಪಾಸಿ ಹೇಳಿದರು.

ತಾಲ್ಲೂಕಿನ ರಾಮತೀರ್ಥ ಗ್ರಾಮದಲ್ಲಿ ಗ್ರಾಮ ವಾಸ್ತವ್ಯ ಸಭೆಯನ್ನು ಉದ್ಘಾಟನೆ ಮಾಡಿ ಅವರು ಮಾತನಾಡಿದರು. ಸಾರ್ವಜನಿಕರಿಗೆ ಆಧಾರ ಕಾರ್ಡ್, ಪಹಣಿ, ರೇಷನ್ ಕಾರ್ಡ್, ಮೂಲಭೂತ ಸೌಲಭ್ಯ ಸೇರಿದಂತೆ ಸೌಲಭ್ಯಗಳನ್ನು ತ್ವರಿತಗತಿಯಲ್ಲಿ ಕಲ್ಪಿಸಬೇಕು ಎಂದವರು ತಿಳಿಸಿದರು.

ದೇಶವು ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಮನೋವಿಜ್ಞಾನ ಸೇರಿದಂತೆ ಹಲವಾರು ರಂಗಗಳಲ್ಲಿ ಬೆಳವಣಿಗೆ ಕಾಣುತ್ತಿರುವುದರಿಂದ ಅನೇಕ ಸಮಸ್ಯೆಗಳನ್ನು ಎದುರಿಸಲು ಸಾಧ್ಯವಾಗುತ್ತಿದೆ ಎಂದು ಹೇಳಿದರು.

ತಹಶೀಲ್ದಾರ್ ಎಂ. ಬಿ.ಅಶ್ವತ್ಥ್ ಮಾತನಾಡಿ, ಸಾರ್ವಜನಿಕರ ಸಮಸ್ಯೆಗಳಿಗೆ ಸಂಬಂಧಿಸಿದಂತೆ ನೀಡಲಾಗಿರುವ 25ಕ್ಕೂ ಹೆಚ್ಚು ಮನವಿಗಳಿಗೆ ಜಿಲ್ಲಾಧಿಕಾರಿಗಳು ಸ್ಪಂದಿಸಿ ಪರಿಹಾರ ಸೂಚಿಸಿದ್ದಾರೆ. ಗ್ರಾಮದ ಪ್ರತಿಯೊಂದು ಬಡಾವಣೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದ್ದಾರೆ. ಇದರಿಂದ, ಅಧಿಕಾರಿಗಳ ಬಳಿ ತೆರಳಿ ಸಮಸ್ಯೆ ಹೇಳಿಕೊಳ್ಳಲು ಜನರಲ್ಲಿ ಇದ್ದ ಸಮಸ್ಯೆ ಹೋಗಲಾಡಿಸುವ ಕಾರ್ಯ ಮಾಡಲಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಜಲಜೀವನ್ ಯೋಜನೆ ಅಡಿಯಲ್ಲಿ ಗ್ರಾಮದ ಪ್ರತಿಯೊಂದು ಮನೆಗಳಿಗೆ ನೀರಿನ ನಲ್ಲಿಗೆ ಚಾಲನೆ ನೀಡಿದರು. ಇ.ಕೆ.ವೈ.ಸಿ ಬೆಳೆ ಪರಿಹಾರಕ್ಕೆ ಚಾಲನೆ ನೀಡಲಾಯಿತು. ತಾಲ್ಲೂಕಿನ ವಿವಿಧ ಇಲಾಖೆಯ ಅಧಿಕಾರಿ ವರ್ಗದವರು, ಗ್ರಾಮದ ವಿವಿಧ ಕಲಾವಿದರು ಜಿಲ್ಲಾಧಿಕಾರಿಗಳನ್ನು ಅದ್ಧೂರಿಯಾಗಿ ಸ್ವಾಗತಿಸಿದರು.

ಈ ಸಂದರ್ಭದಲ್ಲಿ ತಾ.ಪಂ. ಇ.ಓ. ಗಂಗಾದರನ್, ಬಿಇಓ ಬಿ.ಸಿ. ಸಿದ್ದಪ್ಪ, ಕೃಷಿ ಇಲಾಖೆ ಅಧಿಕಾರಿ ನಾರನಗೌಡ, ತೋಟಗಾರಿಕೆ ಇಲಾಖೆ ರೇಖಾ, ಪಿಡಬ್ಲ್ಯೂಡಿ ಇಲಾಖೆ ಶಿವಮೂರ್ತಿ, ಹಿಂದುಳಿದ ವರ್ಗಗಳ ಇಲಾಖೆ ಪರವೀನ್ ಬಾನು, ಗ್ರಾಮೀಣ ಕುಡಿಯುವ ನೀರು ಇಲಾಖೆ ಅಧಿಕಾರಿ ಬಸವರಾಜಪ್ಪ, ಗ್ರಾಮ ಪಂಚಾಯತಿ ಅಧ್ಯಕ್ಷೆ ಚೈತ್ರ ಲಂಕೇಶ್, ಉಪಾಧ್ಯಕ್ಷೆ ದ್ರಾಕ್ಷಾಯಣಮ್ಮ ನಾಗೇನಹಳ್ಳಿ, ಗ್ರಾಮದ ಮುಖಂಡರಾದ ಹೆಚ್. ಕರಿಬಸಪ್ಪ, ಜಿ ಕರಿಬಸಪ್ಪ, ಜಿ ರುದ್ರೇಶಪ್ಪ ರಾಜು ಗೌಡ್ರು, ವೆಂಕಟೇಶ ರಡ್ಡಿ, ಜಿ ಮಹೇಶ್ವರಪ್ಪ, ದೇವೇಂದ್ರಪ್ಪ ಹೆಚ್. ಮತ್ತಿತರರು ಉಪಸ್ಥಿತರಿದ್ದರು.

## ಸಿದ್ದರಾಮಯ್ಯ ಮೇಲೆ ಮೊಟ್ಟೆ ಎಸೆತ; ರಾಣೇಬೆನ್ನೂರು ಭಾಗಶಃ ಬಂದ್



**(1ನೇ ಪುಟದಿಂದ)** ಅಧ್ಯಕ್ಷ ಷಣ್ಮುಖಪ್ಪ ಕಂಬಳಿ, ಉಣ್ಣೆ ನೂಲಿನ ಗಿರಣಿ ಅಧ್ಯಕ್ಷ ಸಿದ್ದಪ್ಪ ಅಂಬಲಿ, ಎಪಿಎಂಸಿ ಮಾಜಿ ಅಧ್ಯಕ್ಷರಾದ ರುಕ್ಮಿಣಿ ಸಾವುಕಾರ, ಸಣ್ಣತಮ್ಮಪ್ಪ ಬಾರ್ಕಿ, ಜಿಪಂ ಮಾಜಿ ಅಧ್ಯಕ್ಷ ಏಕನಾಥ ಭಾನುವಳ್ಳಿ, ರೈತ ಸಂಘದ ಅಧ್ಯಕ್ಷರುಗಳಾದ ರವಿ ಪಾಟೀಲ, ಹನುಮಂತಪ್ಪ ಕಬ್ಬಾರ, ಮುಖಂಡರುಗಳಾದ ಜಟ್ಟೆಪ್ಪ ಕರೇಗೌಡ, ವೀರನಗೌಡ ಪೋಲೀಸಗೌಡ್ರ,ಕಿರಣ ಮಾಂಡ್ರೆ ಮತ್ತಿತರರು ಸೇರಿದಂತೆ ಪ್ರತಿಭಟನಾಕಾರರ ಸಂಖ್ಯೆ ಸಾವಿರ ದಾಟಿದಂತಿತ್ತು.

ಪ್ರತಿಭಟನಾಕಾರರ ಮೆರವಣಿಗೆ ತೆರಳಿದ ನಂತರ ವರ್ತಕರು ತಮ್ಮ ಅಂಗಡಿ ಮುಂಗಟ್ಟುಗಳನ್ನು ತೆರದಿದ್ದು ರಾಣೇಬೆನ್ನೂರು ಬಂದ್ ಭಾಗಶದಷ್ಟಿತ್ತು. ಅಧಿಕ ಸಂಖ್ಯೆಯಲ್ಲಿದ್ದ ಪೊಲೀಸರು ಸೂಕ್ತ ಬಂದೋಬಸ್ತ್ ಮಾಡಿದ್ದರು.

ಸುಮಾರು ಮೂರು ದಶಕಗಳಷ್ಟು ಕಾಲದಿಂದ ವೈದ್ಯ ವೃತ್ತಿಯಲ್ಲಿ ಬಿಡುವಿಲ್ಲದಷ್ಟು ನಿರತರಾಗಿ ಜಿಲ್ಲೆ, ಹೊರ ಜಿಲ್ಲೆಗಳಲ್ಲಿ ಮಕ್ಕಳ ಡಾಕ್ಟರ್ ಎಂದು ಪ್ರಖ್ಯಾತಿ ಪಡೆದಿದ್ದ ಡಾ. ಪ್ರವೀಣ ಖನ್ನೂರ ಅವರು ಇಂದು ಪ್ರಪ್ರಥಮ ಬಾರಿಗೆ ಸಾರ್ವಜನಿಕವಾಗಿ ಕಾಣಿಸಿಕೊಂಡಿದ್ದು ಮತ್ತು ಪ್ರತಿಭಟನೆಯಲ್ಲಿ ಭಾಗವಹಿಸಿದ್ದು ಆಶ್ಚರ್ಯಕರವಾಗಿತ್ತು. ಖನ್ನೂರ ಅವರು ರಾಜಕೀಯಕ್ಕೆ ಬರಬಹುದು ಎನ್ನುವ ಮಾತುಗಳು ಸಹ ಕೇಳಿಬಂದವು.

## ಮೀಸಲಾತಿ ಹೆಚ್ಚಳಕ್ಕೆ ಸಹಕಾರ

**(1ನೇ ಪುಟದಿಂದ)** ಆರೋಗ್ಯ ವಿಚಾರಿಸಿದರು. ಎಸ್ಟಿ ಸಮುದಾಯದ ಮೀಸಲಾತಿ ಹೆಚ್ಚಳ ಸೇರಿದಂತೆ ನ್ಯಾ. ನಾಗಮೋಹನದಾಸ್ ವರದಿ ಜಾರಿಗೆ ಆಗ್ರಹಿಸಿ, ಪ್ರಸನ್ನಾನಂದ ಸ್ವಾಮೀಜಿ ಯವರು ಧರಣಿ ನಡೆಸುತ್ತಿದ್ದಾರೆ. ಶೇ. 3ರಷ್ಟು ಇರುವ ಎಸ್ಟಿ ಮೀಸಲಾತಿಯನ್ನು ಶೇ. 7.5ರಷ್ಟು ಹೆಚ್ಚಳ ಕುರಿತಂತೆ ಕಾನೂನಾತ್ಮಕವಾಗಿ ಸಹಕಾರ ನೀಡಲು ಸಿದ್ಧ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಸ್ವಾಮೀಜಿ ಅವರಿಗೆ ಭರವಸೆ ನೀಡಿದ್ದಾರೆ.

ಈ ನಡುವೆ ಸಚಿವರು ಸ್ವಾಮೀಜಿ ಅವರ ಬೇಡಿಕೆಗಳನ್ನು ಆಲಿಸಿದರು. ನ್ಯಾ. ನಾಗಮೋಹನದಾಸ್ ವರದಿ ಜಾರಿ ಕುರಿತ ಸ್ವಾಮೀಜಿ ಅವರ ಬೇಡಿಕೆಗೆ ಸ್ಪಂದಿಸಿದ ಕೇಂದ್ರ ಸಚಿವರು, ಈ ನಿಟ್ಟಿನಲ್ಲಿ ಅಗತ್ಯ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಎಸ್ಟಿ ಮೀಸಲಾತಿ ಪ್ರಮಾಣವನ್ನು ಶೇ. 3 ರಿಂದ ಶೇ. 7.5ರಷ್ಟು ಹೆಚ್ಚಿಸಲು ಕೆಲವು ಕಾನೂನಿನ ತೊಡಕುಗಳು ಎದುರಾಗಲಿವೆ. ಕಾನೂನಿನ ಅಡ್ಡಿ ನಿವಾರಣೆ ಮಾಡುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರದ ಮಟ್ಟದಲ್ಲಿ ಸಹಕಾರ ನೀಡುವ ಪ್ರಾಮಾಣಿಕ ಪ್ರಯತ್ನ ನಡೆಸುತ್ತೇನೆ ಎಂದು ಸಚಿವರು ಆಶ್ವಾಸನೆ ನೀಡಿದರು. ಈ ನಡುವೆ, ಧರಣಿ ಕೈ ಬಿಡುವಂತೆ ಸ್ವಾಮೀಜಿ ಅವರಲ್ಲಿ ಸಚಿವ ಪ್ರಹ್ಲಾದ್ ಜೋಶಿ ಮನವಿ ಮಾಡಿದರು, ಕೂಡ್ಲಿಗಿ ತಾಲ್ಲೂಕಿನ ಮುಖಂಡ ಬಂಗಾರು ಹನುಮಂತು, ನಿವೃತ್ತ ಅಧಿಕಾರಿಗಳಾದ ಹರ್ತಿಕೋಟೆ ವೀರೇಂದ್ರ ಸಿಂಹ, ಕೆ.ಎಸ್. ಮೃತ್ಯುಂಜಯ ಸೇರಿದಂತೆ ಇನ್ನೂ ಅನೇಕರು ಈ ವೇಳೆ ಹಾಜರಿದ್ದರು

## ಪೆಂಡಾಲ್‌ಗಳಲ್ಲಿ ಸಾವರ್ಕರ್ ಚಿತ್ರ

**(1ನೇ ಪುಟದಿಂದ)** ಸಂಘಟನೆಗಳು ಗಣೇಶೋತ್ಸವ ಪೆಂಡಾಲ್‌ಗಳಲ್ಲಿ ಸಾವರ್ಕರ್ ಹಾಗೂ ತಿಲಕರ ಚಿತ್ರಗಳ ಅಳವಡಿಕೆಗೆ ನಿರ್ಧರಿಸಿವೆ.

ವೀರ ಸಾವರ್ಕರ್ ಹಾಗೂ ತಿಲಕರ ಚಿತ್ರಗಳನ್ನು ರಾಜ್ಯಾದ್ಯಂತ ಕನಿಷ್ಠ 15 ಸಾವಿರ ಕಡೆ ಅಳವಡಿಸಲು ನಿರ್ಧರಿಸಿದ್ದೇವೆ. ಈ ಇಬ್ಬರು ಸ್ವಾತಂತ್ರ್ಯ ಹೋರಾಟಗಾರರಿಗೆ ಗೌರವಿಸುವುದನ್ನು ಅಭಿಯಾನ ಮಾಡಲು ಉದ್ದೇಶಿಸಿದ್ದೇವೆ ಎಂದು ಶ್ರೀರಾಮ ಸೇನೆಯ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಹೇಳಿದ್ದಾರೆ.

ಹಲವಾರು ಬಿಜೆಪಿ ಶಾಸಕರು ಈ ಅಭಿಯಾನದಲ್ಲಿ ಭಾಗಿಯಾಗಲಿದ್ದಾರೆ. ವಿಶೇಷವಾಗಿ ಬೆಳಗಾವಿ ಶಾಸಕರು ಭಾಗಿಯಾಗಲಿದ್ದಾರೆ ಎಂದು ಮುತಾಲಿಕ್ ಹೇಳಿದ್ದಾರೆ. ಗಣೇಶೋತ್ಸವದ ಪೆಂಡಾಲ್‌ಗಳಲ್ಲಿ ಸಾವರ್ಕರ್ ಚಿತ್ರಗಳನ್ನು ಅಳವಡಿಸಲು ಆಯೋಜಕರು ಸ್ವಯಂ ಪ್ರೇರಿತವಾಗಿ ನಿರ್ಧಾರ ತೆಗೆದುಕೊಂಡಿದ್ದಾರೆ ಎಂದು ಬಿಜೆಪಿ ವಕ್ತಾರ ಎಂ.ಬಿ. ಜೀರಲಿ ಹೇಳಿದ್ದಾರೆ.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಒಬ್ಬಿಬ್ಬರನ್ನು ಬಿಟ್ಟರೆ ಯಾರೂ ವೀರ ಸಾವರ್ಕರ್ ವಿರುದ್ಧವಾಗಿಲ್ಲ ಎಂದು ಜೀರಲಿ ತಿಳಿಸಿದ್ದಾರೆ.

## ಗಣೇಶನ ಹಬ್ಬ: ಗಲಭೆ ಸಲ್ಲ

**(1ನೇ ಪುಟದಿಂದ)** ಯಾವುದೇ ಸಮಾಜಕ್ಕೆ ಹಾನಿಯಾಗಬಾರದು. ಹಬ್ಬವನ್ನು ದುರ್ಬಳಕೆ ಮಾಡಲು ಹೊರಟ ಯುವಕರ ಬಗ್ಗೆ ಮೊದಲೇ ಎಚ್ಚರವಹಿಸಿ.

ಹಿಂದಿನ ವರ್ಷಗಳಲ್ಲಿ ಕೆಲವು ಕಹಿ ಘಟನೆಗಳು ನಡೆದಿವೆ. ಅಂತಹ ಪ್ರದೇಶಗಳನ್ನು ಸೂಕ್ಷ್ಮವೆಂದು ಗುರುತಿಸಿ, ಗಣೇಶೋತ್ಸವ ಅನುಮತಿಗೆ ಪ್ರತ್ಯೇಕ ಕಚೇರಿ ತೆರೆದು ಅಲ್ಲಿ ಪೂರ್ಣ ಮಾಹಿತಿ ಪಡೆದು, ಅನುಮತಿ ನೀಡುವ ಕೆಲಸವಾಗಲಿ ಎಂದಿದೆ. ಇತ್ತೀಚೆಗೆ ಹಿಂದೂ ಯುವಕರನ್ನು ಕೆಲವು ಸಂಘಟನೆಗಳು ಗುರಿಯಿಟ್ಟುಕೊಂಡು ಶಾಂತಿ, ಸುವ್ಯವಸ್ಥೆ ಕದಡುವ ಪ್ರಯತ್ನ ನಡೆದಿದೆ. ಹಬ್ಬದ ಸಡಗರವನ್ನು ಈ ಸಂಘ-ಸಂಸ್ಥೆಗಳು ದುರುಪಯೋಗ ಮಾಡಿಕೊಳ್ಳಬಹುದು. ಎಲ್ಲಿ ಇಂತಹ ಘಟನೆ ನಡೆಯುಬಹುದು ಎಂಬ ಮಾಹಿತಿ ಸಂಗ್ರಹಿಸಿ, ಅಂತಹ ಕಡೆ ಕಠಿಣ ಕ್ರಮ ಕೈಗೊಳ್ಳಿ. ಹಬ್ಬದ ಆಚರಣೆಗೆ ಯಾವುದೇ ಸ್ಥಳೀಯ ಸಂಸ್ಥೆಗಳು ಅಡ್ಡಪಡಿಸುವುದು ಬೇಡ, ಆದರೆ ಕಾನೂನಿನ ಅಡಿಯಲ್ಲಿ ಸಂಘ-ಸಂಸ್ಥೆಗಳು ಗಣೇಶ ಕೂರಿಸುವ ಕೆಲಸ ಮಾಡಲಿ. ಗಣೇಶ ಮೆರವಣಿಗೆಗೂ ಮುನ್ನ ಸ್ಥಳೀಯ ಪೊಲೀಸ್ ಠಾಣೆಯ ಅನುಮತಿ ಪಡೆಯುವುದು ಕಡ್ಡಾಯ ಎಂದು ತಿಳಿಸಲಾಗಿದೆ.

# ಬೇಡ ಜಂಗಮರಿಗೆ ಎಸ್ಸಿ ಮೀಸಲಾತಿ ಪ್ರಮಾಣ ನೀಡಲು ಒತ್ತಾಯ




ಹೊನ್ನಾಳಿ, ಆ.22- ಅಖಿಲ ಕರ್ನಾಟಕ ಬೇಡ ಜಂಗಮ ಸಮಾಜದ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಬಿ.ಡಿ. ಹಿರೇಮಠ ಅವರು ಬೇಡ ಜಂಗಮ ಸಮುದಾಯದ ಬೇಡಿಕೆಗಳನ್ನು ಈಡೇರಿಸುವಂತೆ ನಡೆಸುತ್ತಿರುವ ಸತ್ಯ ಪ್ರತಿಪಾದನಾ ಸತ್ಯಾಗ್ರಹ ಬೆಂಬಲಿಸಿ, ಅಖಿಲ ಕರ್ನಾಟಕ ಬೇಡ ಜಂಗಮ ಸಮಾಜದ ಸಂಘಟನೆಗಳ ಒಕ್ಕೂಟದ ಹೊನ್ನಾಳಿ ತಾಲ್ಲೂಕು ಘಟಕ ಸೋಮವಾರ ಬೇಡಜಂಗಮ ಸಮುದಾಯ ಬಂಧುಗಳು ಧಾರ್ಮಿಕ ಭಿಕ್ಷಾಟನೆಯ ಮೂಲಕ ಪ್ರತಿಭಟನೆ ನಡೆಸಿ ಗ್ರೇಡ್ 2 ತಹಶೀಲ್ದಾರ್ ಸುರೇಶ್ ಅವರಿಗೆ ಮನವಿ ಸಲ್ಲಿಸಿದರು.

ಒಕ್ಕೂಟದ ಹಿರಿಯ ಮುಖಂಡ ಎಚ್. ಎಂ. ಗಂಗಾಧರಯ್ಯ ಮಾತನಾಡಿ, ಬೇಡ ಜಂಗಮರ ಪರಿಶಿಷ್ಟ ಜಾತಿ ಪ್ರಮಾಣ ಪತ್ರದ ಸಮಸ್ಯೆಯನ್ನು ಶೀಘ್ರ ಇತ್ಯರ್ಥಪಡಿಸಬೇಕು. ಡಾ.ಬಿ.ಆರ್.ಅಂಬೇಡ್ಕರ್ ಅವರು ದೇಶಕ್ಕೆ ನೀಡಿರುವ ಸಂವಿಧಾನದಲ್ಲಿ ಈ ಸಮುದಾಯಕ್ಕೆ ನೀಡಿರುವ ಎಸ್ಸಿ ಮೀಸಲಾತಿ ಸೌಲಭ್ಯವನ್ನು ನ್ಯಾಯುತವಾಗಿ ನೀಡಬೇಕು ಎಂದು ಒತ್ತಾಯಿಸಿದರು.

ಬೇಡ ಜಂಗಮ ಒಕ್ಕೂಟದ ಎಂ.ಎಸ್. ಶಾಸ್ತ್ರಿ ಹೊಳೆಮಠ ಮಾತನಾಡಿ, ಈಗಲೂ ಬೇಡ ಜಂಗಮರು ಬೇಡುವ ತಮ್ಮ ವೃತ್ತಿಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಹಳ್ಳಿಗಳಲ್ಲಿ ದಿನ ನಿತ್ಯ ಬೆಳಿಗ್ಗೆ ಕೋರು ಧಾನ್ಯ ಭಿಕ್ಷಾಟನೆ ಮಾಡಿ ದವಸ, ಧಾನ್ಯ ಭಿಕ್ಷೆ ಕೇಳಿದರೆ, ಮಧ್ಯಾಹ್ನದ ವೇಳೆ ಪ್ರಸಾದದ ಭವತೀ ಭಿಕ್ಷಾಂದೇಹಿ ಎಂದು ಮನೆಗಳಿಗೆ ತೆರಳಿ ಭಿಕ್ಷೆ ಬೇಡುತ್ತಾರೆ. ಬೇಡ ಜಂಗಮ ಸಮಾಜಕ್ಕೆ ಎಲ್ಲಾ ಸರ್ಕಾರಗಳು ಸರಿಯಾದ ಅರಿವನ್ನು ಹೊಂದದೆ ಅನ್ಯಾಯ ಮಾಡುತ್ತಾ ಬಂದಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬೇಡ ಜಂಗಮ ಸಮಾಜದ ಮುಖಂಡರುಗಳಾದ ಬಸವರಾಜಯ್ಯ ಕುಳಗಟ್ಟೆ, ಮುರುಗೇಶಯ್ಯ ಕುಳಗಟ್ಟೆ, ಹಾಲಯ್ಯ, ಪ್ರಶಾಂತ್ ಸೇರಿದಂತೆ ಅನೇಕರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

## ನಗರದಲ್ಲಿ 28ರಂದು ಯಕ್ಷಗಾನ ಪ್ರದರ್ಶನ

ದಾವಣಗೆರೆ, ಆ.22- ದಕ್ಷಿಣ ಕನ್ನಡ ಜಿಲ್ಲೆಯ ಶ್ರೀಕ್ಷೇತ್ರ ಕಟೀಲು ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ಮೇಳಗಳ ಆಯ್ದ ಕಲಾವಿದರಿಂದ 'ಶ್ರೀ ಸ್ಯಮಂತಕೋಪಾಖ್ಯಾನ ಹಾಗೂ ಶ್ರೀ ಭಾರ್ಗವ ವಿಜಯ' ಯಕ್ಷಗಾನ ಬಯಲಾಟ ಕಾರ್ಯಕ್ರಮವು ಇದೇ ದಿನಾಂಕ 28 ರ ಭಾನುವಾರ ಸಂಜೆ 6.30 ರಂದು ನಗರದ ವರ್ತುಲ ರಸ್ತೆಯಲ್ಲಿರುವ ಶ್ರೀ ಶಾರದಾಂಬ ದೇವಸ್ಥಾನದ ಹತ್ತಿರದ ಸದ್ಗುರು ಶ್ರೀ ಬ್ರಹ್ಮಚೈತನ್ಯ ಮಂದಿರದಲ್ಲಿ ನಡೆಯುವುದು. ವಿವರಗಳಿಗೆ 98451 45874, 99022 18039 ಗೆ ಸಂಪರ್ಕಿಸುವುದು.

## ಸಿದ್ದರಾಮಯ್ಯ ಮೆಚ್ಚಿಸಲು 'ಗೂಂಡಾ' ಪದ ಬಳಕೆ




**(1ನೇ ಪುಟದಿಂದ)** ಎನ್ನುವ ಸಿದ್ದರಾಮಯ್ಯ ಅವರಿಗೆ ಆ ಪದದ ಅರ್ಥವೇ ಗೊತ್ತಿಲ್ಲ. ಅಲ್ಪಸಂಖ್ಯಾತರ ಮತ ಗಳಿಕೆಗಾಗಿ ನಾನು ಹಿಂದೂ ಧರ್ಮವನ್ನು ಒಪ್ಪುವುದಿಲ್ಲ ಎನ್ನುತ್ತಾರೆ ಎಂದು ಹರೀಶ್ ಆರೋಪಿಸಿದರು.

ಸಿದ್ದರಾಮಯ್ಯ ಅವರು ಮಟನ್, ಚಿಕನ್ ತಿಂದು ಧರ್ಮಸ್ಥಳಕ್ಕೆ ದೇವರ ದರ್ಶನಕ್ಕೆ ತೆರಳಿದ್ದಾರೆ. ಕೊಡಗಿನಲ್ಲಿ ತಮ್ಮ ಪಕ್ಷದ ಕಾರ್ಯಕರ್ತರ ಮನೆಯಲ್ಲಿ ಮಾಂಸ ತಿಂದು ಬಸವೇಶ್ವರ ದೇವಸ್ಥಾನದಲ್ಲಿ ದರ್ಶನ ಮಾಡಿದ್ದಾರೆ. ಅವರಿಗೆ ಹಿಂದೂ ಧರ್ಮದ ಆಚಾರ, ವಿಚಾರಗಳಿಗಿಂತ ಅಲ್ಪಸಂಖ್ಯಾತರ ಓಲೈಕೆಯೇ ಕಾಯಕವಾಗಿದೆ ಎಂದು ಲೇವಡಿ ಮಾಡಿದರು.

ರಾಮಪ್ಪನವರೂ ಸಹ ದೇವಸ್ಥಾನದ ರಸ್ತೆಯ ಬಂಟಿಂಗ್ ಕಟ್ಟುವ ವಿಚಾರದಲ್ಲಿ ಅಲ್ಪಸಂಖ್ಯಾತರ ಪರ ನಿಂತಿದ್ದನ್ನು ಕ್ಷೇತ್ರದ ಜನರು ಮರೆತಿಲ್ಲ.

ದರ್ಗಾ ರಸ್ತೆಯ ವಿಚಾರದಲ್ಲಿ ನನ್ನ ವಿರುದ್ಧ ದೂರುತ್ತಿದ್ದಾರೆ. ನಾನೇನೂ ದರ್ಗಾ ಕಟ್ಟಡ ಒಡೆಯಲು ಹೇಳಿಲ್ಲ. ಸರ್ವೇ ಮಾಡಿ, ಅದರಂತೆ ರಸ್ತೆ ದುರಸ್ತಿ ಮಾಡಿ ಎಂದಿದ್ದೇನೆ. ಆದರೆ, ಸರ್ವೆ ಮಾಡಿಸಿದರೆ ಅಲ್ಪಸಂಖ್ಯಾತರು ತಿರುಗಿ ಬೀಳುತ್ತಾರೆ ಎಂದು ಆ ಕೆಲಸ ಮಾಡಿಸುತ್ತಿಲ್ಲ ಎಂದು ಆರೋಪಿಸಿದರು.

ಸಿದ್ದರಾಮಯ್ಯ ಮೇಲೆ ಮೊಟ್ಟೆ ಎಸೆದಿರುವುದು ಕಾಂಗ್ರೆಸ್ ಪಕ್ಷದ ಸಂಪತ್. ಇದೇ ರೀತಿ ಹಿಂದೂಗಳ ಮೇಲೆ ಆಕ್ರಮಣ, ದೌರ್ಜನ್ಯ, ದಬ್ಬಾಳಿಕೆ ಮಾಡುತ್ತಾ ಸಾಗಿದರೆ ಅವರ ಜೊತೆಗಿರುವ ಕಾಂಗ್ರೆಸ್‌ನ ದೇಶಭಕ್ತ ಕಾರ್ಯಕರ್ತರೇ ರಾಮಪ್ಪ ಅವರ ಮೇಲೆ ಮೊಟ್ಟೆ ಎಸೆದು ಪಾಠ ಕಲಿಸುತ್ತಾರೆ ಎಂದೂ ಎಚ್ಚರಿಸಿದರು.

ಈ ಸಂದರ್ಭದಲ್ಲಿ ನಗರಸಭೆ ಸದಸ್ಯರಾದ ಅಶ್ವಿನಿ ಕೃಷ್ಣ, ವಿಜಯಕುಮಾರ್, ಹನುಮಂತಪ್ಪ, ರಜನಿಕಾಂತ್, ಗ್ರಾಮಾಂತರ ಬಿಜೆಪಿ ಘಟಕದ ಅಧ್ಯಕ್ಷ ಹಿಂಡಸಘಟ್ಟ ಲಿಂಗರಾಜ್, ನಗರ ಘಟಕದ ಅಧ್ಯಕ್ಷ ಅಜಿತ್ ಸಾವಂತ್, ಪ್ರಧಾನ ಕಾರ್ಯದರ್ಶಿ ತುಳಜಪ್ಪ ಭೂತೆ ಮುಖಂಡರಾದ ಬಾತಿ ಚಂದ್ರಶೇಖರ್, ರೂಪಾ ಕಾಟ್ವೆ, ಹೆಚ್.ಎಸ್. ರಾಘವೇಂದ್ರ, ರಾಜು ರೋಖಡೆ, ಸುನಿಲ್, ಸುರೇಶ್ ಚಂದಾಪೂರ್, ಸುರೇಶ್ ತೆರದಾಳ, ಮಹಾಂತೇಶ್, ಮತ್ತಿತರರು ಹಾಜರಿದ್ದರು.

## ಬಾಳೆ ಬೆಳೆ ತಂತ್ರಜ್ಞಾನ ಪ್ರಸಾರಕ್ಕೆ ಅತ್ಯುತ್ತಮ ಪ್ರಶಸ್ತಿ



**(1ನೇ ಪುಟದಿಂದ)** ಬಿ.ಓ. ಮತ್ತು ಡಾ.ಸುಪ್ರಿಯಾ ಪಿ. ಪಾಟೀಲ್ ತಜ್ಞರುಗಳು ಸಲಹೆ, ಸೂಚನೆ, ಮಾರ್ಗದರ್ಶನವನ್ನು ರೈತರಿಗೆ ನೀಡುತ್ತಾ ಬಂದಿದ್ದಾರೆ. ಬಾಳೆಯಲ್ಲಿ 29.7 ಪ್ರತಿಶತ ಅಧಿಕ ಇಳುವರಿಯನ್ನು ರೈತರು ಗಳಿಸಲು ಈ ಮೂಲಕ ಕೆವಿಕೆ ಸಹಾಯ ಮಾಡಿದೆ. ವಾರ್ಷಿಕ ಸರಾಸರಿ 485 ರೈತರುಗಳಿಗೆ ಬಾಳೆ ಬೆಳೆ ತಾಂತ್ರಿಕ ಸಲಹೆ, ಸೂಚನೆಗಳನ್ನು ನೀಡಲಾಗುತ್ತಿದೆ.

2010 ರಿಂದ ಬನಾನ ಸ್ಪೆಷಲ್ ಲಘು ಪೋಷಕಾಂಶಗಳ ಮಿಶ್ರಣ ಐಐಹೆಚ್‌ಆರ್ ತಂತ್ರಜ್ಞಾನವನ್ನು ರೈತರಿಗೆ ಕೆವಿಕೆಯು ಒದಗಿಸುತ್ತಿದೆ. ಅಂಗಾಂಶ ಕೃಷಿ ಪದ್ಧತಿಯಲ್ಲಿ ಬೆಳೆದ ಗುಣಮಟ್ಟದ ಬಾಳೆ ಸಸಿಗಳನ್ನು ರೈತರಿಗೆ ಒದಗಿಸಲು ಸಂಪರ್ಕ ಸೇತುವಾಗಿ ಕೆವಿಕೆಯು ಕಾರ್ಯ ನಿರ್ವಹಿಸಿದೆ. ಸುರಕ್ಷಿತ ಮಾಗಿಸುವಿಕೆ ತಂತ್ರಜ್ಞಾನವನ್ನು ರೈತರಿಗೆ ಹಾಗೂ ವ್ಯಾಪಾರಸ್ಥರಿಗೆ ತರಬೇತಿ ಮುಖಾಂತರ ಪರಿಚಯಿಸಲಾಗಿದೆ.

ಬಲಿತ ಬಾಳೆಕಾಯಿ ಪುಡಿಯಿಂದ ವೈವಿಧ್ಯಮಯ ಉತ್ಪನ್ನಗಳನ್ನು ತಯಾರಿಸಬಹುದೆಂದು ತರಬೇತಿಗಳ ಮುಖಾಂತರ ರೈತರಿಗೆ ಹಾಗೂ ರೈತ ಮಹಿಳೆಯರಿಗೆ ತಿಳಿಸಿಕೊಡಲಾಗುತ್ತಿದೆ. ಈ ವಿಚಾರದಲ್ಲಿ ದೇಶದಲ್ಲೇ ಪ್ರಥಮ ಬಾರಿಗೆ ಅಂತರ್ಜಾಲದ ಮೂಲಕ ವೈಜ್ಞಾನಿಕ ವಿಚಾರ ಸಂಕಿರಣವನ್ನು ಏರ್ಪಡಿಸಿದ ಹೆಗ್ಗಳಿಕೆ ಐಸಿಎಆರ್-ತರಳಬಾಳು ಕೆವಿಕೆಯದ್ದಾಗಿದೆ. ಈಗಾಗಲೇ ಕೆಲವು ಉದ್ಯಮಶಾಲಿ ರೈತರಿಗೆ ಬಾಳೆ ಕಾಯಿ ಪುಡಿ ಉತ್ಪನ್ನಗಳ ತಯಾರಿಕೆ ವಿಚಾರದಲ್ಲಿ ಉತ್ತೇಜನ ನೀಡಿ ಪ್ರೋತ್ಸಾಹಿಸಲಾಗುತ್ತಿದೆ.

ಈ ಎಲ್ಲಾ ಕಾರ್ಯಚಟುವಟಿಕೆಗಳನ್ನು ಗುರುತಿಸಿ ರಾಷ್ಟ್ರೀಯ ಪ್ರಶಸ್ತಿಯನ್ನು ಐಸಿಎಆರ್-ತರಳಬಾಳು ಕೆವಿಕೆಗೆ ನೀಡಲಾಗಿದೆ. ಈ ಸಾಧನೆಗೆ ಕಾರಣೀಭೂತರಾದ ತರಳಬಾಳು ಜಗದ್ಗುರು ಶ್ರೀ ಡಾ।। ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿಗೆ ಕೆವಿಕೆ ತಂಡ ಭಕ್ತಿ ಪೂರ್ವಕ ಧನ್ಯವಾದ ಸಲ್ಲಿಸಿದೆ.

## ಐ.ಬಿ.ಪಿ.ಎಸ್ ಬ್ಯಾಂಕ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ

ದಾವಣಗೆರೆ, ಆ.22- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕರಾಮುವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಐ.ಬಿ.ಪಿ.ಎಸ್ ರಾಷ್ಟ್ರೀಕೃತ ಬ್ಯಾಂಕ್‌ನವರು ಅಧಿಕಾರಿಗಳ ಮತ್ತು ಗುಮಾಸ್ತರ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 45 ದಿನಗಳ ತರಬೇತಿಯನ್ನು ನೀಡಲಾಗುತ್ತದೆ.

ಆಸಕ್ತರು ಇದೇ ದಿನಾಂಕ 29 ರೊಳಗಾಗಿ ಹೆಸರು ನೋದಾಯಿಸಿಕೊಳ್ಳಲು ದೂರವಾಣಿ: 0821-2515944 ಸಂಖ್ಯೆಯನ್ನು ಸಂಪರ್ಕಿಸಬಹುದೆಂದು ಕರಾಮುವಿ ಪ್ರಭಾರ ಕುಲಸಚಿವ ಡಾ. ಎ. ಖಾದರ್ ಪಾಷ ಅವರು ತಿಳಿಸಿದ್ದಾರೆ.

## ಶ್ರೀಮತಿ ಮೋತಿ ಮುತ್ತಮ್ಮ ನಿಧನ



ದಾವಣಗೆರೆ, ಗಂಗನಕಟ್ಟೆ ಗ್ರಾಮದ ವಾಸಿ
**ಯಾಜಮಾನ್ ಮೋತಿ**
**ದಿ. ಎಂ.ಎಸ್. ಶಿವಪ್ಪ**
(ನಿವೃತ್ತ ಕೃಷಿ ಅಧಿಕಾರಿಗಳು)
ಇವರ ಧರ್ಮಪತ್ನಿ
**ಶ್ರೀಮತಿ ಮೋತಿ ಮುತ್ತಮ್ಮ**
ಇವರು ದಿನಾಂಕ 22.8.2022ರ ಸೋಮವಾರ ಬೆಳಿಗ್ಗೆ 11.00 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ 71 ವರ್ಷ ವಯಸ್ಸಾಗಿತ್ತು. ಮೂವರು ಪುತ್ರರು, ಮೂವರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 23.8.2022ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಗಂಗನಕಟ್ಟೆ ಗ್ರಾಮದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ - 94825 35748, 99860 94605**

## ಬಸವನಾಳ್ ಗೊಲ್ಲರಹಟ್ಟಿ ಪರಮೇಶ್ವರಪ್ಪ ನಿಧನ



ದಾವಣಗೆರೆ ತಾಲ್ಲೂಕು ಬಸವನಾಳ್ ಗೊಲ್ಲರಹಟ್ಟಿ ಗ್ರಾಮದ ವಾಸಿ ಕಾಡಜ್ಜಿ ಬಿ.ಕೆ ಪರಮೇಶ್ವರಪ್ಪ(70) ಇವರು ದಿನಾಂಕ 22.8.2022ರ ಸೋಮವಾರ ಮಧ್ಯಾಹ್ನ 2 ಗಂಟೆಗೆ ನಿಧನರಾದರು. ಪತ್ನಿ, ಆರು ಜನ ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 23.8.2022 ರ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಮೃತರ ಸ್ವಗ್ರಾಮವಾದ ಬಸವನಾಳ್ ಗೊಲ್ಲರಹಟ್ಟಿಯ ಮೃತರ ಸ್ವಂತ ಜಮೀನಿನಲ್ಲಿ ನೆರವೇರಲಿದೆ.

## ಆನೆಕೊಂಡ ಕೃಷ್ಣಮೂರ್ತಿ (ಕಿಟ್ಟಿ) ನಿಧನ



ದಾವಣಗೆರೆ ತಾಲ್ಲೂಕು ಆನೆಕೊಂಡ ಗ್ರಾಮದ ವಾಸಿ ಕೃಷ್ಣಮೂರ್ತಿ (ಕಿಟ್ಟಿ) (45) ಇವರು ದಿನಾಂಕ 22.8.2022ರ ಸೋಮವಾರ ರಾತ್ರಿ 8 ಗಂಟೆಗೆ ನಿಧನರಾದರು. ತಾಯಿ, ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಸಹೋದರರು, ಸಹೋದರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 23.8.2022 ರ ಮಂಗಳವಾರ ಮಧ್ಯಾಹ್ನ 3 ಗಂಟೆಗೆ ಮೃತರ ಸ್ವಗ್ರಾಮವಾದ ಆನೆಕೊಂಡ ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಲಿದೆ.

## ಹರಿಹರ : ನೀಲಗುಂದ ಶಿವಾನಂದ ನಿಧನ



ಹರಿಹರ, ಆ. 22- ನಗರದ ಹೊಸ ಭರಂಪುರ ಬಡಾವಣೆಯ ನೀಲಗುಂದ ಶಿವಾನಂದ (ಬಿಜೆಪಿ ಶಿವಣ್ಣ) ಅವರು ಇಂದು ಸಂಜೆ 4 ಗಂಟೆಗೆ ಹೃದಯಾಘಾತದಿಂದ ನಿಧನರಾಗಿದ್ದಾರೆ.

ಶಿವಾನಂದ, ತಾಲ್ಲೂಕು ಬಿಜೆಪಿ ಮಾಜಿ ಅಧ್ಯಕ್ಷ ದಿ. ಬಿಜೆಪಿ ವೀರಣ್ಣನವರ ಸಹೋದರ.

ಮಾಜಿ ಶಾಸಕರಾದ ಹೆಚ್.ಎಸ್. ಶಿವಶಂಕರ್, ಬಿ.ಪಿ. ಹರೀಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ ಮತ್ತಿತರರು ಮೃತರ ಮನೆಗೆ ತೆರಳಿ ಸಂತಾಪ ಸೂಚಿಸಿದರು.

## ಸಿಎಂ ಮಾಧ್ಯಮ ಸಂಯೋಜಕ ಗುರುಲಿಂಗ ಸ್ವಾಮಿ ನಿಧನ



ಬೆಂಗಳೂರು, ಆ. 22 - ಹಿರಿಯ ಪತ್ರಕರ್ತ, ಮುಖ್ಯಮಂತ್ರಿಯವರ ಮಾಧ್ಯಮ ಸಂಯೋಜಕ ಹೆಚ್.ಬಿ. ಗುರುಲಿಂಗಸ್ವಾಮಿ ಹೊಳಿಮಠ ಹೃದಯಘಾತದಿಂದ ನಿಧನ ಹೊಂದಿದ್ದಾರೆ. ಅವರಿಗೆ 45 ವರ್ಷ ವಯಸ್ಸಾಗಿತ್ತು.

ಜಿಮ್‌ನಲ್ಲಿ ವ್ಯಾಯಾಮ ಮಾಡುತ್ತಿದ್ದ ವೇಳೆ ಅವರಿಗೆ ಎದೆನೋವು ಕಾಣಿಸಿಕೊಂ ಡಿತ್ತು. ಅವರನ್ನು ತಕ್ಷಣವೇ ಖಾಸಗಿ ಆಸ್ಪತ್ರೆಗೆ ಕರೆಯೊಯ್ಯಲಾಯಿತು. ಆದರೆ, ಮಾರ್ಗ ಮಧ್ಯದಲ್ಲೇ ಅವರು ಕೊನೆಯುಸಿರೆಳೆದಿದ್ದಾರೆ. ಮುದ್ರಣ ಮಾಧ್ಯಮ ಹಾಗೂ ವಾಹಿನಿಗಳಲ್ಲಿ ಎರಡು ದಶಕಗಳ ಕಾಲ ಕಾರ್ಯನಿರ್ವಹಿಸಿದ್ದ ಗುರು ಲಿಂಗ ಸ್ವಾಮಿ ಅವರು ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಗುರುಲಿಂಗಸ್ವಾಮಿ ಅವರ ಅಕಾಲಿಕ ನಿಧನದಿಂದ ಪತ್ರಿಕೋದ್ಯಮಕ್ಕೆ ಹಾಗೂ ವೈಯಕ್ತಿಕವಾಗಿಯೂ ನಷ್ಟವಾಗಿದೆ ಎಂದು ಮುಖ್ಯಮಂತ್ರಿ ಬೊಮ್ಮಾಯಿ ತಿಳಿಸಿದ್ದಾರೆ.

ಅವರು ಸಮಾಜಕ್ಕೆ ಒಳಿತು ಮಾಡುವ ಸಾಮಾಜಿಕ ಜವಾಬ್ದಾರಿಯ ಪತ್ರಕರ್ತರಾಗಿದ್ದರು. ಸದಾ ಕಾಲ ಪರರಿಗೆ ಸಹಾಯ ಮಾಡುತ್ತಿದ್ದರು. ಪ್ರತಿ ದಿನ 2-3 ಜನರಿಗೆ ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ಸಹಾಯ ಒದಗಿಸುತ್ತಿದ್ದರು ಎಂದು ಬೊಮ್ಮಾಯಿ ತಿಳಿಸಿದ್ದಾರೆ.

## ಇಂದು ದಿಶಾ ಸಮಿತಿ ಸಭೆ

ಸಂಸದ ಜಿ.ಎಂ.ಸಿದ್ದೇಶ್ವರ ಅವರ ಅಧ್ಯಕ್ಷತೆಯಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯಿತಿಯ ಮುಖ್ಯ ಸಭಾಂಗಣದಲ್ಲಿ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿಯ ಸಭೆ ನಡೆಯಲಿದೆ.

# ದೇವಿಕೆರೆ ಪಿಎಸಿಎಸ್‌ನಲ್ಲಿ ಭ್ರಷ್ಟಾಚಾರ

## ಆಡಳಿತಾಧಿಕಾರಿ, ಕ್ಷೇತ್ರಾಧಿಕಾರಿಗಳಿಂದ ಅವ್ಯವಹಾರ: ಅಧ್ಯಕ್ಷರ ಆರೋಪ



ಜಗಳೂರು, ಆ. 22- ತಾಲ್ಲೂಕಿನ ದೇವಿಕೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಆಡಳಿತಾಧಿಕಾರಿ ಹಾಗೂ ಕ್ಷೇತ್ರ ಅಧಿಕಾರಿಗಳು ಸೊಸೈಟಿ ಸೂಪರ್ ಸೀಡ್ ಮಾಡಿದ ಆರು ತಿಂಗಳ ಅವಧಿಯಲ್ಲಿ ಲಕ್ಷಾಂತರ ರೂಪಾಯಿ ಅವ್ಯವಹಾರ ನಡೆಸಿ ಸೊಸೈಟಿಯನ್ನು ಮುಚ್ಚುವ ಹಂತಕ್ಕೆ ತಂದಿದ್ದಾರೆ ಎಂದು ಹಾಲಿ ಅಧ್ಯಕ್ಷ ಬಸಾಪುರ ರವಿಚಂದ್ರ ಆರೋಪಿಸಿದ್ದಾರೆ.

ಪಟ್ಟಣದ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ಸೊಸೈಟಿಯಲ್ಲಿ 2500 ಜನ ಸದಸ್ಯರಿದ್ದು, ಇದರಲ್ಲಿ 1479 ಜನ ಸದಸ್ಯರು ಮಾತ್ರ ಜಮೀನು ಹೊಂದಿರುತ್ತಾರೆ. ಉಳಿದವರು ಯಶಸ್ವಿನಿ ಯೋಜನೆಯಡಿ ಸದಸ್ಯತ್ವ ಹೊಂದಿರುತ್ತಾರೆ. ಈ ಪೈಕಿ ನಮ್ಮ ಆಡಳಿತಾವಧಿಯಲ್ಲಿ 468 ಜನರಿಗೆ ಮಾತ್ರ ನಾವು ಸಾಲ ಸೌಲಭ್ಯ ನೀಡಲಾಗಿತ್ತು. ಆದರೆ ರಾಜಕೀಯ ದುರುದ್ದೇಶದಿಂದ ಕ್ಷೇತ್ರಾಧಿಕಾರಿ ಹಾಲಸ್ವಾಮಿ ಅವರು ಸೊಸೈಟಿಯಲ್ಲಿ ಹೆಚ್ಚಿನ ರೈತರಿಗೆ ಸಾಲ ನೀಡಿಲ್ಲ ಮತ್ತು ವೈದ್ಯನಾಥನ್ ವರದಿಯ ಅನ್ವಯ ನೀಡಲಾಗಿದ್ದ 58.98 ಲಕ್ಷ ರೂ. ಅನುದಾನವನ್ನು ರೈತರಿಗೆ ತಲುಪಿಸಲಿಲ್ಲ ಎಂದು ಆರೋಪಿಸಿ, ನಮ್ಮ ಸೊಸೈಟಿಯನ್ನು ಸೂಪರ್ ಸೀಡ್ ಮಾಡಲು ವರದಿ ನೀಡಿದ್ದರು. ಅದರನ್ವಯ ಸಹಕಾರ ಸಂಘಗಳ ನಿಬಂಧಕರು ನಮಗೆ ಯಾವುದೇ ನೋಟಿಸ್ ನೀಡದೆ, ವಿಚಾರಣೆ ನಡೆಸದೆ ರಾಜಕೀಯ ಒತ್ತಡಕ್ಕೆ ಮಣಿದು ನಮ್ಮ ಸೊಸೈಟಿಯನ್ನು ಸೂಪರ್ ಸೀಡ್ ಮಾಡಿದ್ದರು. ಇದರ ವಿರುದ್ಧ ನಾವು ಆರು ತಿಂಗಳ ಕಾಲ ನ್ಯಾಯಾಲಯದಲ್ಲಿ ಹೋರಾಡಿ ತಡೆಯಾಜ್ಞೆ ತಂದು ಅಧಿಕಾರ ವಹಿಸಿ ಕೊಂಡಿರುತ್ತೇವೆ. ಸೂಪರ್ ಸೀಡ್ ಆದ ಆರು ತಿಂಗಳ ಅವಧಿಯಲ್ಲಿ ಆಡಳಿತಾಧಿಕಾರಿ, ಕ್ಷೇತ್ರಾಧಿಕಾರಿ ಮತ್ತು ಕಾರ್ಯದರ್ಶಿ ಈ ಮೂರೂ ಜನ ಅಕ್ರಮ ವ್ಯವಹಾರ ನಡೆಸಿ, ರೈತರಿಗೆ ಅನ್ಯಾಯವೆಸಗಿದ್ದಾರೆ ಎಂದು ದೂರಿದರು.

ವೈದ್ಯನಾಥನ್ ವರದಿಯನ್ವಯ ನೀಡಲಾದ ಅನುದಾನವನ್ನು ಬ್ಯಾಂಕಿನಲ್ಲಿ ಡೆಪಾಸಿಟ್ ಮಾಡಲಾಗಿದೆ. ಯಾವುದೇ ದುರುಪಯೋಗ ವಾಗಿಲ್ಲ. ನಿಯಮಾನುಸಾರ ನಾವು 468 ಜನರಿಗೆ ಸಾಲ ನೀಡಿರುತ್ತೇವೆ. ಆದರೆ ಆಡಳಿತಾಧಿಕಾರಿಗಳು 219 ಜನ ಸದಸ್ಯರಿಗೆ ಹೆಚ್ಚುವರಿ ಸಾಲ ಮಂಜೂರಾತಿ ಮಾಡಿ, ಸುಸ್ತಿದಾರರನ್ನಾಗಿ ಮಾಡಿದ್ದಾರೆ. ಸುಮಾರು 2 ಕೋಟಿಗೂ ಹೆಚ್ಚು ಸಾಲ ಮಂಜೂರು ಮಾಡಿರುತ್ತಾರೆ. ಇವರೂ ಸಹ ಯಾವುದೇ ಹೊಸ ರೈತರಿಗೆ ಸಾಲ ನೀಡದೆ ಸಾಲ ಪಡೆದವರಿಗೆ ಸಾಲ ನೀಡಿ ಅಕ್ರಮ ಎಸಗಿದ್ದಾರೆ ಎಂದು ಆರೋಪಿಸಿದ್ದರು.

ಮೆದಿಕೇರನಹಳ್ಳಿ ಒಂದೇ ಗ್ರಾಮದ ಸುಮಾರು 187 ರೈತ ಸದಸ್ಯರಿಗೆ ಬೇಬಾಕಿ ಪಡೆಯದೇ ಅಕ್ರಮವಾಗಿ ಸಾಲ ನೀಡಿರುತ್ತಾರೆ. ಎರಡನೇ ಹಂತದಲ್ಲಿ ಸುಮಾರು 60 ಜನ ರೈತರಿಗೆ 70 ಲಕ್ಷ ರೂ. ಸಾಲ ನವೀಕರಣಕ್ಕೆ ಕ್ಷೇತ್ರ ಅಧಿಕಾರಿಗಳು ಸಹಿ ಮಾಡದೆ ರೈತರನ್ನು ಸುಸ್ತಿದಾರರನ್ನಾಗಿಸಲು ಹೊರಟಿದ್ದಾರೆ. ಸಂಘ ನೀಡಿದ ಸಾಲದ ಮೊತ್ತದಲ್ಲಿ 15 ಲಕ್ಷಕ್ಕೂ ಹೆಚ್ಚು ಷೇರು ಸಂಗ್ರಹ ಮೊತ್ತ ಹಾಗೂ ಶೇಕಡ 2ರೂ. ಬಡ್ಡಿ ಮಾರ್ಜಿನ್ ಹಣ 5 ಲಕ್ಷ ರೂ ಹಣವನ್ನು ಕ್ಷೇತ್ರ ಅಧಿಕಾರಿ ಮತ್ತು ಆಡಳಿತಾಧಿಕಾರಿ ಗಳು ಬಿಡಿಸಿಕೊಂಡು ಅಕ್ರಮ ಎಸಗಿದ್ದಾರೆ ಎಂದು ರವಿಚಂದ್ರ ಗುರುತರ ಆರೋಪ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಸೊಸೈಟಿ ಉಪಾಧ್ಯಕ್ಷ ಮಂಜಣ್ಣ, ಸದಸ್ಯರಾದ ಶ್ರೀಮತಿ ಕೊಟ್ರಮ್ಮ ಶಿವಣ್ಣ, ಅನಸೂಯಮ್ಮ, ಗ್ರಾಮ ಪಂಚಾಯತಿ ಸದಸ್ಯ ನಾಗರಾಜು, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಕೋಡೆ ಪ್ರಕಾಶ್, ಎಪಿಎಂಸಿ ಮಾಜಿ ಅಧ್ಯಕ್ಷ ಎಲ್.ಬಿ. ಭೈರೇಶ್, ಕಾಂಗ್ರೆಸ್ ಮುಖಂಡ ಗಿರೀಶ್ ಒಡೆಯರ್, ಬಳ್ಳಾರಿ ನಾಗರಾಜ್, ಶಿವಣ್ಣ ಮುಂತಾದವರು ಉಪಸ್ಥಿತರಿದ್ದರು.

# ಸಿರಿಗೆರೆಯಲ್ಲಿ ಕಾಶಿ ಮಹಾಲಿಂಗಸ್ವಾಮಿಗಳ ಪರವು

(1ನೇ ಪುಟದಿಂದ) ಸ್ವಾಮೀಜಿ ನಗರ ಎಂದು ನಾಮಕರಣ ಮಾಡಿ ತರಳಬಾಳು ಶ್ರೀಗಳು ಉದ್ಘಾಟಿಸಿದರು.

ಲಾಡು, ಪಾಯಸ, ಅನ್ನ ಸಾಂಬಾರ್, ಪಲ್ಯ ಇನ್ನು ಮುಂತಾದ ತಿನಿಸುಗಳನ್ನು ಭಕ್ತರು ಸವಿದು ಸಂಭ್ರಮಿಸಿದರು. ಕಾಶಿ ಮಹಾಲಿಂಗಸ್ವಾಮಿಗಳವರ ಗದ್ದುಗೆಗೆ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಯವರು ಪುಷ್ಪಾರ್ಚನೆ ಮಾಡಿದರು.

# ಎಲ್ಲಾ ಕಾನೂನುಗಳ ತಾಯಿ ಸಂವಿಧಾನ



ಹರಪನಹಳ್ಳಿ, ಆ. 22- ಎಲ್ಲಾ ಕಾನೂನುಗಳ ತಾಯಿ ಸಂವಿಧಾನ. ಅಂಬೇಡ್ಕರ್ ಬರೆದಂತಹ ಸಂವಿಧಾನವನ್ನು ಪ್ರತಿಯೊಬ್ಬರೂ ಓದಿ ತಿಳಿದುಕೊಳ್ಳಬೇಕು ಎಂದು ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಹೆಚ್. ಎನ್. ನಾಗಮೋಹನ್ ದಾಸ್ ಹೇಳಿದರು.

ಪಟ್ಟಣದ ವಕೀಲರ ಸಂಘದಲ್ಲಿ ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ ಇವರುಗಳ ಸಂಯುಕ್ತಾಶ್ರಯದಲ್ಲಿ ಹೈಕೋರ್ಟ್‌ನ ಮುಖ್ಯ ನ್ಯಾಯಾಮೂರ್ತಿಗಳಾದ ಹೆಚ್.ಎನ್. ನಾಗಮೋಹನ್ ದಾಸ್ ರವರಿಗೆ ಏರ್ಪಡಿಸಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ, ವಕೀಲರನ್ನು ಉದ್ದೇಶಿಸಿ ಅವರು ಮಾತನಾಡುತ್ತಿದ್ದರು.

ನಾವು-ನೀವು ಕಾನೂನುಗಳ ತಾಯಿ ಸಂವಿಧಾನವನ್ನು ಓದಿ ಅರ್ಥ ಮಾಡಿಕೊಂಡು ಸಮಾಜವನ್ನು ತಿದ್ದುವಂತಹ ಕೆಲಸವನ್ನು ನಾವು ಮಾಡಬೇಕಾಗಿದೆ. ನ್ಯಾಯಾಲಯದಲ್ಲಿ ವಕೀಲರುಗಳ ಮತ್ತು ನ್ಯಾಯಾಧೀಶರುಗಳ ನಡುವಿನ ಸಂಬಂಧ ಪರಸ್ಪರ ಪ್ರೀತಿ, ವಿಶ್ವಾಸದ ನಂಬಿಕೆಯಂತಿರಬೇಕು. ವಕೀಲರುಗಳು ಮತ್ತು ನ್ಯಾಯಾಧೀಶರುಗಳ ಮೇಲೆ ನಂಬಿಕೆ ಇರಬೇಕು. ನ್ಯಾಯಾಧೀಶರು ವಕೀಲರುಗಳ ಮೇಲೆ ಆತ್ಮವಿಶ್ವಾಸ ಇರಬೇಕು. ಆಗ ಮಾತ್ರ ಕಕ್ಷಿದಾರರಿಗೆ ನ್ಯಾಯ ದೊರಕುವಂತಾಗುತ್ತದೆ ಎಂದರು.

ಹಿರಿಯ ಸಿವಿಲ್ ನ್ಯಾಯಾಧೀಶರಾದ ಎಂ. ಭಾರತಿ ಮಾತನಾಡಿ, ಸಮಾಜದಲ್ಲಿ ಕಾನೂನು ತಿಳುವಳಿಕೆ ಇಲ್ಲದೇ ಇರುವ ಸಾರ್ವಜನಿಕರಿಗೆ ತಾಲ್ಲೂಕು ಕಾನೂನು ಸೇವಾ ಪ್ರಾಧಿಕಾರದ ಮೂಲಕ ಅರಿವು ಮೂಡಿಸುವಂತಹ ಕಾರ್ಯವನ್ನು ನಾವು-ನೀವು ಎಲ್ಲರೂ ಕೂಡಿ ಜಾಗೃತಿ ಮೂಡಿಸಬೇಕಾಗಿದೆ. ನಮಗೆ ಸ್ವತಂತ್ರವಾಗಿ ಮಾತನಾಡುವ

**ಹರಪನಹಳ್ಳಿಯಲ್ಲಿ ನ್ಯಾ. ನಾಗಮೋಹನ್ ದಾಸ್**

ಹಕ್ಕನ್ನು ನೀಡಿದ ಮಹನೀಯರನ್ನು ನಾವು ನೆನೆಯಬೇಕಾಗಿದೆ ಎಂದರು.

ಈ ಸಂದರ್ಭದಲ್ಲಿ ಕಿರಿಯ ಸಿವಿಲ್ ನ್ಯಾಯಾಧೀಶರಾದ ಫಕ್ಕೀರವ್ವ ಕೆಳಗೇರಿ, ವಕೀಲರ ಸಂಘದ ಅಧ್ಯಕ್ಷ ಕೆ. ಜಗಪ್ಪ, ಕಾರ್ಯದರ್ಶಿ ಎಸ್.ಜಿ.ತಿಪ್ಪೇಸ್ವಾಮಿ, ಅಪರ ಸರ್ಕಾರಿ ವಕೀಲ ವಿ.ಜಿ. ಪ್ರಕಾಶ್ ಗೌಡ, ಜಂಟಿ ಕಾರ್ಯದರ್ಶಿ ಎಂ. ನಾಗೇಂದ್ರಪ್ಪ, ಖಜಾಂಚಿ ಹುಲಿಯಪ್ಪ, ವಕೀಲರಾದ ಬಿ. ಕೃಷ್ಣಮೂರ್ತಿ, ಗಂಗಾಧರ ಗುರುಮಠ್, ಕೆ. ಚಂದ್ರಗೌಡ್ರು, ಕೋಡಿಹಳ್ಳಿ ಪ್ರಕಾಶ್, ಬಿ. ರೇವನಗೌಡ, ಎಸ್.ಎಂ. ರುದ್ರಮುನಿ, ಆರ್. ರಾಮನಗೌಡ್ರು, ಕೆ. ಬಸವರಾಜ್, ಪಿ. ಜಗದೀಶ್ ಗೌಡ್ರು, ಟಿ. ವೆಂಕಟೇಶ್, ಟಿ.ಎಂ. ಮಂಜುನಾಥ್, ಕೆ. ದ್ರಾಕ್ಷಾಯಣಮ್ಮ, ಜೆ. ಸೀಮಾ, ರೇಣುಕಾ ಮೇಟಿ, ಬಿ. ಗೋಣಿಬಸಪ್ಪ, ಬಿ.ವಿ. ಬಸವನಗೌಡ, ಎಂ. ಮೃತ್ಯುಂಜಯ, ಮುತ್ತಿಗಿ ಮಂಜುನಾಥ್, ಕೆ.ಎಸ್. ಮಂಜ್ಯಾನಾಯ್ಕ, ಕೆ. ನಾಗರಾಜ್, ಬಿ. ಹಾಲೇಶ್ ಕೆ. ಸುರೇಶ್, ಸಿ. ದೇವರಾಜ್, ವಾಮದೇವ ಉಪಸ್ಥಿತರಿದ್ದರು.

# ಪದವಿ ರಹಿತ ಪರಿಣಿತರು ಉಪನ್ಯಾಸಕ ಹುದ್ದೆಗೆ

(1ನೇ ಪುಟದಿಂದ) ಸೈನ್ಯ ಸೇರಿದಂತೆ ಹಲವಾರು ವಲಯಗಳ ಅರ್ಹರನ್ನು ನೇಮಕ ಮಾಡಿಕೊಳ್ಳಲಾಗುವುದು.

ನಿರ್ದಿಷ್ಟ ವಲಯದಲ್ಲಿ ಕನಿಷ್ಠ 15 ವರ್ಷಗಳ ಸೇವೆ ಇಲ್ಲವೇ ಅನುಭವ ಹೊಂದಿರುವವರನ್ನು ಉಪನ್ಯಾಸಕರಾಗಿ ನೇಮಕ ಮಾಡಿಕೊಳ್ಳಲಾಗುವುದು. ಇಂತಹ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳುವಾಗ ಔಪಚಾರಿಕ ಶಿಕ್ಷಣದ ಅರ್ಹತೆ ಅಗತ್ಯ ಇರುವುದಿಲ್ಲ ಎಂದು ಯು.ಜಿ.ಸಿ. ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ. ಆದರೆ, ಈ ಹುದ್ದೆಗಳಿಗೆ ನೇಮಕಗೊಳ್ಳುವವರು ತಮ್ಮ ಕರ್ತವ್ಯ ಹಾಗೂ ಹೊಣೆಗಾರಿಕೆಗಳನ್ನು ನಿರ್ವಹಿಸಲು ಅಗತ್ಯ ಕೌಶಲ್ಯ ಹೊಂದಿರಬೇಕು ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

ಕೈಗಾರಿಕೆಗಳಿಂದ ಅನುದಾನ ಪಡೆಯುವ ವೃತ್ತಿಪರ ಉಪನ್ಯಾಸಕರು, ಸ್ವಂತ ಸಂಪನ್ಮೂಲದಿಂದ ಕಾರ್ಯ ನಿರ್ವಹಿಸುವ ವೃತ್ತಿಪರ ಉಪನ್ಯಾಸಕರು ಹಾಗೂ ಗೌರವದ ಆಧಾರದ ಮೇಲೆ ಕಾರ್ಯ ನಿರ್ವಹಿಸುವ ವೃತ್ತಿಪರ ಉಪನ್ಯಾಸಕರು ಎಂಬ ಮೂರು ವರ್ಗಗಳಲ್ಲಿ ನೇಮಕಾತಿ ನಡೆಯಲಿದೆ.ಇವರ ಸೇವಾ ಅವಧಿ ನಿಶ್ಚಿತ ಅವಧಿಯದ್ದಾಗಿರಲಿದೆ. ಇದರಿಂದಾಗಿ ಪೂರ್ಣಕಾಲಿಕವಾಗಿ ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗಳ ಮೇಲೆ ಯಾವುದೇ ಪರಿಣಾಮವಾಗುವುದಿಲ್ಲ. ಉಪನ್ಯಾಸಕರ ಹುದ್ದೆಯಲ್ಲಿದ್ದವರು, ಇಲ್ಲವೇ ನಿವೃತ್ತರು ಈ ಹುದ್ದೆಗಳಿಗೆ ಬರುವಂತಿಲ್ಲ.

ಸಂಸ್ಥೆ ಹಾಗೂ ಪರಿಣಿತರ ನಡುವೆ ಒಪ್ಪಂದದ ಮೂಲಕ ಅವರ ನೇಮಕಾತಿಗೆ ಹಣ ಪಾವತಿಸಲಾಗುವುದು. ಆರಂಭಿಕ ಅವಧಿಯಲ್ಲಿ ಒಂದು ವರ್ಷಕ್ಕೆ ನೇಮಕ ಮಾಡಿಕೊಳ್ಳಲಾಗುವುದು. ನಂತರ ಸೇವಾ ಅವಧಿ ವಿಸ್ತರಣೆ ಬಗ್ಗೆ ನಿರ್ಧರಿಸಲಾಗುವುದು ಎಂದು ತಿಳಿಸಲಾಗಿದೆ. ಉದ್ಯಮ ಹಾಗೂ ಶೈಕ್ಷಣಿಕ ವಲಯಗಳ ನಡುವಿನ ಸಹಭಾಗಿತ್ವ ಹೆಚ್ಚಿಸಲು ಈ ಕ್ರಮ ನೆರವಾಗಲಿದೆ ಎಂದು ಯು.ಜಿ.ಸಿ. ತಿಳಿಸಿದೆ.

## ಬಿಇ : ಭೂಮಿಕಾ ಪ್ರಥಮ ವಿದ್ಯಾಶ್ರೀ ದ್ವಿತೀಯ





ರಾಣೇಬೆನ್ನೂರು, ಆ.22- ಇಲ್ಲಿನ ಶ್ರೀ ತರಳಬಾಳು ಜಗದ್ಗುರು ತಾಂತ್ರಿಕ ಮಹಾವಿದ್ಯಾಲಯದ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ವಿಭಾಗದ ಅಂತಿಮ ವರ್ಷದ ಬಿಇ ಫಲಿತಾಂಶ ಶೇ.100 ಪಡೆದಿದ್ದು, ಎಸ್.ಭೂಮಿಕಾ ಪ್ರಥಮ ಹಾಗೂ ವಿದ್ಯಾಶ್ರೀ ಕುಂಬಾರ್ ದ್ವಿತೀಯ ಟಾಪರ್ ಆಗಿರುತ್ತಾರೆ ಎಂದು ಪ್ರಾಂಶುಪಾಲ ಡಾ.ಬಿ. ಶಿವಕುಮಾರ್ ಹಾಗೂ ವಿಭಾಗದ ಮುಖ್ಯಸ್ಥ ಡಾ.ಬಿ. ಮಹೇಶ್ವರಪ್ಪ ತಿಳಿಸಿ, ಅಭಿನಂದಿಸಿದ್ದಾರೆ.

## ನಗರದಲ್ಲಿ ಇಂದು ರೈತರಿಗೆ ಪಶುಸಂಗೋಪನಾ ಚಟುವಟಿಕೆ ತರಬೇತಿ

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ವತಿಯಿಂದ ಪಶು ಆಸ್ಪತ್ರೆ ಆವರಣದಲ್ಲಿರುವ ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ರೈತರಿಗೆ ಪಶುಸಂಗೋಪನಾ ಚಟುವಟಿಕೆ ಕುರಿತು ತರಬೇತಿ ಶಿಬಿರ ನಡೆಯಲಿದೆ. ಇಂದಿನಿಂದ ಇದೇ ದಿನಾಂಕ 30 ರವರೆಗೆ ಕುರಿ ಮತ್ತು ಮೇಕೆ ಸಾಕಾಣಿಕೆ ಬಗ್ಗೆ ತರಬೇತಿ, ಆಧುನಿಕ ಹೈನುಗಾರಿಕೆ ಬಗ್ಗೆ ತರಬೇತಿ ಕಾರ್ಯಕ್ರಮದಲ್ಲಿ ತಲಾ 25 ಜನರಿಗೆ ತರಬೇತಿ ನೀಡುವ ಗುರಿ ಹೊಂದಲಾಗಿದೆ. ವಿವರಕ್ಕೆ ದೂರವಾಣಿ 08192-233787 ಗೆ ಸಂಪರ್ಕಿಸಬಹುದಾಗಿದೆ ಎಂದು (ಆಡಳಿತ) ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದ ಮುಖ್ಯ ಪಶುವೈದ್ಯಾಧಿಕಾರಿಗಳು ತಿಳಿಸಿದ್ದಾರೆ.

# ಅಕ್ಷರದ ಜೊತೆ ಮಾನವೀಯತೆ ಬೆಳೆಸುವುದು ಸಂತ ಪೌಲರ ಸಂಸ್ಥೆ : ಡಾ. ಫ್ರಾನ್ಸಿಸ್

ದಾವಣಗೆರೆ, ಆ. 22- ಅಕ್ಷರ ಜ್ಞಾನದ ಜೊತೆ ಮಾನವೀಯತೆಯನ್ನು ಬೆಳೆಸುವ ಕೆಲಸವನ್ನು ಸಂತ ಪೌಲರ ಸಂಸ್ಥೆ ಮಾಡುತ್ತಿದೆ ಎಂದು ಶಿವಮೊಗ್ಗ ಧರ್ಮಾಧ್ಯಕ್ಷರಾದ ಡಾ. ಫ್ರಾನ್ಸಿಸ್ ಸೆರಾವೊ ಎಸ್.ಜೆ. ಹೇಳಿದರು.

ಭಾನುವಾರ ಇಲ್ಲಿನ ಸಂತ ಪೌಲರ ವಿದ್ಯಾ ಸಂಸ್ಥೆಯ ಅಮೃತ ಮಹೋತ್ಸವ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಸಾಮಾನ್ಯವಾಗಿ ಎಲ್ಲಾ ಶಿಕ್ಷಣ ಸಂಸ್ಥಗಳು ಅಕ್ಷರ ಜ್ಞಾನ ನೀಡುತ್ತವೆ. ಅದರೊಟ್ಟಿಗೆ ವ್ಯಕ್ತಿಯನ್ನು ಮಾನವನನ್ನಾಗಿಯೂ ಮಾಡಬೇಕಿದೆ. ಆ ಕೆಲಸವನ್ನು ಈ ಸಂಸ್ಥೆ ಮಾಡುತ್ತಿದೆ ಎಂದರು.

ಒಬ್ಬ ಮನುಷ್ಯನಿಗೆ ತನ್ನ ನೋವು ತನಗೆ ತಿಳಿದರೆ ಆತ ಜೀವಂತವಾಗಿದ್ದಾನೆ ಎಂದರ್ಥ. ಅದೇ ರೀತಿ ಪರರ ನೋವು ತಿಳಿದರೆ ಮನುಷ್ಯನಾಗುತ್ತಾನೆ. ಪರರ ನೋವಿಗೆ ಸ್ಪಂದಿಸಿ ಅವರ ಜೀವನಕ್ಕೆ ಹೊಸ ತಿರುವು ನೀಡಿದರೆ ಮನುಷ್ಯನಾಗುತ್ತಾನೆ ಎಂದು ವಿಶ್ಲೇಷಿಸಿದರು.

ಮನುಷ್ಯ ಹಾಗೂ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ಜ್ಯುಬಿಲಿಗಳು ಇವೆ. ಮನುಷ್ಯರಿಗೆ 50 ವರ್ಷಗಳಾದರೆ ಶಕ್ತಿ ಕಡಿಮೆಯಾಗುತ್ತದೆ. 75 ವರ್ಷಗಳಾದರೆ ಅದೇ ಕೊನೆಯ ಜ್ಯುಬಿಲಿಯಾಗುತ್ತದೆ. ಆದರೆ ವರ್ಷಗಳು ಕಳೆದಂತೆ ಸಂಸ್ಥೆ ಗಟ್ಟಿಯಾಗುತ್ತವೆ. 100 ವರ್ಷಗಳು ಆಯಿತು ಎಂದರೆ ಈ ಸಂಸ್ಥೆ ಮುಳುಗುವುದಿಲ್ಲ ಎಂದು ವ್ಯಾಖ್ಯಾನಿಸಿದರು.

ಶಾಸಕ ಎಸ್.ಎ. ರವೀಂದ್ರನಾಥ್ ಮಾತನಾಡಿ, ಈ ಹಿಂದೆ ವೈದ್ಯರು, ಎಂಜಿನಿಯರ್‌ಗಳು ಮಾತ್ರ ತಮ್ಮ ಮಕ್ಕಳನ್ನು ಪ್ರತಿಷ್ಠಿತ ಶಾಲೆಗಳಿಗೆ ಕಳುಹಿಸುತ್ತಿದ್ದರು. ಆದರೆ ಈಗ ಸಾಮಾನ್ಯರೂ ಸಹ ತಮ್ಮ ಮಕ್ಕಳನ್ನು ಕಾನ್ವೆಂಟ್‌ಗಳಲ್ಲಿ ಓದಿಸುತ್ತಿದ್ದಾರೆ. ಈ ಶಾಲೆಯ ಮೊದಲ ಕಾನ್ವೆಂಟ್ ಶಾಲೆ ಎಂದರೆ ತಪ್ಪಾಗಲಾರದು. ದಾವಣಗೆರೆಯಲ್ಲಿ ಶಿಕ್ಷಣ ಸಂಸ್ಥೆಗಳನ್ನು ಚೆನ್ನಾಗಿ ನಡೆಸುತ್ತಿರುವುದನ್ನು ನೋಡಿದರೆ. ದೇಶ ವಿದೇಶಗಳಲ್ಲಿ ಈ ಶಾಲೆಯಲ್ಲಿ ಓದಿದವರು ನೌಕರಿಯಲ್ಲಿ ಇದ್ದಾರೆ ಎಂಬುದು ಸಂತೋಷದ ಸಂಗತಿ ಎಂದರು.

ಮಾಜಿ ಶಾಸಕ ಬಿ.ಪಿ. ಹರೀಶ್, ಕರ್ನಾಟಕ ಪ್ರಾಂತ್ಯಾಧಿಕಾರಿಣಿ ಸಿಸ್ಟರ್ ಬರ್ನಿಸ್, ಸಿಸ್ಟರ್ ಆಲ್ಬಿನಾ, ಸಿಸ್ಟರ್ ಸಮಂತ ಫಾದರ್ ಆಂತೋಣಿ ಪೀಟರ್, ಮೇಯರ್ ಜಯಮ್ಮ ಗೋಪಿನಾಯ್ಕ, ಮಾಜಿ ಮೇಯರ್ ಬಿ.ಜಿ. ಅಜಯ್‌ಕುಮಾರ್, ಮಹಾನಗರ ಪಾಲಿಕೆ ಆಯುಕ್ತ ವಿಶ್ವನಾಥ್ ಮುದಜ್ಜಿ, ಬಿಇಒ ನಿರಂಜನ್ ಮೂರ್ತಿ, ಶಾಲೆಯ ಹಳೆಯ ವಿದ್ಯಾರ್ಥಿಗಳಾದ ದಿನೇಶ್ ಕೆ.ಶೆಟ್ಟಿ, ಜಯಮ್ಮ ಎಚ್.ಸಿ. ಇದ್ದರು.



# ಅಮಿತ್ ಷಾ - ಜೂ. ಎನ್‌ಟಿಆರ್ ಭೇಟಿ

**ರಾಜಕೀಯಕ್ಕೆ ಬರಲು ಜನಪ್ರಿಯ ನಟನಿಗೆ ಆಹ್ವಾನ**



ಅಮರಾವತಿ, ಆ. 22 – ಬಿಜೆಪಿ ಹಿರಿಯ ನಾಯಕ ಹಾಗೂ ಕೇಂದ್ರ ಸಚಿವ ಅಮಿತ್ ಷಾ ಅವರು ತೆಲುಗಿನ ಜನಪ್ರಿಯ ನಟ ಜ್ಯೂನಿಯರ್ ಎನ್. ಟಿ.ಆರ್. ಭೇಟಿ ಮಾಡಿದ್ದು, ರಾಜಕೀಯಕ್ಕೆ ಬರುವಂತೆ ಸಲಹೆ ನೀಡಿದ್ದಾರೆ ಎನ್ನಲಾಗಿದೆ. ಈ ಬೆಳವಣಿಗೆ ಆಂಧ್ರ ಪ್ರದೇಶ ಹಾಗೂ ತೆಲಂಗಾಣದಲ್ಲಿ ಸಂಚಲನ ಮೂಡಿಸಿದೆ.

ರಾಜಕೀಯಕ್ಕೆ ಬರುವಂತೆ ಷಾ ಅವರು ಜೂ. ಎನ್.ಟಿ.ಆರ್.ಗೆ ಸ್ಪಷ್ಟವಾಗಿ ಕೇಳಿದ್ದಾರೆ. ಈ ಬಗ್ಗೆ ಪರಿಶೀಲಿಸುವುದಾಗಿ ಎನ್.ಟಿ.ಆರ್. ತಿಳಿಸಿದ್ದಾರೆ ಎಂದು ಬಿಜೆಪಿ ಹಿರಿಯ ನಾಯಕರು ತಿಳಿಸಿದ್ದಾರೆ. ತೆಲಂಗಾಣ ಹಾಗೂ ಆಂಧ್ರ ಪ್ರದೇಶಗಳಲ್ಲಿ ಬೇರು ಬಿಡಲು ಬಿಜೆಪಿ ತೀವ್ರ ಯತ್ನ ನಡೆಸುತ್ತಿದೆ. ಜೂ. ಎನ್. ಟಿ.ಆರ್. ಜನಪ್ರಿಯತೆಯನ್ನು ಇದಕ್ಕಾಗಿ ಬಳಸಿಕೊಳ್ಳಲು ಬಿಜೆಪಿ ಉದ್ದೇಶಿಸಿದೆ.

ಜೂ. ಎನ್.ಟಿ.ಆರ್. ಅವರು ಒಂದು ಸಮಯದಲ್ಲಿ ಟಿ.ಡಿ.ಪಿ. ಪಕ್ಷದಲ್ಲಿ ಸಕ್ರಿಯರಾಗಿದ್ದರು. ಆದರೆ, ಪಕ್ಷದ ಹಿರಿಯ ನಾಯಕ ಚಂದ್ರಬಾಬು ನಾಯ್ಡು ಅವರ ಮಗ ನಾರಾ ಲೋಕೇಶ್ ರಾಜಕೀಯ ವೇದಿಕೆಗೆ ಬಂದ ನಂತರ ಎನ್.ಟಿ.ಆರ್. ಹಿಂದೆ ಸರಿದಿದ್ದರು.

ರಾಜಕೀಯವನ್ನು ಪ್ರಮುಖ ಉದ್ದೇಶವಾಗಿಟ್ಟುಕೊಂಡೇ ಅಮಿತ್ ಷಾ ಅವರು ಎನ್.ಟಿ.ಆರ್. ಭೇಟಿ ಮಾಡಿದ್ದರು ಎಂದು ಬಿಜೆಪಿ ಮೂಲಗಳು ತಿಳಿಸಿವೆ.

# ದೇವರುಗಳು ಮೇಲ್ಜಾತಿಗೆ ಸೇರಿದವರಲ್ಲ : ಕುಲಪತಿ

ನವದೆಹಲಿ, ಆ. 22- ಮಾನವ ಶಾಸ್ತ್ರ ದೃಷ್ಟಿಯಿಂದ ನೋಡುವುದಾದರೆ ದೇವರುಗಳು ಮೇಲ್ಜಾತಿಗೆ ಸೇರಿಲ್ಲ ಎಂದು ಜೆ.ಎನ್.ಯು. ಕುಲಪತಿ ಶಾಂತಿಶ್ರೀ ಧುಲಿಪುಡಿ ಪಂಡಿತ್ ಅಭಿಪ್ರಾಯ ಪಟ್ಟಿದ್ದಾರೆ.

ಡಾ. ಬಿ.ಆರ್. ಅಂಬೇಡ್ಕರ್ ಉಪನ್ಯಾಸ ಸರಣಿಯಲ್ಲಿ ಪಾಲ್ಗೊಂಡು ಮಾತನಾಡುತ್ತಿದ್ದ ಅವರು, ಶಿವ ದೇವರು ಸಹ ಪರಿಶಿಷ್ಟ ಜಾತಿ ಇಲ್ಲವೇ ಪಂಗಡದಿಂದ ಬಂದವರು ಇರಬೇಕು ಎಂದಿದ್ದಾರೆ.

ಮನುಸ್ಮೃತಿಯ ಪ್ರಕಾರ ಎಲ್ಲಾ ಮಹಿಳೆಯರು ಶೂದ್ರರೇ ಆಗಿದ್ದಾರೆ. ಹೀಗಾಗಿ ಯಾವುದೇ ಮಹಿಳೆ ಜನ್ಮತಃ ಬ್ರಾಹ್ಮಣ ಇಲ್ಲವೇ ಇನ್ಯಾವುದೇ ಜಾತಿಗೆ ಸೇರಿರುವುದಿಲ್ಲ. ತಂದೆ ಇಲ್ಲವೇ ಪತಿಯಿಂದ ಮಾತ್ರ ಜಾತಿ ಪಡೆಯಲಾಗುತ್ತದೆ. ಇದು ಪ್ರತಿಗಾಮಿ ವಿಚಾರ ಎಂದವರು ಹೇಳಿದ್ದಾರೆ. ಮಾನವಶಾಸ್ತ್ರ ದೃಷ್ಟಿಯಿಂದ ದೇವರುಗಳನ್ನು ನೋಡಬೇಕು. ಯಾವುದೇ ದೇವರು ಬ್ರಾಹ್ಮಣ ಆಗಿಲ್ಲ. ಅತಿ ಹೆಚ್ಚೆಂದರೆ ಕ್ಷತ್ರಿಯ ಆಗಿರಬಹುದು. ಶಿವ ದೇವರು ಸಹ ಪರಿಶಿಷ್ಟ ಜಾತಿ ಇಲ್ಲವೇ ಪಂಗಡಕ್ಕೆ ಸೇರಿದವರಾಗಿರಬೇಕು. ಅವರು ರುದ್ರ ಭೂಮಿಯಲ್ಲಿ ಕುತ್ತಿಗೆಗೆ ಹಾವು ಸುತ್ತಿಕೊಂಡಿದ್ದಾರೆ ಮತ್ತು ಉಡುವ ಬಟ್ಟೆ ಕಡಿಮೆ ಇದೆ. ಯಾವುದೇ ಬ್ರಾಹ್ಮಣ ಈ ರೀತಿ ರುದ್ರಭೂಮಿಯಲ್ಲಿ ಇರುವುದಿಲ್ಲ ಎಂದೂ ಅವರು ಹೇಳಿದ್ದಾರೆ.'ಕುಲಪತಿ' ಹುದ್ದೆಯ ಹೆಸರನ್ನು 'ಕುಲಗುರು' ಎಂದು ಬದಲಿಸಲು ಪರಿಶೀಲಿಸಲಾಗುತ್ತಿದೆ. ಇದರಿಂದಾಗಿ ಈ ಹುದ್ದೆ ಲಿಂಗ ತಟಸ್ಥವಾಗಲಿದೆ ಎಂದವರು ಇದೇ ಸಂದರ್ಭದಲ್ಲಿ ತಿಳಿಸಿದ್ದಾರೆ.

ಈ ಬಗ್ಗೆ ಸೆಪ್ಟೆಂಬರ್ 14ರಂದು ನಡೆಯಲಿರುವ ಕಾರ್ಯಕಾರಿ ಮಂಡಳಿಯಲ್ಲಿ ಚರ್ಚಿಸಲಾಗುವುದು ಎಂದವರು ತಿಳಿಸಿದ್ದಾರೆ.

# ರಾಜ್ಯದಲ್ಲಿ ರಾಹುಲ್ ನೇತೃತ್ವದಲ್ಲಿ ಬೃಹತ್ ಪಾದಯಾತ್ರೆ : ಡಿಕೆಶಿ

**21 ದಿನಗಳ ಕಾಲ 510 ಕಿ.ಮೀ. ಉದ್ದಕ್ಕೆ ಭಾರತ್ ಜೋಡೋ ಯಾತ್ರೆ**

ಬೆಂಗಳೂರು, ಆ. 22 - ರಾಹುಲ್ ಗಾಂಧಿ ಅವರ ಭಾರತ್ ಜೋಡೋ ಪಾದಯಾತ್ರೆ ರಾಜ್ಯದಲ್ಲಿ 510 ಕಿಲೋ ಮೀಟರ್ ದೂರ 21 ದಿನಗಳ ಕಾಲ ಪಾದಯಾತ್ರೆ ನಡೆಯಲಿದೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್, ರಾಜ್ಯದಲ್ಲಿನ ಪಾದಯಾತ್ರೆಯ ಉಸ್ತುವಾರಿಯನ್ನು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಅವರಿಗೆ ನೀಡಲಾಗಿದೆ. ಜಿಲ್ಲಾ ನಾಯಕರಿಗೆ ಕೆಲ ಜವಾಬ್ದಾರಿ ವಹಿಸಲಾಗಿದೆ ಎಂದರು.

ಕೆಲವು ಕಡೆ ಅರಣ್ಯ ಪ್ರದೇಶವಿದ್ದು, ಅಲ್ಲಿ ನಡೆಯಬೇಕೇ ಬೇಡವೇ ಎಂಬ ವಿಚಾರವಾಗಿ ಸ್ಥಳೀಯ ಪೊಲೀಸರ ಜತೆ ಚರ್ಚಿಸಿ, ದೆಹಲಿಯ ತಂಡ ತೀರ್ಮಾನಿಸಲಿದೆ. ನಮ್ಮ ರಾಷ್ಟ್ರೀಯ ನಾಯಕರು ಇದರಲ್ಲಿ ಭಾಗವಹಿಸಲಿದ್ದು, ರಾಜ್ಯದ ಮಾಹಿತಿಯನ್ನು ಶೀಘ್ರದಲ್ಲಿ ತಿಳಿಸುತ್ತೇವೆ. ರಾಜ್ಯದಲ್ಲಿ 8 ಜಿಲ್ಲೆಗಳ ಮೂಲಕ ಈ ಪಾದಯಾತ್ರೆ ಸಾಗಲಿದೆ ಎಂದರು.

ಬಳ್ಳಾರಿ ಹೊರತಾಗಿ ಚಿತ್ರದುರ್ಗ, ತುಮಕೂರು, ಮಂಡ್ಯ, ಚಾಮರಾಜನಗರ, ಮೈಸೂರು ಜಿಲ್ಲೆಗಳ ಮಾರ್ಗವನ್ನು ಖುದ್ದಾಗಿ ನೋಡಿದ್ದೇನೆ. ಇಡೀ ರಾಜ್ಯದ ಕಾರ್ಯಕರ್ತರು ಹಾಗೂ ಮುಖಂಡರು ಹೆಜ್ಜೆ ಹಾಕಲಿದ್ದಾರೆ.

ಭಾರತವನ್ನು ಒಗ್ಗೂಡಿಸಲು, ಶಾಂತಿ, ಸೌಹಾರ್ದತೆ ಸ್ಥಾಪಿಸಿ, ಜನರ ಸಮಸ್ಯೆಯನ್ನು ಚರ್ಚೆ ಮಾಡಲು ದೇಶದಾದ್ಯಂತ ಸುಮಾರು 600ಕ್ಕೂ ಹೆಚ್ಚು ಕಾಂಗ್ರೆಸ್ ನಾಯಕರು ಸೇರಿ ಚರ್ಚೆ ಮಾಡಿದ್ದಾರೆ. ಅದರಂತೆ ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆಗಾಗಿ ಪ್ರತಿ ಜಿಲ್ಲೆಯಲ್ಲಿ 75 ಕಿ.ಮೀ. ಪಾದಯಾತ್ರೆ ಮಾಡಬೇಕು ಎಂಬ ಸೂಚನೆ ನೀಡಲಾಗಿತ್ತು. ಆದರೆ ನಮ್ಮ ನಾಯಕರು ಜಿಲ್ಲೆಯಲ್ಲಿ ಅಲ್ಲ, ಕ್ಷೇತ್ರದಲ್ಲೇ 200 ಕಿ.ಮೀ. ದೂರ ಪಾದಯಾತ್ರೆ ಮಾಡಿದ್ದಾರೆ ಎಂದು ಹೇಳಿದರು.

ಜಿಲ್ಲಾ ಮಟ್ಟದ ಪಾದಯಾತ್ರೆ ಅವಧಿಯನ್ನು ಆಗಸ್ಟ್ 30 ರವರೆಗೆ ವಿಸ್ತರಣೆ ಮಾಡಲಾಗಿದೆ. ಈ ಕಾರ್ಯಕ್ರಮಕ್ಕೆ ಜನರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗು ತ್ತಿದ್ದು, ನಾವು ಜನರ ಸಮಸ್ಯೆಯನ್ನು ಆಲಿಸುತ್ತಿದ್ದೇವೆ ಎಂದು ಶಿವಕುಮಾರ್ ಹೇಳಿದ್ದಾರೆ.

**ಕರ್ತವ್ಯ ಮಾಡಿದರೆ ಮೊಟ್ಟೆ ಎಸೆಯುತ್ತೇವೆ ಎನ್ನುವುದು ಸರಿಯಲ್ಲ :** ಕೊಡಗಿನಲ್ಲಿ ಸಿದ್ದರಾಮಯ್ಯ ಮೇಲೆ ಮೊಟ್ಟೆ ಎಸೆದ ಪ್ರಕರಣದ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ ಅವರು ಕೇವಲ ಒಬ್ಬ ನಾಯಕರಲ್ಲ, ಅವರಿಗೆ ಸಂವಿಧಾನದ ಮೂಲಕ ವಿರೋಧ ಪಕ್ಷದ ನಾಯಕರ ಜವಾಬ್ದಾರಿ ನೀಡಲಾಗಿದೆ. ಹಳ್ಳಿಗಳಿಗೆ, ನೆರೆ ಪ್ರದೇಶಕ್ಕೆ ಹೋಗಿ ಜನರಿಗೆ ಧ್ವನಿಯಾಗುವುದು ಅವರ ಕರ್ತವ್ಯ. ಆ ಕರ್ತವ್ಯ ಮಾಡಬಾರದು, ಮಾಡಿದರೆ ಕಪ್ಪು ಬಾವುಟ ಪ್ರದರ್ಶಿಸುತ್ತೇನೆ, ಮೊಟ್ಟೆ ಹೊಡೆಯುತ್ತೇವೆ ಎನ್ನುವುದು ಸರಿಯಲ್ಲ ಎಂದರು.

ಶಿವಮೊಗ್ಗ ಜಿಲ್ಲೆಗೆ ಬಂಡವಾಳ ಹೂಡಿಕೆದಾರರು ಬರುತ್ತಿದ್ದಾರಾ? ಕೊಡಗು ಭಾಗದಲ್ಲಿ ಪ್ರತಿ ವರ್ಷ ಮಳೆಗಾಲದಲ್ಲಿ ಆಸ್ತಿ ನಾಶವಾಗುತ್ತಿದೆ. ಈ ಭಾಗಗಳ ಅಭಿವೃದ್ಧಿ ಬಗ್ಗೆ ಸರ್ಕಾರ ಚರ್ಚೆ ಮಾಡಲಿ. ಸರ್ಕಾರಿ ಶಾಲೆಗಳನ್ನು ಮಾರಾಟಕ್ಕೆ ಇಡಲಾಗಿದೆ ಈ ವಿಷಯಗಳ ಬಗ್ಗೆ ಚರ್ಚೆಯಾಗಬಾರದೇ? ಎಂದು ಶಿವಕುಮಾರ್ ಪ್ರಶ್ನಿಸಿದರು. ಒಂದು ವರ್ಗಕ್ಕೆ ಪರಿಹಾರ ನೀಡಿ ಮತ್ತೊಂದು ವರ್ಗಕ್ಕೆ ನೀಡದೇ ಅವರನ್ನು ಪ್ರಚೋದನೆ ಮಾಡುತ್ತಿದೆ. ಆ ಮೂಲಕ ರಾಜ್ಯದ ಶಾಂತಿ, ಗೌರವವನ್ನು ಹರಾಜು ಹಾಕಲಾಗುತ್ತಿದೆ ಎಂದವರು ಹೇಳಿದರು.

ಬೆಂಗಳೂರಿನಲ್ಲಿ ದೇಶ ಹಾಗೂ ವಿದೇಶಗಳಿಂದ ಬಂದಿರುವ ಜನರು ಕೆಲಸ ಮಾಡುತ್ತಿದ್ದಾರೆ. ವರ್ಷಕ್ಕೆ 11 ಲಕ್ಷ ಜನ ಉದ್ಯೋಗ, ಶಿಕ್ಷಣ, ಪ್ರವಾಸಕ್ಕಾಗಿ ಬರುತ್ತಿದ್ದಾರೆ. ನಮ್ಮಲ್ಲಿರುವ ಸಿರಿ ಸಂಪತ್ತನ್ನು ರಾಜಕೀಯಕ್ಕಾಗಿ ಹಾಳು ಮಾಡುತ್ತಿದ್ದೀರಿ ಎಂದು ಶಿವಕುಮಾರ್ ಅಸಮಾಧಾನ ವ್ಯಕ್ತಪಡಿಸಿದರು.

## ಭಾರತ್ ಜೋಡೋ ನನಗೆ ತಪಸ್ಸಿನಂತೆ : ರಾಹುಲ್



ನವದೆಹಲಿ, ಆ. 22 – ಭಾರತ್ ಜೋಡೋ ಯಾತ್ರೆ ನನಗೆ ತಪಸ್ಸಿನಂತೆ ಎಂದಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ದೇಶವನ್ನು ಒಗ್ಗೂಡಿಸಲು ಸುದೀರ್ಘ ಹೋರಾಟಕ್ಕೆ ಸಿದ್ಧವಿರುವುದಾಗಿ ಹೇಳಿದ್ದಾರೆ.

ಸೆಪ್ಟೆಂಬರ್ 7ರಿಂದ ಭಾರತ್ ಜೋಡೋ ಯಾತ್ರೆ ಆರಂಭಿಸುವುದಾಗಿ ಕಾಂಗ್ರೆಸ್ ಕಳೆದ ವಾರ ಘೋಷಿಸಿತ್ತು. ಇದು ಕಳೆದ ಶತಮಾನದಲ್ಲಿಯೇ ಅತಿ ದೀರ್ಘ ಯಾತ್ರೆ ಎಂದು ಕಾಂಗ್ರೆಸ್ ಹೇಳಿದೆ. ದೇಶದಲ್ಲಿ ರಾಜಕೀಯ ಧೃವೀಕರಣವಾಗಿದೆ. ಒಂದೆಡೆ ಸಂಘದ ಸಿದ್ಧಾಂತವಿದ್ದರೆ, ಮತ್ತೊಂದೆಡೆ ಎಲ್ಲರನ್ನೂ ಒಗ್ಗೂಡಿಸುವ ಸಿದ್ಧಾಂತವಿದೆ. ದೇಶದ ಜನರು ಒಗ್ಗೂಡಿಸುವ ರಾಜಕೀಯ ಬಯಸುತ್ತಿದ್ದಾರೆಯೇ ಹೊರತು, ವಿಭಜಿಸುವ ರಾಜಕೀಯ ಅಲ್ಲ ಎಂಬ ನಂಬಿಕೆಯೊಂದಿಗೆ ಈ ಯಾತ್ರೆ ಆರಂಭಿಸುತ್ತಿರುವುದಾಗಿ ರಾಹುಲ್ ಗಾಂಧಿ ಹೇಳಿದ್ದಾರೆ.

## ರಾಹುಲ್ ಅಧ್ಯಕ್ಷರಾಗುವ ಬಗ್ಗೆ ಸರ್ವಸಮ್ಮತಿ : ಗೆಹ್ಲೋಟ್

ಜೈಪುರ, ಆ. 22 – ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಪಕ್ಷದ ಅಧ್ಯಕ್ಷರನ್ನಾಗಿ ಮಾಡುವ ಬಗ್ಗೆ ಸರ್ವಸಮ್ಮತಿ ಇದೆ ಎಂದು ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಹೇಳಿದ್ದಾರೆ.

ಸೆಪ್ಟೆಂಬರ್ 20ರ ಒಳಗೆ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಬೇಕಿದೆ. ರಾಹುಲ್ ಗಾಂಧಿ ಅಧ್ಯಕ್ಷ ಸ್ಥಾನಕ್ಕೆ ಬರಬೇಕು ಎಂದು ದೇಶಾದ್ಯಂತ ಇರುವ ಕಾಂಗ್ರೆಸ್ ಕಾರ್ಯಕರ್ತರು ಬಯಸುತ್ತಿದ್ದಾರೆ ಎಂದವರು ತಿಳಿಸಿದ್ದಾರೆ.

# ಆಜಾನ್‌ಗಾಗಿ ಲೌಡ್‌ಸ್ಪೀಕರ್ ಬಳಕೆ ಮೂಲಭೂತ ಹಕ್ಕುಗಳ ಉಲ್ಲಂಘನೆಯಲ್ಲ

(1ನೇ ಪುಟದಿಂದ) ಮಾಲಿನ್ಯ ನಿಯಮಗಳನ್ನು ಪಾಲಿಸಬೇಕು. ಈ ಬಗ್ಗೆ ಕ್ರಮ ತೆಗೆದುಕೊಂಡ ವರದಿ ಸಲ್ಲಿಸಬೇಕು ಎಂದು ನ್ಯಾಯಾಲಯ ತಿಳಿಸಿದೆ. ಬೆಂಗಳೂರಿನ ಎಸ್. ಮಂಜುನಾಥ್ ಎಂಬುವವರು ಹೈಕೋರ್ಟ್‌ನಲ್ಲಿ ದಾಖಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಹಂಗಾಮಿ ಮುಖ್ಯನ್ಯಾಯಮೂರ್ತಿ ಅಲೋಕ್ ಅರಧೆ ಅವರ ನೇತೃತ್ವದ ಪೀಠ ಈ ಆದೇಶ ಹೊರಡಿಸಿದೆ.


**ದಾವಣಗೆರೆ ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ ದಾವಣಗೆರೆ**

**ಪಿ & ಎಸ್.ಸಿ. 6/2022**

ಅರ್ಜಿದಾರರು : 1 ಹರೀಶ ಡಿ.ಬಿನ್ ಲೇಟ್ ಬಸಪ್ಪ ಡಿ.ಹೆಚ್. ಸುಮಾರು 44 ವರ್ಷ ಸರ್ಕಾರಿ ಪ್ರೌಢಶಾಲೆ ಉಪಾಧ್ಯಾಯರು, ವಾಸ : #871/4, ಜಯನಗರ, ಬಿ ಬ್ಲಾಕ್, ನಿಟ್ಟುವಳ್ಳಿ, ನ್ಯೂ ಎಕ್ಸ್‌ಟೆನ್ಷನ್, ದಾವಣಗೆರೆ- 577008.

2) ಶ್ರೀಮತಿ ರೇಖಾವತಿ ಕೋಂ ಪ್ರಕಾಶ್ ವೈ.ಜಿ. ಸುಮಾರು 47 ವರ್ಷ, ವಾಸ : ಎಂಎಸ್‌ಎ 15, ಕೆ.ಹೆಚ್.ಬಿ ಕಾಲೋನಿ, ಕೊಟ್ಟೂರು ರಸ್ತೆ, ಹರಪನಹಳ್ಳಿ. *ವಿರುದ್ಧ*

ಎದುರುದಾರರು : ದಿ ಮ್ಯಾನೇಜರ್, ಎಸ್.ಬಿ.ಐ ಲೈಫ್ ಇನ್ಶೂರೆನ್ಸ್ ಕಂ.ಲಿ., #821, ಅನ್ನಪೂರ್ಣ ಆರ್ಕೇಡ್, 1ನೇ ಮಹಡಿ ರೇಣುಕ ಬಡಾವಣೆ, ಪಿ.ಬಿ ರಸ್ತೆ, ದಾವಣಗೆರೆ 577002.

**ಸಾರ್ವಜನಿಕ ತಿಳುವಳಿಕೆ ನೋಟೀಸ್**

ಈ ಮೂಲಕ ಸಮಸ್ತ ಜನರಿಗೆ ತಿಳಿಸುವುದೇನೆಂದರೆ ಅರ್ಜಿದಾರರು ಷೆಡ್ಯೂಲ್‌ನಲ್ಲಿ ವಿವರಿಸುವ ಹಣವನ್ನು ಪಡೆಯಲು ಉತ್ತರಾಧಿಕಾರ ಪ್ರಮಾಣ ಪತ್ರಕ್ಕಾಗಿ ಘನ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು ಇರುತ್ತದೆ ಮತ್ತು ಮುದ್ದತ್ತನ್ನು ದಿನಾಂಕ 12.09.2022ರಂದು ಇಟ್ಟಿದ್ದು ಇರುತ್ತದೆ. ಆಸಕ್ತಿಯುಳ್ಳವರು ಸದರಿ ದಿನಾಂಕದಂದು ಘನ ನ್ಯಾಯಾಲಯಕ್ಕೆ ಬೆಳಿಗ್ಗೆ 11.00 ಗಂಟೆಗೆ ತಾವಾಗಲೀ ಅಥವಾ ವಕೀಲರ ಮುಖಾಂತರವಾಗಲೀ ಹಾಜರಾಗಿ ತಮ್ಮ ತಕಾರರು ಏನಾದರೂ ಇದ್ದಲ್ಲಿ ಸಲ್ಲಸಬಹುದು. ತಪ್ಪಿದಲ್ಲಿ, ಯಾರದೇ ತಕರಾರು ಇಲ್ಲವೆಂದು ಪರಿಗಣಿಸಿ ಪ್ರಕರಣವನ್ನು ನ್ಯಾಯಾಲಯದವರು ಮುಂದುವರೆಸಲಿದ್ದಾರೆ.

**ಷೆಡ್ಯೂಲ್**

ದಾವಣಗೆರೆಯ ನಿಟ್ಟುವಳ್ಳಿ ಶಾಖೆಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಲೇಟ್ ಗಿರೀಶ್.ಡಿ. ಇವರ ಖಾತೆ ನಂ : 64101258687, ಪ್ರಧಾನಮಂತ್ರಿ ಜೀವನ್‌ಜ್ಯೋತಿ ಭೀಮಾ ಯೋಜನೆಯಡಿಯಲ್ಲಿ ರೂ. 2,00,000.00 ಪಡೆಯಲು ಅರ್ಜಿ ಪಾಲಿಸಿಯು ಪ್ರಕಾರ ಭರವಸೆ ಕೊಟ್ಟ ಹಣ : ರೂ.2,00,000.00 ಇದ್ದು, ಪಾಲಿಸಿದಾರರು ಮೃತರಾದಾಗ ಮೃತ ವಾರಸುದಾರರಿಗೆ ಅಂದರೆ ಅರ್ಜಿದಾರರಿಗೆ ದೊರೆಯುವ ಹಣ 2,00,000.00

ನ್ಯಾಯಾಲಯದವರ ಆಜ್ಞೆಯ ಮೇರೆಗೆ

ಅರ್ಜಿದಾರರು ವಕೀಲರು
**ಎಸ್. ಪ್ರಕಾಶ್**, ಬಿ.ಕಾಂ. ಎಲ್‌ಎಲ್.ಬಿ.,
ಅಡ್ವೊಕೇಟ್, 559, 5ನೇ ಮುಖ್ಯ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ 577002.
ಮೊ: 99803 29529

ಶಿರಸ್ತೇದಾರರು
ಪ್ರಧಾನ ಸಿವಿಲ್ ನ್ಯಾಯಾಲಯ & ಜೆ.ಎಂ.ಎಫ್.ಸಿ, ದಾವಣಗೆರೆ.

# ಹರಪನಹಳ್ಳಿ : ಬಿಜೆಪಿಯಿಂದ ವಿಪಕ್ಷ ನಾಯಕನ ನೈತಿಕ ಹಕ್ಕು ಕುಗ್ಗಿಸುವ ಕೆಲಸ



**ಸಿದ್ದರಾಮಯ್ಯ ಕಾರಿನ ಮೇಲೆ ಮೊಟ್ಟೆ ಎಸೆತ ಪ್ರಕರಣಕ್ಕೆ ಖಂಡನೆ**

ಹರಪನಹಳ್ಳಿ, ಆ. 22- ವಿಪಕ್ಷ ನಾಯಕ ಸಿದ್ದರಾಮಯ್ಯನವರ ಕಾರಿನ ಮೇಲೆ ಮೊಟ್ಟೆ ಎಸೆದಿರುವ ಕಿಡಿಗೇಡಿಗಳನ್ನು ಬಂಧಿಸಿ, ಸೂಕ್ತ ಕಾನೂನು ಕ್ರಮಕೈಗೊಳ್ಳಬೇಕು ಎಂದು ಪುರಸಭೆ ಸದಸ್ಯ ಎಂ.ವಿ. ಅಂಜಿನಪ್ಪ ಸರ್ಕಾರಕ್ಕೆ ಒತ್ತಾಯಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಜರುಗಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ಕೊಡಗು ಜಿಲ್ಲೆಯ ಮಳೆ ಹಾನಿಗೊಂಡ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲಿಸಲು ಹೋದ ಸಂದರ್ಭದಲ್ಲಿ ಈ ಘಟನೆ ನಡೆದಿದ್ದು, ಕಾಂಗ್ರೆಸ್ ಪಕ್ಷ ಇದನ್ನು ಖಂಡಿಸುತ್ತದೆ ಎಂದರು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿರೋಧ ಪಕ್ಷ ಬಲಾಢ್ಯವಾಗಿದ್ದಾಗ ಆಡಳಿತ ಪಕ್ಷದ ವೈಫಲ್ಯಗಳನ್ನು ಎತ್ತಿ ಹಿಡಿಯುವುದು ಸಾಮಾನ್ಯವಾಗಿದೆ. ಆದರೆ ವಿಪಕ್ಷ ನಾಯಕನ ನೈತಿಕ ಹಕ್ಕು ಕುಗ್ಗಿಸುವ ಕೆಲಸವನ್ನು ಬಿಜೆಪಿ, ಆರ್‌ಎಸ್‌ಎಸ್ ಮಾಡುತ್ತಿದ್ದು, ಸಿದ್ದರಾಮಯ್ಯನವರು ರಾಜ್ಯದಲ್ಲಿ ದೈತ್ಯಶಕ್ತಿಯಾಗಿದ್ದಾರೆ. ಅವರು ಕೇವಲ ದಲಿತರು, ಹಿಂದುಳಿದ, ಅಲ್ಪಸಂಖ್ಯಾತರು ಸೇರಿದಂತೆ ಎಲ್ಲಾ ವರ್ಗಗಳ ಜನ ನಾಯಕರಾಗಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಪುರಸಭೆ ಸದಸ್ಯರಾದ ಲಾಟಿ ದಾದಾಪೀರ, ಗಣೇಶ್, ತಾಪಂ ಮಾಜಿ ಸದಸ್ಯ ಹುಲಿಕಟ್ಟಿ ಚಂದ್ರಪ್ಪ, ಬೆನಿಂಟಿ ಸೊಸೈಟಿ ಅಧ್ಯಕ್ಷ ಟಿ. ಎಚ್.ಎಂ.ಮಂಜುನಾಥ, ಪುರಸಭೆ ಮಾಜಿ ಉಪಾಧ್ಯಕ್ಷ ಎಚ್. ವಸಂತಪ್ಪ, ಮುಖಂಡರಾದ ತೆಲಿಗಿ ಮಂಜುನಾಥ, ಎಂ.ಬಿ. ಅಂಜಿನಪ್ಪ, ಮೈದೂರು ರಾಮಣ್ಣ, ಪೈಲ್ವಾನ್ ಬಸವರಾಜ, ಚಿಕ್ಕೇರಿ ಬಸಪ್ಪ, ಇಟ್ಟಿಗುಡಿ ರಮೇಶ್, ಕಲ್ಲಹಳ್ಳಿ ಗೋಣೆಪ್ಪ, ಜೀಷಾನ್, ತಿಮ್ಲಾಪುರ ಈಶಪ್ಪ ಉಪಸ್ಥಿತರಿದ್ದರು.

# ಸಾವರ್ಕರ್ ಫೋಟೋ ನಾವು ಹಾಕಿಕೊಳ್ಳುತ್ತೇವೆ, ತಾಕತ್ತಿದ್ದರೆ ಟಿಪ್ಪು ಫೋಟೋ ಕಾಂಗ್ರೆಸ್‌ನವರು ಹಾಕಿಕೊಳ್ಳಲಿ



**ಶಾಸಕ ಎಂ.ಪಿ.ರೇಣುಕಾಚಾರ್ಯ ಸವಾಲ್**

ಹೊನ್ನಾಳಿ, ಆ.22- ವೀರ ಸಾವರ್ಕರ್ ಫೋಟೋವನ್ನು ನಾವು ಮನೆಗಳಲ್ಲಿ, ಮನೆಯ ಮುಂದೆ ಹಾಕಿ ಕೊಳ್ಳುತ್ತೇವೆ. ಕಾಂಗ್ರೆಸ್‌ನವರಿಗೆ ತಾಕತ್ ಇದ್ದರೆ ಟಿಪ್ಪುವಿನ ಫೋಟೋವನ್ನು ಮನೆಯ ಒಳಗೆ, ಮನೆಯ ಹೊರಗೆ ಹಾಕಿಕೊಳ್ಳಲಿ ನೋಡೋಣ ಎಂದು ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಸವಾಲ್ ಹಾಕಿದ್ದಾರೆ.

ಹೊನ್ನಾಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಾವರ್ಕರ್ ಸೇರಿದಂತೆ ಸ್ವಾತಂತ್ರ್ಯಕ್ಕಾಗಿ ತ್ಯಾಗ, ಬಲಿದಾನ ಮಾಡಿದವರ ಫೋಟೋಗಳನ್ನು ನಾವು ಹಾಕಿಕೊಳ್ಳುತ್ತೇವೆ. ನಾವು ಹಿಂದೂ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತೇವೆಂದ ಶಾಸಕರು, ನಿಮ್ಮಂತೆ ಓಟಿಗಾಗಿ ನಾವು ಟಿಪ್ಪು ಜಯಂತಿ ಆಚರಣೆ ಮಾಡುತ್ತಿಲ್ಲ ಎಂದರು.

ಮುಸ್ಲಿಮರೇ ಟಿಪ್ಪುವಿನ ಫೋಟೋಗಳನ್ನು ಅವರ ಮನೆಗಳಲ್ಲಿ ಹಾಕಿಕೊಳ್ಳುವುದಿಲ್ಲ, ನಿಮಗೆ ತಾಖತ್ ಇದ್ದರೆ ಟಿಪ್ಪುವಿನ ಫೋಟೋವನ್ನು ನಿಮ್ಮ ಮನೆಗಳಲ್ಲಿ ಮನೆಯ ಮುಂದೆ ಹಾಕಿಕೊಳ್ಳಿ ನೋಡೋಣ ಎಂದರು.

ಸಾವರ್ಕರ್ ಅವರು 14 ವರ್ಷ ಅಂಡಮಾನ್ ಜೈಲಿನಲ್ಲಿ, 13 ವರ್ಷ ಗೃಹ ಬಂಧನದಲ್ಲಿ, ಒಂದು ವರ್ಷ ಕಾಳಪಾನಿಯವನ್ನು ಕುಡಿಸಿದ್ದರು. ಅಂತಹ ಮಹಾನ್ ಹೋರಾಟಗಾರ ಸಾವರ್ಕರ್ ಎಂದು ಶ್ಲಾಘಿಸಿದರು.

ಸಿದ್ದರಾಮಯ್ಯನವರು ಮಡಿಕೇರಿ ಪ್ರವಾಸದಲ್ಲಿರುವಾಗ ಅವರ ಕಾರಿನ ಮೇಲೆ ಕಾಂಗ್ರೆಸ್ ಒಳಗುಂಪು ಮೊಟ್ಟೆ ಎಸೆದಿದೆ ಎಂದು ಹೇಳಿದ್ದೆ, ಅದು ಸತ್ಯವಾಗಿದ್ದು ಕಾಂಗ್ರೆಸ್ ಕಾರ್ಯಕರ್ತರು ಸ್ವತಃ ಒಪ್ಪಿಕೊಂಡಿದ್ದು, ಡಿ. ಕೆ.ಶಿವಕುಮಾರ್ ಇನ್ನಾದರೂ ಅರ್ಥ ಮಾಡಿಕೊಳ್ಳಬೇಕೆಂದರು. ಇನ್ನು ಯಾರ್ಯಾರು ಕಾಂಗ್ರೆಸ್‌ನವರು ಪ್ರತಿಭಟನೆ ಮಾಡಿದ್ದಾರೋ ಅವರು ಬೇಷರತ್ ರಾಜ್ಯದ ಜನರ ಕ್ಷಮೆ ಕೇಳಬೇಕೆಂದು ಆಗ್ರಹಿಸಿದರು.

ಇನ್ನು ಡಿ.ಕೆ.ಶಿವಕುಮಾರ್, ಬಿಜೆಪಿ ಪ್ರವಾಸ ಮಾಡಲಿ ನಾವು ಪ್ರತಿಭಟನೆ ಮಾಡುತ್ತೇವೆಂದು ಹೇಳಿದ್ದಾರೆ. ನಿಮ್ಮ ಸವಾಲನ್ನು ನಾವು ಸ್ವೀಕರಿಸುತ್ತೇವೆ ನೋಡೋಣ ಪ್ರತಿಭಟನೆ ಮಾಡಿಸಿ ಎಂದು ರೇಣುಕಾಚಾರ್ಯ ಡಿಕೆಶಿ ಗೆ ಇದೇ ವೇಳೆ ಸವಾಲು ಹಾಕಿದರು.

# ಸಫಾಯಿ ಕರ್ಮಚಾರಿಗಳ ಪ್ರತಿಭಟನೆ




ದಾವಣಗೆರೆ, ಆ.22- ಜಿಲ್ಲೆಯಲ್ಲಿ ಗುರುತಿಸಿರುವ 402 ಮ್ಯಾನುಯಲ್ ಸ್ಕ್ಯಾವೆಂಜರ್ ಪತ್ರ ಕೊಟ್ಟಿರುವ ಕುಟುಂಬದವರಿಗೆ 2013 ರ ಕಾಯ್ದೆಗಳ ಸೌಲಭ್ಯಗಳನ್ನು ಒದಗಿಸುವಂತೆ ಆಗ್ರಹಿಸಿ ನಗರದಲ್ಲಿಂದು ಜಿಲ್ಲಾ ಅಖಿಲ ಕರ್ನಾಟಕ ಮ್ಯಾನ್ ಹೋಲ್ ಸ್ಕ್ಯಾವೆಂಜರ್ಸ್ ಸಫಾಯಿ ಕರ್ಮಚಾರಿಗಳ ಕ್ಷೇಮಾಭಿವೃದ್ಧಿ ಸಂಘದ ನೇತೃತ್ವದಲ್ಲಿ ಸಫಾಯಿ ಕರ್ಮಚಾರಿಗಳು ಪ್ರತಿಭಟನೆ ನಡೆಸಿದರು.

ಅಂಬೇಡ್ಕರ್ ವೃತ್ತದಲ್ಲಿ ಜಮಾಯಿಸಿದ್ದ ಪ್ರತಿಭಟನಾಕಾರರು ನಮ್ಮನ್ನು ಕೊಲ್ಲುವುದನ್ನು ನಿಲ್ಲಿಸಿ ಎಂಬ ಘೋಷವಾಕ್ಯ ಮತ್ತು ಸ್ಟಾಪ್ ಕಿಲ್ಲಿಂಗ್ ಅಸ್ ಎಂಬ ಆಂಗ್ಲ ಪದದ ಒಂದೊಂದೇ ಅಕ್ಷರದ ಫಲಕಗಳ ಹಿಡಿದು ಪ್ರದರ್ಶಿಸುತ್ತಾ, ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿದರು. ನಂತರ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಮನವಿ ಸಲ್ಲಿಸಿದರು.

ದಾವಣಗೆರೆ ಜಿಲ್ಲೆಯಲ್ಲಿ ಸುಮಾರು 2017-18 ರಿಂದ ಗುರುತಿಸಿರುವ ಮ್ಯಾನುವೆಲ್ ಸ್ಕ್ಯಾವೆಂಜರ್ ಕುಟುಂಬದವರಿಗೆ ಪುನರ್ ವಸತಿ ಅಧಿನಿಯಮ 2013 ರ ಕಾಯ್ದೆಯ ಪ್ರಕಾರ ಮನೆ ಪುನರ್ ನಿರ್ಮಿಸಿಕೊಡಲು 09 ತಿಂಗಳಲ್ಲಿ ಆದೇಶವಿದೆ. ಆದರೆ ಜಿಲ್ಲೆಯಲ್ಲಿ ಇಲ್ಲಿಯವರೆಗೂ ಜಾಗವನ್ನು ಖರೀದಿ ಮಾಡಿ ಮನೆಗಳನ್ನು ಕಟ್ಟಿಸಿಕೊಟ್ಟಿಲ್ಲ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾಧಿಕಾರಿಗಳು ಜಿಲ್ಲೆಯಲ್ಲಿ ಯಾವುದೇ ಇಲಾಖೆಯಲ್ಲಿ ಟೆಂಡರ್ ಕರೆದರೂ ಮೊದಲ ಆದ್ಯತೆಯಲ್ಲಿ ಎಂ.ಎಸ್.ಕುಟುಂಬದವರನ್ನು ನೇಮಿಸಿಕೊಳ್ಳಲು ಆದೇಶವನ್ನು ಮಾಡಿದ್ದಾರೆ. ಆದರೆ ಇಲ್ಲಿಯವರೆಗೂ ನಮಗೆ ಯಾವುದೇ ರೀತಿಯ ಕೆಲಸಗಳ ಸೌಲಭ್ಯವನ್ನು ಒದಗಿಸಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಸಂಘದ ಜಿಲ್ಲಾ ಸಂಚಾಲಕ ಎನ್ ಹುಚ್ಚೆಂಗಪ್ಪ, ಮಂಜಮ್ಮ, ಡಿ. ಬಾಬುಲಾಲ್, ವಾಸುದೇವ್, ಮಂಜುನಾಥ್, ವೆಂಕಟೇಶ್, ಶಾಂತಮ್ಮ ಸೇರಿದಂತೆ ಇತರರು ಭಾಗವಹಿಸಿದ್ದರು.

## ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದವರಿಗೆ ಬಹುಮಾನ

ದಾವಣಗೆರೆ, ಆ.22 - 2022-23ನೇ ಸಾಲಿನ ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಕನಿಷ್ಠ ಐದು ವರ್ಷ ಅತ್ಯುತ್ತಮ ಸೇವೆ ಸಲ್ಲಿಸಿರುವಂತಹ ವ್ಯಕ್ತಿಗಳಿಗೆ ರೂ.25,000 ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರ ಹಾಗೂ ಸಂಸ್ಥೆಗಳಿಗೆ 1,00,000 ನಗದು ಬಹುಮಾನ ಹಾಗೂ ಪ್ರಶಸ್ತಿ ಪತ್ರವನ್ನು ಮಕ್ಕಳ ದಿನಾಚರಣೆಯ ದಿನದಂದು ಪ್ರಧಾನ ಮಾಡಿ ಗೌರವಿಸಲಾಗುವುದು.

ಅರ್ಜಿಯನ್ನು ಸೆ.31 ರೊಳಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಉಪನಿರ್ದೇಶಕರ ಕಛೇರಿ, 14ನೇ ಮುಖ್ಯರಸ್ತೆ, ಎಂ.ಸಿ.ಸಿ. 'ಬಿ' ಬ್ಲಾಕ್, ಕುವೆಂಪುನಗರ, ದಾವಣಗೆರೆ ಇಲ್ಲಿ ಅರ್ಜಿ ಪಡೆದು ಕನ್ನಡ ಭಾಷೆಯಲ್ಲಿ ಭರ್ತಿ ಮಾಡಿ ದ್ವಿಪ್ರತಿಯಲ್ಲಿ ಕಛೇರಿಗೆ ಸಲ್ಲಿಸತಕ್ಕದ್ದು, ನಂತರ ಸಲ್ಲಿಸಿದ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08192-264056 ಯನ್ನು ಸಂಪರ್ಕಿಸಬಹುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕಿ ವಾಸಂತಿ ಉಪ್ಪಾರ್ ತಿಳಿಸಿದ್ದಾರೆ.


## ಕರಾಟೆ ಚಾಂಪಿಯನ್‌ಶಿಪ್‌ನಲ್ಲಿ ಅಂಕಿತ್‌ದಾಸ್‌ಗೆ ಬಹುಮಾನ

ದಾವಣಗೆರೆ, ಆ.22- ಮೈಸೂರಿನ ಚಾಮುಂಡಿ ವಿಹಾರ್‌ನ ಒಳಾಂಗಣ ಕ್ರೀಡಾಂಗಣದಲ್ಲಿ ಕಳೆದ ವಾರ ನಡೆದ ರಾಷ್ಟ್ರೀಯ ಮಟ್ಟದ



ಕರಾಟೆ ಚಾಂಪಿಯನ್‌ಶಿಪ್ ಸ್ಪರ್ಧೆಯ, ವೈಯಕ್ತಿಕ ಕುಮುಟೆ ವಿಭಾಗದಲ್ಲಿ, ನಗರದ ಶಾಮನೂರು ಬಳಿ ಇರುವ ಜೈನ್ ವಿದ್ಯಾಲಯ ಸಿಬಿಎಸ್‌ಇ ಶಾಲೆಯ 5ನೇ ತರಗತಿ ವಿದ್ಯಾರ್ಥಿ ಆರ್. ಅಂಕಿತ್ ದಾಸ್ ತೃತೀಯ ಬಹುಮಾನ ಪಡೆದಿದ್ದಾನೆ.

## ನಗರದಲ್ಲಿ ಇಂದು ಸಿದ್ಧ ಕಣ್ಣಿನ ಹನಿ



ಸ್ಥಳೀಯ ವಿದ್ಯಾನಗರದ ಶ್ರೀ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನದ ಆವರಣದಲ್ಲಿ ಇಂದು ಬೆಳಿಗ್ಗೆ 10 ರಿಂದ 11 ರವರೆಗೆ ಉಚಿತವಾಗಿ ಸಿದ್ಧ ಕಣ್ಣಿನ ಹನಿ ಹಾಕುವ ಕಾರ್ಯಕ್ರಮ ನಡೆಯಲಿದೆ.

ಕಣ್ಣಿಗೆ ಹನಿ ಹಾಕುವುದರಿಂದ ಕಣ್ಣಿನಲ್ಲಿ ನೀರು ಬರುವುದು, ಕಣ್ಣುರಿ, ಕಣ್ಣು ಕೆಂಪಾಗುವುದು, ಕಣ್ಣಿನ ಪೊರೆ ಬರುವ ಹಂತದಲ್ಲಿರುವವರು, ದೂರ ದೃಷ್ಟಿ, ಸಮೀಪ ದೃಷ್ಟಿ ತೊಂದರೆ ಇರುವವರು ಶಿಬಿರದಲ್ಲಿ ಭಾಗವಹಿಸಬಹುದು. ವಿವರಕ್ಕೆ ವ್ಯವಸ್ಥಾಪಕ ಎಂ.ಮೋಕ್ಷಾನಂದ (94482-55 544), ಬಿ.ಎಸ್. ವೀರೇಶ್ (88676-91155), ಕೆ.ಎಂ. ವೀರಭದ್ರಯ್ಯ (94493-88354), ಆರ್.ಕೆ.ಎಂ. ಕಂಬಾಳೇಶ್ (94484-42 713), ಎನ್.ಎಂ. ತಿಪ್ಪೇಸ್ವಾಮಿ (98868-74078) ಅವರನ್ನು ಸಂಪರ್ಕಿಸಬಹುದು.

## ಚಿನ್ನಸಮುದ್ರದಲ್ಲಿ ಸ್ವಾತಂತ್ರ್ಯೋತ್ಸವ



ದಾವಣಗೆರೆ, ಆ. 22- ತಾಲ್ಲೂಕಿನ ಚಿನ್ನಸಮುದ್ರ ಗ್ರಾಮದಲ್ಲಿ ಗ್ರಾ. ಪಂ. ಸದಸ್ಯರು ಹಾಗೂ ಗ್ರಾಮದ ಜನತೆ ಸೇರಿ 75ನೇ ವರ್ಷದ ಸ್ವಾತಂತ್ರ್ಯ ದಿನಾಚರಣೆಯ ಅಮೃತ ಮಹೋತ್ಸವ ಆಚರಿಸಿದರು.

ಈ ಸಂದರ್ಭದಲ್ಲಿ ಮೈಂಡ್ ಹಂಟರ್ಸ್ ಸಂಸ್ಥೆಯ ಅಧ್ಯಕ್ಷ ಅರುಣ್ ಕುಮಾರ್, ಜಾನಪದ ಕಲಾವಿದ ಉಮೇಶ್ ನಾಯ್ಕ, ಪಂಚಾಯಿತಿ ಸದಸ್ಯ ಜಿ. ತಿಪ್ಪೇಸ್ವಾಮಿ, ಶಶಿಬಾಯಿ ಶೇಖರ್ ನಾಯ್ಕ, ಭಾಗ್ಯಮ್ಮ ಹಾಲೇಶ್ ಧ್ವಜಾರೋಹಣ ನೆರವೇರಿಸಿದರು. ಆರೋಗ್ಯ ಇಲಾಖೆಯ ಸಿಬ್ಬಂದಿ ಮುರುಳಿ, ಪಾಂಡು ನಾಯ್ಕ ಉಪಸ್ಥಿತರಿದ್ದರು.

## ಸಿದ್ದರಾಮಯ್ಯ ಮೇಲೆ ಮೊಟ್ಟೆ ಎಸೆತ : ಖಂಡನೆ



ದಾವಣಗೆರೆ, ಆ. 22- ಕೊಡಗಿಗೆ ಜನರ ಸಮಸ್ಯೆ ಆಲಿಸಲು ಹೋಗಿದ್ದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಕಾರಿನ ಮೇಲೆ ಮೊಟ್ಟೆ ಎಸೆದ ಘಟನೆಯನ್ನು ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಮಹಬೂಬ್ ಭಾಷಾ ಖಂಡಿಸಿದ್ದಾರೆ. ಸಿದ್ದರಾಮಯ್ಯ ಅವರಿಗೆ ಭದ್ರತೆ ಒದಗಿಸುವುದರಲ್ಲಿ ವಿಫಲವಾಗಿರುವುದನ್ನು ನೋಡಿದರೆ, ಈ ಸರ್ಕಾರ ವಿರೋಧ ಪಕ್ಷಗಳ ನಾಯಕರನ್ನು ಅಪಮಾನಿಸುವ ದುರುದ್ದೇಶ ಹೊಂದಿರುವುದು ಸ್ಪಷ್ಟವಾಗಿದೆ ಎಂದು ಅವರು ಹೇಳಿದ್ದಾರೆ.

## ಈಶ್ವರಮ್ಮ ಶಾಲೆಯಲ್ಲಿ ಧ್ವಜ ವಿತರಣೆ



ದಾವಣಗೆರೆ, ಆ. 22 - 75 ನೇ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಮನೆ-ಮನೆಗಳಲ್ಲಿ ಧ್ವಜಾರೋಹಣ ಅಭಿಯಾನ ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸದ ಪ್ರಯುಕ್ತ 'ಮನೆ-ಮನೆಗಳಲ್ಲಿ ಧ್ವಜಾರೋಹಣ' ನೆರವೇರಿಸಲು ಈಶ್ವರಮ್ಮ ಶಾಲೆಯಿಂದ ಶಾಲಾ ಪೋಷಕರಿಗೆ 'ತ್ರಿವರ್ಣ ಧ್ವಜ' ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಶಾಲಾಧ್ಯಕ್ಷರಾದ ಶ್ರೀಮತಿ ಸುಜಾತ ಕೃಷ್ಣ ಕೆ.ಆರ್. ಕಾರ್ಯದರ್ಶಿ ಶ್ರೀಮತಿ ಎ.ಆರ್.ಉಷಾ ರಂಗನಾಥ್, ಸದಸ್ಯರಾದ ಶ್ರೀಮತಿ ಕೆ.ವಿ. ಸುಜಾತ ಪೋಷಕರಿಗೆ 'ತ್ರಿವರ್ಣ ಧ್ವಜ' ವಿತರಿಸಲಾಯಿತು. ಪ್ರಾಂಶುಪಾಲ ಕೆ.ಎಸ್. ಪ್ರಭುಕುಮಾರ್ ತ್ರಿವರ್ಣ ಧ್ವಜ ಅಭಿಯಾನದ ಬಗ್ಗೆ ಮಾಹಿತಿ ನೀಡಿದರು. ಉಪ ಪ್ರಾಂಶುಪಾಲರಾದ ಶ್ರೀಮತಿ ಜಿ.ಎಸ್. ಶಶಿರೇಖಾ ಅವರು ಧ್ವಜದ ಮಹತ್ವದ ಬಗ್ಗೆ ತಿಳಿಸಿದರು. ಶಾಲಾ ಸಹ ಶಿಕ್ಷಕಿಯರಾದ ರಂಜನಿ, ರೋಹಿಣಿ ಎಂ. ನಂದಾ ಎ. ಹೆಚ್ ಉಪಸ್ಥಿತರಿದ್ದರು. ದೈಹಿಕ ಶಿಕ್ಷಕ ರವಿ ಕೆ. ಧ್ವಜ ಹಾರಿಸುವ ವಿಧಾನ ಹಾಗೂ ಸಂರಕ್ಷಣೆಯ ಬಗ್ಗೆ ತಿಳಿಸಿದರು.

# ಮೊಟ್ಟೆ ಪ್ರಕರಣ : ಮಲೇಬೆನ್ನೂರಿನಲ್ಲಿ ಪ್ರತಿಭಟನೆ



ಮಲೇಬೆನ್ನೂರು, ಆ.22- ಮಡಿಕೇರಿಯಲ್ಲಿ ಮಾಜಿ ಸಿಎಂ ಹಾಗೂ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಮೇಲೆ ಬಿಜೆಪಿ ಕಾರ್ಯಕರ್ತರು ಮೊಟ್ಟೆ ಎಸೆದು ಹಲ್ಲೆ ಮಾಡಲು ಯತ್ನಿಸಿರುವುದನ್ನು ಖಂಡಿಸಿ ಪಟ್ಟಣದಲ್ಲಿ ಶನಿವಾರ ಪ್ರತಿಭಟನೆ ನಡೆಸಲಾಯಿತು.

ಶಾಸಕ ಎಸ್.ರಾಮಪ್ಪ ಅವರ ನೇತೃತ್ವದಲ್ಲಿ ಇಲ್ಲಿನ ಮುಖ್ಯ ವೃತ್ತದಿಂದ ಪ್ರಾರಂಭವಾದ ಪ್ರತಿಭಟನಾ ಮೆರವಣಿಗೆ ನಾಡ ಕಛೇರಿವರೆಗೆ ತೆರಳಿ ಉಪ ತಹಶೀಲ್ದಾರ್ ಆರ್.ರವಿ ಅವರಿಗೆ ಮನವಿ ಸಲ್ಲಿಸಿತು.

ಜಿ.ಪಂ. ಮಾಜಿ ಸದಸ್ಯ ಬೆಣ್ಣೆಹಳ್ಳಿ ಹಾಲೇಶಪ್ಪ, ಜಿ.ಪಂ. ಮಾಜಿ ಸದಸ್ಯರೂ ಆದ ವಕೀಲ ಎಂ. ನಾಗೇಂದ್ರಪ್ಪ, ನಿವೃತ್ತ ಪೊಲೀಸ್ ಅಧಿಕಾರಿ ಕುಣೆಬೆಳಕೆರೆ ದೇವೇಂದ್ರಪ್ಪ, ಮುಖಂಡ ಕುಂಬಳೂರು ವಿರೂಪಾಕ್ಷಪ್ಪ, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ.ಅಬೀದ್ ಅಲಿ, ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾದ ವಿದ್ಯಾ, ಪುರಸಭೆ ಸದಸ್ಯ ಕೆ.ಜಿ. ಲೋಕೇಶ್, ಎಂ.ಬಿ.ಫೈಜು, ಎ.ಆರೀಫ್ ಅಲಿ ,ಹಳ್ಳಿಹಾಳ್ ವೀರನಗೌಡ, ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಕುಂಬಳೂರು ವಾಸು, ತಾ.ಪಂ ಮಾಜಿ ಅಧ್ಯಕ್ಷ ಆದಾಪುರ ವೀರಭದ್ರಪ್ಪ, ಹಿಂದುಳಿದ ವಿಭಾಗದ ಅಧ್ಯಕ್ಷ ಕೆ.ಪಿ.ಗಂಗಾಧರ್ ಗ್ರಾ.ಪಂ. ಮಾಜಿ ಅಧ್ಯಕ್ಷ ಭೋವಿಕುಮಾರ್, ಜನತಾ ಬಜಾರ್ ನಿರ್ದೇಶಕ ಪಿ.ಹೆಚ್.ಶಿವಕುಮಾರ್, ಪುರಸಭೆ ಸದಸ್ಯರಾದ ಮಾಜೀದ್, ನಯಾಜ್, ಸಾಬೀರ್ ಅಲಿ, ಖಲೀಲ್, ಚಮನ್, ಶಬ್ಬೀರ್‌ಖಾನ್, ಎಂ.ಬಿ.ರುಸ್ತುಂ, ಫಕ್ರುದ್ದೀನ್ ಅಹಮದ್, ಎಸ್‌ಡಿಎಂಸಿ ಅಧ್ಯಕ್ಷ ನಯಾಜ್, ಎಳೆಹೊಳೆ ಕುಮಾರ್, ಡಿ.ಕೆ.ಸಿದ್ದನಗೌಡ, ನಂದಿತಾವರೆ ರೇವಣಪ್ಪ, ಕೊಟ್ರೇಶ್ ನಾಯ್ಕ, ಹಳ್ಳಿಹಾಳ್ ಚಂದ್ರಶೇಖರ್ ಸೇರಿದಂತೆ, ಇನ್ನೂ ಅನೇಕರು ಭಾಗವಹಿಸಿದ್ದರು.

## ಗುಡ್‌ವಿಲ್ ಕಾನ್ವೆಂಟ್ ಶಾಲೆಯಲ್ಲಿ ಅಮೃತ ಮಹೋತ್ಸವ



ದಾವಣಗೆರೆ, ಆ. 22- ಗುಡ್‌ವಿಲ್ ಕಾನ್ವೆಂಟ್ ಶಾಲೆಯಲ್ಲಿ 76ನೇ ಸ್ವಾತಂತ್ರ ದಿನಾಚರಣೆಯನ್ನು ಆಚರಿಸಲಾಯಿತು. ಪಾಲಿಕೆ ಮಾಜಿ ಸದಸ್ಯ ಕೆ.ಆರ್. ಮಹಬೂಬ್ ಧ್ವಜಾರೋಹಣ ನೆರವೇರಿಸಿ ದರು. ಕಾರ್ಯಕ್ರಮದ ಅಧ್ಯಕ್ಷತೆ ಯನ್ನು ಗುಡ್‌ವಿಲ್ ಕಾನ್ವೆಂಟ್ ಶಾಲೆಯ ಕಾರ್ಯದರ್ಶಿ ಅಮಾನುಲ್ಲಾ ಖಾನ್ ವಹಿಸಿದ್ದರು.

ನಿರ್ದೇಶಕ ಖಾದರ್ ಬಾಷಾ ವಿಜೇತ ಮಕ್ಕಳಿಗೆ ಬಹುಮಾನ ವಿತರಿಸಿ ಮಾತನಾಡಿದರು. ಕಾರ್ಯಕ್ರಮ ದ ನಿರೂಪಣೆಯನ್ನು ಶಾಲೆಯ ಆಡಳಿತಾಧಿಕಾರಿ ಮೊಹಮ್ಮದ್ ತೌಸಿಫ್ ನಿರ್ವಹಿಸಿದರು. ಶಾಲೆಯ ಮುಖ್ಯ ಶಿಕ್ಷಕಿ ಶಬ್ನಮ್ ಸ್ವಾಗತಿಸಿದರು. ಶಿಕ್ಷಕಿ ಆಸಿಯಾ ವಂದಿಸಿದರು.

## ಪಂಚಮಸಾಲಿ ಮಹಿಳಾ ಘಟಕದಿಂದ ರಕ್ಷಾಬಂಧನ



ದಾವಣಗೆರೆ, ಆ. 22- ಜಿಲ್ಲಾ ಪಂಚಮಸಾಲಿ ಸಮಾಜದ ಕಚೇರಿಯಲ್ಲಿ ಮಹಿಳಾ ಘಟಕದ ವತಿಯಿಂದ ರಕ್ಷಾಬಂಧನ ಕಾರ್ಯಕ್ರಮ ಆಚರಿಸಲಾಯಿತು.

**ಸೈಟುಗಳು ಮಾರಾಟಕ್ಕಿವೆ**
ಜೆ.ಹೆಚ್. ಬಡಾವಣೆಯಲ್ಲಿ ಶಿವ-ಪಾರ್ವತಿ ಲೇಔಟ್‌ನಲ್ಲಿ 50x80 North, 60x84 East 30x84 East, 35x75 North, 40x84 East, 20x50 West
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟ್‌ಗಳು ಮಾರಾಟಕ್ಕಿವೆ**
ಹೈಟೆಕ್ ಹಾಸ್ಪಿಟಲ್ ರಸ್ತೆ, ಶಿರಡಿ ಸಾಯಿಬಾಬಾ ದೇವಸ್ಥಾನದ ಹಿಂಭಾಗ 30x50 ಪೂರ್ವ, ಅಕ್ಕ - ಪಕ್ಕ. ಸರಸ್ವತಿ ಬಡಾವಣೆ ಡಾಬಾ ಸ್ಟ್ಯಾಂಡ್ ಹತ್ತಿರ 30x50 ಪಶ್ಚಿಮ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮನೆ ಮಾರಾಟಕ್ಕಿದೆ**
ಕೊಂಡಜ್ಜಿ ರಸ್ತೆ, ರಾಜೀವ್ ಗಾಂಧಿ ಬಡಾವಣೆಯಲ್ಲಿ 20x30, ಸಿಮೆಂಟ್ ಸೀಟ್‌ನ ಮನೆ ಮಾರಾಟಕ್ಕಿದೆ. 18 ಲಕ್ಷಕ್ಕೆ
ಮೊಬೈಲ್ : 95910 67304
87488 70486, 97421 44715

**ನುರಿತ ಫೋಟೋಶಾಪ್ ಕೆಲಸಕ್ಕೆ ಬೇಕಾಗಿದ್ದಾರೆ**
ಸುರೇಶ್ ಇಮೇಜಸ್
ಪ್ಲೇಕ್ಸ್ ಬ್ಯಾನರ್ ಡಿಜಿಟಲ್ ಪ್ರಿಂಟಿಂಗ್ #750, ಚನ್ನಗಿರಿ ವಿರೂಪಾಕ್ಷಪ್ಪ ಕಾಂಪ್ಲೆಕ್ಸ್, ಗಡಿಯಾರ ಕಂಬದ ಹತ್ತಿರ, ದಾವಣಗೆರೆ.
ಮೊ : 98444 13334

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2ವರ್ಷ
ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್
ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಯಶಸ್ವಿ 15ನೇ ವರ್ಷದಲ್ಲಿ
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**WANTED**
FIELD OFFICER
FOR SAFAJ SECURITY & SERVICE
Walk in Interview
Date: 22&23.Aug.2022
Vinobanagar 3rd main Bus stop
88678 53961, 97437 56647

**ಬೇಕಾಗಿದೆ**
ಆವರಗೊಳ್ಳ ಗ್ರಾಮದಲ್ಲಿ ದಾವಣಗೆರೆ ಮೇನ್ ರೋಡಿಗೆ ಹೊಂದಿಕೊಂಡಿರುವ 20x30, 30x40 ಸೈಟ್ ಬೇಕಾಗಿದೆ. ಆವರಗೊಳ್ಳ ಬಸ್‌ಸ್ಟ್ಯಾಂಡ್‌ನಿಂದ ಕೇಂದ್ರಿಯ ವಿದ್ಯಾಲಯ ಸ್ಕೂಲ್ ಒಳಗೆ ಇರಬೇಕು.
ಫೋ. : 97315 66198

**ಬೇಕಾಗಿದ್ದಾರೆ**
ಮನೆಯಲ್ಲಿ ಅಡುಗೆ ಕೆಲಸಕ್ಕೆ ಲಿಂಗಾಯತ ಮಹಿಳೆ ಬೇಕಾಗಿದ್ದಾರೆ.
ಸಂಪರ್ಕಿಸಿ :
08192 254736

**ಸೈಟುಗಳು ಮಾರಾಟಕ್ಕಿವೆ**
40x60West ಇಂಡೋರ್ ಸ್ಟೇಡಿಯಂ ಹತ್ತಿರ, 40x60 ವಿವೇಕಾನಂದ ಬಡಾವಣೆಯಲ್ಲಿ 65x147 East ಗ್ಲಾಸ್ ಹೌಸ್ ಹತ್ತಿರ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ರೆಡಿಮೇಡ್ ಗಾರ್ಮೆಂಟ್ಸ್ ಶಾಪ್‌ನಲ್ಲಿ ಅನುಭವವಿರುವ ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ವೀರ್ ಕ್ರಿಯೇಷನ್ಸ್
ವಿಜಯಲಕ್ಷ್ಮೀ ರೋಡ್, ಗುಪ್ತ ಗೋಲ್ಡ್‌ಪ್ಯಾಲೇಸ್ ಎದುರು, ದಾವಣಗೆರೆ.
98447 36261, 96630 08996

**HAIRPOINT SALON**
BEAUTY & HAIR LOUNGE
Designation : Receptionist (only females) qualificatin : SSLC/PUC, Salary : 8,000 to 12,000 and also wanted house keeper salary 6000 to 7000, age limit 20-28 years
MCC B block, 7th main, 3rd cross
97386 64400, 91483 19342

**ಬೇಕಾಗಿದ್ದಾರೆ**
ತಕ್ಷಣ ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ.
ಕುಕ್ಕುವಾಡ ಶುಗರ್ ಫ್ಯಾಕ್ಟರಿನಲ್ಲಿ ಕೆಲಸ ಮಾಡಲು.
ಊಟ, ವಸತಿ ಸೌಲಭ್ಯ ಇದೆ
88678 53961, 91130 53483

**ಬೋರ್‌ವೆಲ್ ಮಷಿನ್ ಮಾರಾಟಕ್ಕೆ ಇದೆ**
ಶಾಮನೂರು ದೇವರ ಬೆಳಕೆರೆ ರಸ್ತೆ 5ಹೆಚ್.ಪಿ 10 ಸ್ಟೇಜ್, 5 ಹೆಚ್.ಪಿ 5 ಸ್ಟೇಜ್, 2" ಜಿ.ಐ ಪೈಪು 195 ಅಡಿ, L&T ಸ್ಟಾರ್ಟರ್. 40 ಸಾವಿರ ರೇಟ್‌ನಲ್ಲಿ ಮಾರಾಟಕ್ಕಿದೆ.
94828 18253

**WANTED EXPERIENCED LADY TEACHERS**
B.Sc. B.Ed, PCM/CBZ -2.
BA B.Ed -1.D.Ed -1
PUC WITH NTC : 3 POSTS
VINAYAKA PUBLIC SCHOOL
KONDAJJI ROAD.NEAR DEVANAGARI GAS GODOWN, DVG.
95356 10817

**ಉಷಾ ಟ್ರೇಡಿಂಗ್ ಕಂಪನಿ**
ಡರ್ಬಿ ಹೊಲಿಗೆ ಯಂತ್ರಗಳ ಅಧಿಕೃತ ಮಾರಾಟಗಾರರು ಹಾಗೂ ಎಲ್ಲಾ ಕಂಪನಿ ಹೊಲಿಗೆ ಯಂತ್ರಗಳ ಮಾರಾಟ ಹಾಗೂ ರಿಪೇರಿ ಮಾಡಲಾಗುವುದು. ಮಂಡಿಪೇಟೆ, ಗೂಡ್ಸ್ ಶೆಡ್ ರೋಡ್, ದಾವಣಗೆರೆ.
ಪ್ರೊ : ರತ್ನಾಕರ್ ಬಗರೆ
ಮೊ. 9448449617

**WANTED**
Ladies Below 40 Years
Experience in Super Market
Timings: 10.30 to 8.30
Salary: 7000 PM
Cindrella Chocolate,
1st Stop, Vidyanagar Dvg
74831 63876

**ಬೇಕಾಗಿದ್ದಾರೆ**
Basic Computer ಗೊತ್ತಿರುವ ಹಾಗೂ ಆಫೀಸ್ ಬಾಯ್ (Only Male)
ಸಮಯ: 9.30 to 5.30 PM
ಸಂಪರ್ಕಿಸಿ :
96064 39176
96207 54666

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**Alur Educational Trust (R)**
AHPS/ Bachpan School
P.J.Extension, Davanagere.
Wanted Hindi Teacher
Experienced preferred,
Fresher's can also apply.
99806 25110, 99019 56081

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**REQUIRED**
1) Sales Executive with Commerce graduation for marketing of TATA Power Solar Systems.
2) Diploma/ITI in Electrical for Solar Power instalation.
Basavashree solar technologies
Jayadeva circle, Davangere.
CONTACT : 99001 42052

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್
ಫೋ.: 95135 03000

**ADMISSION OPEN 2022**
**MBBS**
India & Abroad - NEET Required
MCC Screening test must be practice in India
Pharma. D, BSc. Nursing
P.B. BSc (N) D. Pharma
BPT, B.Pharm
B.Sc., MLT, Cardiac, Perfusion, Agri, Radiology*
Conditions Apply
99160 67627, 80501 08120

**ಸೈಟ್ ಬೇಕಾಗಿರುತ್ತದೆ**
ಶಿವಕುಮಾರಸ್ವಾಮಿ ಬಡಾವಣೆ, ತರಳಬಾಳು ಬಡಾವಣೆ, ವಿದ್ಯಾನಗರ
30x40, 30x50, 40x60
94482 32901
94492 66296

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆ ಮತ್ತು ದಾವಣಗೆರೆ ಸುತ್ತ ಮುತ್ತ ಪ್ರದೇಶಗಳಲ್ಲಿ ಸೆಕ್ಯೂರಿಟಿ ಗಾರ್ಡ್ ಕೆಲಸಕ್ಕೆ ಬೇಕಾಗಿದ್ದಾರೆ. ಆಕರ್ಷಕ ಸಂಬಳ ESI ಮತ್ತು PF ಸೌಲಭ್ಯವಿರುತ್ತದೆ. ಸಂಪರ್ಕಿಸಿ :
63667 28552
96060 50593

# ಪಿಎಫ್ಐ, ಎಸ್‌ಡಿಪಿಐ ಸಂಘಟನೆ ನಿಷೇಧದಿಂದ ಹಿಂದೂರಾಷ್ಟ್ರ ನಿರ್ಮಾಣ ಸಾಧ್ಯ

ದಾವಣಗೆರೆ, ಆ. 22- ಪಿಎಫ್ಐ ಮತ್ತು ಎಸ್‌ಡಿಪಿಐ ಸಂಘಟನೆಗಳನ್ನು ನಿಷೇಧಿಸಿದಾಗ ಮಾತ್ರ ಭಾರತ ಹಿಂದೂ ರಾಷ್ಟ್ರವಾಗಲು ಸಾಧ್ಯ ಎಂದು ಹಿಂದೂ ರಾಷ್ಟ್ರ ಸೇನೆ ಸಂಸ್ಥಾಪಕ ರಾಷ್ಟ್ರೀಯ ಅಧ್ಯಕ್ಷ ಧನಂಜಯ (ಬಾಯಿ) ಜಯರಾಂ ದೇಸಾಯಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಕೇರಳದಲ್ಲಿ ಆರಂಭವಾದ ಪಿಎಫ್ಐ, ಎಸ್‌ಡಿಪಿಐ ಹಾವಳಿ ದೇಶದೆಲ್ಲೆಡೆ ಹಬ್ಬಿದೆ. ಭಾರತವನ್ನು ಇಸ್ಲಾಮಿಕ್ ರಾಷ್ಟ್ರವನ್ನಾಗಿಸಲು ಹೊರಟಿದ್ದಾರೆ ಎಂದು ಕಿಡಿಕಾರಿದರು.

ಕರ್ನಾಟಕದಲ್ಲಿ ಹಿಜಾಬ್ ಪ್ರಕರಣದಲ್ಲಿ ಗೊಂದಲ ಸೃಷ್ಟಿಸಲಾಗಿತ್ತು. ಮಹಿಳೆಯನ್ನು ಬಂಧಿಸುವುದು ಹಿಜಾಬ್ ಸಂಸ್ಕೃತಿ. ಇದು ಭಾರತೀಯರ ಸಂಸ್ಕೃತಿ ಅಲ್ಲ. ಅರಬ್ ಸಂಸ್ಕೃತಿ. ಮಹಿಳೆಯರನ್ನು ಹಿಜಾಬ್ ಹಾಕಿ ಬಂಧನದಲ್ಲಿಡುವುದು ಸರಿಯಲ್ಲ. ಭಾರತೀಯ ಮಹಿಳೆಯರಿಗೆ ಪೂಜ್ಯನೀಯ ಸ್ಥಾನವಿದೆ. ಹಿಜಾಬ್ ಬಂಧನ ಸಲ್ಲದು ಎಂದು ಹೇಳಿದರು.

ಶಾಲಾ-ಕಾಲೇಜುಗಳ ಗಣೇಶೋತ್ಸವದಲ್ಲಿ ಪೂಜೆ ಮಾಡುವುದಿಲ್ಲ ಎಂದು ಮುಸ್ಲಿಮರಿಗೆ ಹೇಳಿದ್ದಾರೆ. ನಮಾಜ್ ಮಾಡುವುದಾಗಿ ಹೇಳುತ್ತಿರುವುದು ಖಂಡನೀಯ ಎಂದರು.

ಭಾರತವನ್ನು ಇಸ್ಲಾಮಿಕ್ ರಾಷ್ಟ್ರ ಮಾಡುವುದಾಗಿ ದೇಶದಲ್ಲಿ ಗಲಭೆ ಸೃಷ್ಟಿಸಲು ಮುಂದಾಗಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ವೀರ ಸಾವರ್‌ಕರ್ ಅವರಿಗೆ ಅಪಮಾನ ಮಾಡಲಾಗಿದೆ. ಟಿಪ್ಪು ಜಯಂತಿ ಆಚರಣೆಗೆ ಮುಂದಾಗಿರುವುದು ಸರಿಯಲ್ಲ ಎಂದು ತಿಳಿಸಿದರು.

ರಾಜ್ಯ ಪ್ರವಕ್ತ ಕೆ.ಎನ್. ಸಂದೀಪ್ ಮಾತನಾಡಿ, ಮಧ್ಯಕರ್ನಾಟಕ ದಾವಣಗೆರೆಯಿಂದ ಸಂಘಟನೆ ಪ್ರಾರಂಭವಾಗಿದೆ. ಹಿಂದುತ್ವ, ಹಿಂದೂಗಳ ರಕ್ಷಣೆ, ಹಿಂದೂ ಧರ್ಮದ ಉಳಿವಿಗೆ ಸೇನೆ ಸದಾ ಸಿದ್ಧವಾಗಿರುತ್ತದೆ ಎಂದರು.

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಸಂಘಟನೆ ಮಾಡುವ ಜೊತೆಗೆ ಶೀಘ್ರವೇ ರಾಜ್ಯ ಬೈಠಕ್ ಸಹ ನಡೆಸಲಾಗುವುದು. ಯಾವುದೇ ರಾಜಕೀಯ ಪಕ್ಷದ ಪರ ನಿಲ್ಲುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಶ್ರೀಕಾಂತ್, ಪ್ರಭಾಕರ್, ಬಿ.ಕೆ. ಗುರುಬಸಪ್ಪ, ಕಿರಣ್, ಎಸ್.ಬಿ. ಸುರೇಶ್ ಮತ್ತಿತರರಿದ್ದರು.

# ಹಾಸ್ಟೆಲ್ ವ್ಯವಸ್ಥೆ, ವಿದ್ಯಾರ್ಥಿ ವೇತನ ಹೆಚ್ಚಳಕ್ಕೆ ಆಗ್ರಹ




## ಪರಿಶಿಷ್ಟ ಪಂಗಡ ನಾಯಕ ಸಮಾಜದ ವಿದ್ಯಾರ್ಥಿಗಳ ಪ್ರತಿಭಟನೆ

ದಾವಣಗೆರೆ, ಆ.22- ಪರಿಶಿಷ್ಟ ಪಂಗಡದ ನಾಯಕ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ವ್ಯವಸ್ಥೆ ಹಾಗೂ ವಿದ್ಯಾರ್ಥಿ ವೇತನ ಹೆಚ್ಚಿಸುವಂತೆ ಒತ್ತಾಯಿಸಿ, ನಾಯಕ ವಿದ್ಯಾರ್ಥಿ ಸಂಘದ ನೇತೃತ್ವದಲ್ಲಿ ಪರಿಶಿಷ್ಟ ಪಂಗಡ ನಾಯಕ ಸಮಾಜದ ವಿದ್ಯಾರ್ಥಿಗಳು ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಇಂದು ಪ್ರತಿಭಟನೆ ನಡೆಸಿದರು.

ನಂತರ ಜಿಲ್ಲಾಧಿಕಾರಿ ಶಿವಾನಂದ ಕಪಾಸಿ ಮುಖಾಂತರ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಸಮಾಜದ ಹಿರಿಯ ಮುಖಂಡ, ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ರಾಜ್ಯಾಧ್ಯಕ್ಷ ಹುಚ್ಚವ್ವನಹಳ್ಳಿ ಮಂಜುನಾಥ ಮಾತನಾಡಿ, ರಾಜ್ಯ ಸರ್ಕಾರವು ಜಿಲ್ಲೆಯಲ್ಲಿ ಪರಿಶಿಷ್ಟ ಪಂಗಡದ ಎಸ್ಟಿ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಆರಂಭಿಸುವಂತೆ ಆದೇಶ ಹೊರಡಿಸಿದೆ. ಆದರೆ, ಜಿಲ್ಲೆಯ ಪರಿಶಿಷ್ಟ ವರ್ಗಗಳ ಇಲಾಖೆ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಹಾಸ್ಟೆಲ್ ಇನ್ನೂ ಕಾರ್ಯಾರಂಭ ಮಾಡಿಲ್ಲ. ತಕ್ಷಣವೇ ಸ್ವಂತ ಕಟ್ಟಡವಲ್ಲದಿದ್ದರೂ ಬಾಡಿಗೆ ಕಟ್ಟಡದಲ್ಲಾದರೂ ಹಾಸ್ಟೆಲ್ ಆರಂಭಿಸಬೇಕು ಎಂದು ಒತ್ತಾಯಿಸಿದರು.


ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಾರ್ಷಿಕ ವಿದ್ಯಾರ್ಥಿ ವೇತನವನ್ನು ಹೆಚ್ಚಿಸುವಂತೆ ಸಮಾಜ, ಸಮಾಜದ ವಿದ್ಯಾರ್ಥಿಗಳು ಹಿಂದಿನಿಂದಲೂ ಒತ್ತಾಯಿಸಿಕೊಂಡೇ ಬಂದಿದ್ದೇವೆ. 1ರಿಂದ 4ನೇ ತರಗತಿ ಮಕ್ಕಳಿಗೆ 10 ಸಾವಿರ ರು., 5ರಿಂದ 10ನೇ ತರಗತಿ ಮಕ್ಕಳಿಗೆ 20 ಸಾವಿರ ರೂ. ಪಿಯು ವಿದ್ಯಾರ್ಥಿಗಳಿಗೆ 30 ಸಾವಿರ ರೂ. ಪದವಿ ವಿದ್ಯಾರ್ಥಿಗಳಿಗೆ 50 ಸಾವಿರ ರೂ. ವಾರ್ಷಿಕ ವಿದ್ಯಾರ್ಥಿ ವೇತನ ನೀಡುವ ಕೆಲಸವನ್ನು ಸರ್ಕಾರ ಪ್ರಸಕ್ತ ಸಾಲಿನಿಂದಲೇ ಆರಂಭಿಸಬೇಕು ಎಂದು ಆಗ್ರಹಿಸಿದರು.

ಹಾಸ್ಟೆಲ್ ಸ್ಥಾಪಿಸಲು ಜಿಲ್ಲಾಡಳಿತಕ್ಕೆ ಸರ್ಕಾರವು ಹಣ ಸಂದಾಯ ಮಾಡಿದ್ದರೂ ಸಹ ಈವರೆಗೆ ನಿವೇಶನ ಒದಗಿಸಲು ಆಡಳಿತ ಯಂತ್ರ ನಿರ್ಲಕ್ಷ್ಯ ತೋರುತ್ತಿದೆ. ಪರಿಶಿಷ್ಟ ಪಂಗಡದ ನಾಯಕ ವಿದ್ಯಾರ್ಥಿಗಳ ಭವಿಷ್ಯ, ಶಿಕ್ಷಣ ಬಗ್ಗೆ ಅಧಿಕಾರಿ ವರ್ಗಕ್ಕೆ, ಜನ ಪ್ರತಿನಿಧಿಗಳಿಗೆ ಅದ್ಯಾವ ಪರಿ ಕಾಳಜಿ, ಕಳಕಳಿ ಇದೆಯೆಂಬುದನ್ನು ಇಂತಹ ನಿರ್ಲಕ್ಷ್ಯ ಧೋರಣೆಯೇ ಸಾಬೀತುಪಡಿಸುತ್ತಿದೆ. ಇನ್ನಾದರೂ ನಾಯಕ ಹಾಸ್ಟೆಲ್ ನಿರ್ಮಾಣಕ್ಕೆ ಜಾಗ ಮಂಜೂರು ಮಾಡಿ, ನಿರ್ಮಾಣ ಕಾರ್ಯ ಆರಂಭಿಸಲಿ ಎಂದು ತಾಕೀತು ಮಾಡಿದರು.

ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ನಾಯಕ ಹಾಸ್ಟೆಲ್ ನಿಲಯ ಕಟ್ಟಬೇಕು. 1-7ನೇ ತರಗತಿ ವಿದ್ಯಾರ್ಥಿನಿಯರಿಗೆ 15 ಸಾವಿರ, 8ರಿಂದ 10ನೇ ತರಗತಿಗೆ 25 ಸಾವಿರ, ಪಿಯುಸಿಗೆ 35 ಸಾವಿರ, ಪದವಿಯವರಿಗೆ 55 ಸಾವಿರ ವಿದ್ಯಾರ್ಥಿ ವೇತನವನ್ನು ಸರ್ಕಾರ ನೀಡಬೇಕು ಎಂದು ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ಸಮಾಜದ ಯುವ ಮುಖಂಡರಾದ ರಾಜನಹಳ್ಳಿ ರಾಜು, ಬೇವಿನಹಳ್ಳಿ ಮಿಥುನ್, ನಕ್ಷತ್ರ ನಾಯಕ, ಕಡಬಗೆರೆ ಅಜ್ಜಯ್ಯ, ಜಗಳೂರು ಶರಣು, ರಾಜನಹಳ್ಳಿ ಆಂಜನೇಯ, ಸರಗನಹಳ್ಳಿ ಗಣೇಶ, ಹನುಮಂತ, ಅಭಿ ಜಗಳೂರು, ಕೆರೆಯಾಗಳಹಳ್ಳಿ ಮಾನು, ಬಾಡ ಯಶವಂತ, ಅಜ್ಜಯ್ಯ ವಾಲ್ಮೀಕಿ, ಮೈಸೂರು ರಮೇಶ, ಹನುಮಂತಪ್ಪ, ಚೌಡಪ್ಪ ಸೇರಿದಂತೆ ಇತರರು ಭಾಗವಹಿಸಿದ್ದರು.

## ವಡೇರಹಳ್ಳಿಯಲ್ಲಿ ಇಂದು ಶ್ರೀ ಚೌಡೇಶ್ವರಿ ದೇವಿ ಉತ್ಸವ



ದಾವಣಗೆರೆ ತಾಲ್ಲೂಕು ಕೊಡಗನೂರು ಗ್ರಾಮ ಪಂಚಾಯ್ತಿ ವ್ಯಾಪ್ತಿಯ ವಡೇರಹಳ್ಳಿಯಲ್ಲಿ ಶ್ರೀ ಚೌಡೇಶ್ವರಿ ದೇವಿಯ ಉತ್ಸವ ಇಂದು ನಡೆಯಲಿದೆ. ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ.

## ಚುನಾವಣೆಗೆ ತಡೆಯಾಜ್ಞೆ

ದಾವಣಗೆರೆ, ಆ. 22- ಆದಿ ಕರ್ನಾಟಕ ವಿದ್ಯಾಭಿವೃದ್ಧಿ ಸಂಘದ ಕಾರ್ಯಕಾರಿ ಸಮಿತಿ ಆಯ್ಕೆಗಾಗಿ ನಿಗದಿಪಡಿಸಲಾಗಿದ್ದ ಚುನಾವಣೆಗೆ ಹೈ ಕೋರ್ಟ್ ತಡೆಯಾಜ್ಞೆ ನೀಡಿದೆ ಎಂದು ಸಂಘದ ಜಂಟಿ ಕಾರ್ಯದರ್ಶಿ ಡಿ. ಗಂಗಾಧರಪ್ಪ ತಿಳಿಸಿದ್ದಾರೆ. ಚುನಾವಣೆಯು ಸಂಘದ ಕಾನೂನುಗಳಿಗೆ ವಿರುದ್ಧವಾಗಿದ್ದು, ಇದೇ ದಿನಾಂಕ 21 ರಂದು ನಡೆಯಬೇಕಾಗಿದ್ದ ಚುನಾವಣಾ ಪ್ರಕ್ರಿಯೆಯನ್ನು ಹೈಕೋರ್ಟ್ ಸ್ಥಗಿತಗೊಳಿಸಿದೆ ಎಂದು ಅವರು ತಿಳಿಸಿದ್ದಾರೆ.

## ಮಲ್ಲನಾಯ್ಕನಹಳ್ಳಿ ಬಸವಣ್ಣನ ಕಾರಣಿಕ



ಮಲೇಬೆನ್ನೂರು, ಆ.22- ಸಂಕ್ಲೀಪು ರದ ಮೂಕ ಬಸವಣ್ಣನ ಸನ್ನಿಧಿಯಲ್ಲಿ ಸೋಮವಾರ ಸಂಜೆ ಮಲ್ಲನಾಯ್ಕನ ಹಳ್ಳಿಯ ಶ್ರೀ ಬಸವೇಶ್ವರ ದೇವರ ಕಾರಣಿಕ ಸಂಭ್ರಮದಿಂದ ನಡೆಯಿತು. 'ಕರಿಯ ಕಂಬಳಿ ಮೇಲೆ ಅಮೃತ ಚೆಲ್ಲೀ ತಲೇ ಪರಾಕ್' ಎಂದು ಪೂಜಾರಪ್ಪ ಬಿಲ್ಲುವರಿ ಕಾರಣಿಕ ನುಡಿದರು.

## ಎಕ್ಕೆಗೊಂದಿಯಲ್ಲಿ ನಡೆದ ಭಾನುವಳ್ಳಿ ಬಸವಣ್ಣನ ಕಾರಣಿಕ



ಮಲೇಬೆನ್ನೂರು, ಆ. 22- ಶ್ರಾವಣ ಮಾಸದ ಕಡೇ ಸೋಮವಾರದ ಅಂಗವಾಗಿ ಎಕ್ಕೆಗೊಂದಿಯಲ್ಲಿ ಸೋಮವಾರ ರಾತ್ರಿ ಜರುಗಿದ ಭಾನುವಳ್ಳಿಯ ಬಸವೇಶ್ವರ ದೇವರ ಕಾರಣಿಕಕ್ಕೆ ಅಪಾರ ಭಕ್ತರು ಸಾಕ್ಷಿಯಾದರು. 'ಒಂಭತ್ತು ಮುತ್ತಿಗೆ ಎರಡು ಮುತ್ತು ಗಂಗೆ ಪಾಲಾದೀತು ಸಂಪು ಪರಾಕಲೇ' ಎಂದು ಪೂಜಾರಪ್ಪ ಕಾರಣಿಕ ನುಡಿದರು.

## ಕೃಷಿ ಪ್ರಶಸ್ತಿ ಸ್ಪರ್ಧೆಗೆ ಅರ್ಜಿ ಆಹ್ವಾನ

ದಾವಣಗೆರೆ,ಆ.22- 2022-23ನೇ ಸಾಲಿನ ಕೃಷಿ ಪ್ರಶಸ್ತಿ ಬೆಳೆ ಸ್ಪರ್ಧೆಗೆ ಅರ್ಜಿಗಳನ್ನು ಆಹ್ವಾನಿಸಿದ್ದು, ಜಿಲ್ಲಾ ಮಟ್ಟಕ್ಕೆ ಮುಸುಕಿನಜೋಳ (ಮಳೆಯಾಶ್ರಿತ) ಬೆಳೆಯನ್ನು ನಿಗದಿಪಡಿಸಲಾಗಿದ್ದು, ತಾಲ್ಲೂಕು ಮಟ್ಟಕ್ಕೆ ದಾವಣಗೆರೆ, ಚನ್ನಗಿರಿ, ಹರಿಹರ ಹಾಗೂ ಹೊನ್ನಾಳಿ ತಾಲ್ಲೂಕುಗಳಿಗೆ ಭತ್ತ (ನೀರಾವರಿ) ಮತ್ತು ನ್ಯಾಮತಿ ತಾಲ್ಲೂಕಿಗೆ ಶೇಂಗಾ (ಮಳೆಯಾಶ್ರಿತ) ಹಾಗೂ ಜಗಳೂರು ತಾಲ್ಲೂಕಿಗೆ ಮುಸುಕಿನ ಜೋಳ (ಮಳೆಯಾಶ್ರಿತ) ಬೆಳೆಗಳನ್ನು ನಿಗದಿಪಡಿಸಲಾಗಿದೆ.

**ಅರ್ಜಿ ಸಲ್ಲಿಸಲು ಕೊನೆಯ ದಿನಾಂಕಗಳು:** ಮುಂಗಾರು ಹಂಗಾಮಿಗೆ 31ನೇ ಆಗಸ್ಟ್ 2022, ಹಿಂಗಾರು ಹಂಗಾಮಿಗೆ 30ನೇ ನವೆಂಬರ್ 2022 ಆಗಿರುತ್ತವೆ. ಪ್ರಸಕ್ತ ಸಾಲಿನಲ್ಲಿ ಕೃಷಿ ಪ್ರಶಸ್ತಿಗೆ ಪ್ರತ್ಯೇಕವಾಗಿ ಮಹಿಳೆಯರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ರೈತ ಸಂಪರ್ಕ ಕೇಂದ್ರ/ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗಳನ್ನು ಸಂಪರ್ಕಿಸಲು ಜಂಟಿ ಕೃಷಿ ನಿರ್ದೇಶಕರ ಕಛೇರಿ ಪ್ರಕಟಣೆ ತಿಳಿಸಿದೆ.

## ಮಲೇಬೆನ್ನೂರು : ಕ್ರೀಡಾಕೂಟಕ್ಕೆ ಚಾಲನೆ



ಮಲೇಬೆನ್ನೂರು, ಆ.22- ಇಲ್ಲಿನ ಜಾಮಿಯಾ ನ್ಯಾಷನಲ್ ಉರ್ದು ಪ್ರೌಢಶಾಲೆ ಆವರಣದಲ್ಲಿ ವಲಯ ಮಟ್ಟದ ಕ್ರೀಡಾಕೂಟ ಗುರುವಾರ ಜರುಗಿತು. ಕಾರ್ಯಕ್ರಮ ಉದ್ಘಾಟಿಸಿದ ಪುರಸಭೆ ಸದಸ್ಯರಾದ ಕೆ.ಜಿ. ಲೋಕೇಶ್, ಸಾಬೀರ್ ಅಲಿ ಮಾತನಾಡಿದರು. ಶಾಲೆಯ ಆಡಳಿತ ಮಂಡಳಿಯ ಅಧ್ಯಕ್ಷ ಶೌಕತ್ ಅಲಿ ಖಾನ್ ಕ್ರೀಡಾ ಧ್ವಜಾರೋಹಣ ನೆರವೇರಿಸಿದರು.

ಆಡಳಿತ ಮಂಡಳಿಯ ಸದಸ್ಯ ಅಬ್ದುಲ್ ಮಾಜಿದ್ ಕ್ರೀಡಾ ಜ್ಯೋತಿಗೆ ಚಾಲನೆ ನೀಡಿದರು. ಚಮನ್ ಷಾ, ನಸ್ರುಲ್ಲಾ, ಪುರಸಭೆ ಸದಸ್ಯರಾದ ದಾದಾಪೀರ್, ಖಲೀಲ್, ನಯಾಜ್, ಭೋವಿ ಕುಮಾರ್, ಭೋವಿ ಶಿವು, ಶಬ್ಬೀರ್ ಸಾಬ್, ಹನುಮಂತಪ್ಪ, ಯೂಸೂಫ್ ಖಾನ್ ಸೇರಿದಂತೆ ವಿವಿಧ ಶಾಲೆಗಳ ದೈಹಿಕ ಶಿಕ್ಷಕರು, ಜಾಮಿಯಾ ನ್ಯಾಷನಲ್ ಉರ್ದು ಶಾಲೆಯ ಶಿಕ್ಷಕರು ಉಪಸ್ಥಿತರಿದ್ದರು.

## ನಂದಗೋಕುಲದಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ



ದಾವಣಗೆರೆ, ಆ. 22- ನಂದಗೋಕುಲ ಶಾಲೆಯಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿಯ ಪ್ರಯುಕ್ತ ನರ್ಸರಿ ವಿಭಾಗದ ಎಲ್ಲಾ ಮಕ್ಕಳು ಕೃಷ್ಣ ಹಾಗೂ ರಾಧೆಯ ವೇಷಭೂಷಣದಲ್ಲಿ ಕಾಣಿಸಿಕೊಂಡು ಸಂಭ್ರಮಿಸಿದರು.

# ಕಾಂಗ್ರೆಸ್‌ನಿಂದ ರಾಜೀವ್-ಅರಸು ಜನ್ಮದಿನ



ದಾವಣಗೆರೆ, ಆ. 22- ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಮಾಜಿ ಪ್ರಧಾನಿ, ಯುವಕರ ಕಣ್ಮಣಿ, ಆಧುನಿಕ ಭಾರತದ ಕನಸುಗಾರ, ತಂತ್ರಜ್ಞಾನದ ಪಿತಾಮಹ ದಿ॥ ರಾಜೀವ್ ಗಾಂಧಿ ಹಾಗೂ ಮಾಜಿ ಮುಖ್ಯಮಂತ್ರಿ ದೀನ ದಲಿತ, ಹಿಂದುಳಿದ ವರ್ಗ, ಬಡವರ ಆಶಾಕಿರಣ ದಿ॥ ದೇವರಾಜ್ ಅರಸು ಅವರ ಜನ್ಮ ದಿನದ ಕಾರ್ಯಕ್ರಮವನ್ನು ಜಿಲ್ಲಾ ಕಾಂಗ್ರೆಸ್ ಪಕ್ಷದ ಕಚೇರಿಯ ಎಸ್. ಎಸ್. ಭವನದಲ್ಲಿ ಆಯೋಜಿಸಲಾಗಿತ್ತು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯ ದರ್ಶಿ ಎಸ್.ಮಲ್ಲಿಕಾರ್ಜುನ್ ಮಾತನಾಡಿ, ರಾಜೀವ್‌ಗಾಂಧಿ ಅತಿ ಚಿಕ್ಕ ವಯಸ್ಸಿನ ಪ್ರಧಾನಮಂತ್ರಿ. ದೇಶಕ್ಕೆ ತಂತ್ರಜ್ಞಾನದ ಪರಿಚಯ ಮಾಡಿಸಿದ್ದರು ಎಂದರು.

ದೀನ ದಲಿತರ ನಾಯಕ ಹಿಂದುಳಿದ ವರ್ಗಗಳ ಬಡವರ ಏಳಿಗೆಗಾಗಿ ಭೂ ಸುಧಾರಣೆ ಕಾಯ್ದೆಯನ್ನು ತಂದು 'ಉಳುವವನೇ ಒಡೆಯ' ಎಂದು ಬಡವ ರಿಗೂ ಜಮೀನು ಸಿಗುವಂತೆ ಮಾಡಿ ಎಲ್ಲರೂ ಸಮಾನರಾಗಿ ಜೀವನ ಮಾಡಬೇಕು ಎಂದು ಸದಾ ಬಡವರ ಏಳಿಗೆಗಾಗಿ ದುಡಿಯುತ್ತಿದ್ದ ಮಹಾನ್ ನಾಯಕ ದೇವರಾಜ ಅರಸ್ ಎಂದು ತಿಳಿಸಿದರು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಮಾತನಾಡಿ ,ಜವಾಹರ್‌ಲಾಲ್ ನೆಹರು ನಂತರ ಶಿಕ್ಷಣಕ್ಕೆ ಒತ್ತು ನೀಡಿ ದೇಶದ ಅಭಿವೃದ್ಧಿ ಯುವಕರಿಂದ ಮತ್ತು ಶಿಕ್ಷಣದಿಂದ ಮಾತ್ರ ಸಾಧ್ಯ ಎಂದು ರಾಜೀವ್ ಗಾಂಧಿ ಅವರು ಪ್ರತಿಪಾದಿಸಿದರು ಎಂದರು. ದೇವರಾಜ ಅರಸು ಅವರೂ ಸಹ ಕೇವಲ ಶ್ರೀಮಂತರು ಮಾತ್ರ ಶ್ರೀಮಂತ ರಾಗಿ ಉಳಿಯದೇ ಬಡವರು ಗೌರವದ ಜೀವನ ನಡೆಸಬೇಕು ಎಂದು ಭೂ ಸುಧಾರಣೆ ಕಾಯ್ದೆ ತಂದು ಎಲ್ಲರನ್ನೂ ಸಮಾನರನ್ನಾಗಿ ಕಾಣುವಂತೆ ಮಾಡಿದರು ಎಂದರು.

ಜಿಲ್ಲಾ ಸಾಮಾಜಿಕ ಜಾಲತಾಣದ ಅಧ್ಯಕ್ಷ ಹರೀಶ್ ಕೆ.ಎಲ್. ಬಸಾಪುರ ಮಾತನಾಡಿ, 18 ವರ್ಷದ ಯುವಕರಿಗೆ ಮತದಾನದ ಹಕ್ಕು ನೀಡುವ ಮೂಲಕ ಯುವಕರು ದೇಶದ ಆಸ್ತಿ ಎಂಬುದನ್ನು ತೋರಿಸಿಕೊಟ್ಟ ರಾಜೀವ್ ಗಾಂಧಿ ಅವರು ಕೇವಲ 7-8 ವರ್ಷ ರಾಜಕಾರಣ ಮಾಡಿದರೂ ಸಹ ಇತಿಹಾಸ ಪುಟಗಳಲ್ಲಿ ಸೇರಿದ್ದರು ಎಂದರು.

ದೇವರಾಜ ಅರಸು ಅವರು ಎಲ್.ಜಿ. ಹಾವನೂರು ವರದಿಯನ್ನು ಜಾರಿಗೆ ತರುವ ಮೂಲಕ ಹಿಂದುಳಿದ ವರ್ಗಕ್ಕೆ ಸರ್ಕಾರಿ ಉದ್ಯೋಗ ದಲ್ಲಿ ಮೀಸಲಾತಿ ನೀಡಿದ್ದಲ್ಲದೇ ಒಣಭೂಮಿ ಬೇಸಾಯಕ್ಕೆ ಪ್ರೋತ್ಸಾಹ, ಸಣ್ಣ ಕೈಗಾರಿಕೆಗಳ ಸ್ಥಾಪನೆ, ಭಾಗ್ಯಜ್ಯೋತಿ ಯೋಜನೆ, ಯುವ ರಾಜಕಾರಣಿಗಳನ್ನು ಮುನ್ನೆಲೆಗೆ ತಂದ ಕೀರ್ತಿ ಸಲ್ಲುತ್ತದೆ ಎಂದರು.

ಯುವ ಕಾಂಗ್ರೆಸ್ ಜಿಲ್ಲಾ ಉಪಾಧ್ಯಕ್ಷ ಎಲ್. ಹೆಚ್.ಸಾಗರ್, ಎನ್‌ಎಸ್‌ಯುಐ ಜಿಲ್ಲಾಧ್ಯಕ್ಷ ಅಲಿ ರೆಹಮತ್, ಕಾಂಗ್ರೆಸ್ ಎಸ್ಸಿ ಘಟಕದ ರಾಕೇಶ್ ಮಾತನಾಡಿದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಜಿ.ಶಿವಕುಮಾರ್, ಶಿರಮಗೊಂಡನಹಳ್ಳಿ ರುದ್ರೇಶ್, ಮಹಿಳಾ ಕಾಂಗ್ರೆಸ್‌ನ ದ್ರಾಕ್ಷಾಯಣಮ್ಮ, ರಾಜೇಶ್ವರಿ, ಜಿಕ್ರಿಯಾ, ಜಾನ್, ರುದ್ರಮುನಿಸ್ವಾಮಿ, ಬೆಳ್ಳೂಡಿ ರಾಜು, ಸುಭಾನ್ ಸಾಬ್, ಯುವರಾಜ್, ಸತೀಶ್ ಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.

## ಸ್ವಾತಂತ್ರ್ಯ ಹೋರಾಟಗಾರರ ಚಿತ್ರ ತೆಗೆದು ಮೋದಿ ಚಿತ್ರ

ಶಹಜಹಾನ್‌ಪುರ, ಆ. 22 - ಉತ್ತರ ಪ್ರದೇಶದ ಶಹಜಹಾನ್‌ಪುರದ ಗುರುಕುಲ ಸಂಸ್ಕೃತ್ ಮಹಾವಿದ್ಯಾಲಯದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಚಿತ್ರವನ್ನು ತೆರವುಗೊಳಿಸಿ, ಆ ಜಾಗದಲ್ಲಿ ಪ್ರಧಾನ ಮಂತ್ರಿ, ಮುಖ್ಯಮಂತ್ರಿ ಹಾಗೂ ಸ್ಥಳೀಯ ಬಿಜೆಪಿ ನಾಯಕರೊಬ್ಬರ ಚಿತ್ರ ಅಳವಡಿಸಲಾಗಿದೆ ಎಂದು ಪ್ರತಿಭಟನೆ ನಡೆಸಲಾಗಿದೆ.

ಸ್ವಾತಂತ್ರ್ಯ ಹೋರಾಟಗಾರ ಸತ್ಯದೇವ ಶಾಸ್ತ್ರಿ ಅವರ ಸಂಬಂಧಿಗಳೂ ಸಹ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು. ತಿಲ್ಹಾರ್ ಕ್ಷೇತ್ರದ ಬಿಜೆಪಿ ಶಾಸಕಿ ಸಲೊನಾ ಕುಶ್ವಾಹಾ ಅವರ ಸೂಚನೆಯ ಮೇರೆಗೆ ಸ್ವಾತಂತ್ರ್ಯ ಹೋರಾಟಗಾರರ ಚಿತ್ರಗಳನ್ನು ತೆಗೆದು ಆ ಜಾಗಕ್ಕೆ ಪ್ರಧಾನಿ ನರೇಂದ್ರ ಮೋದಿ, ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಹಾಗೂ ಶಾಸಕಿ ಕುಶ್ವಾಹಾ ಚಿತ್ರ ಹಾಕಲಾಗಿದೆ ಎಂದು ಸಾರ್ವಜನಿಕರು ದೂರಿದ್ದಾರೆ. ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಸ್ವಾತಂತ್ರ್ಯ ಹೋರಾಟಗಾರ ಸತ್ಯದೇವ ಶಾಸ್ತ್ರಿ ಅವರ ಸಂಬಂಧಿಗಳು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದಾರೆ. ರಾಜಕೀಯ ನಾಯಕರ ಚಿತ್ರಗಳನ್ನು ತೆಗೆದು, ಮೊದಲಿದ್ದಂತೆ ಸ್ವಾತಂತ್ರ್ಯ ಹೋರಾಟಗಾರರ ಚಿತ್ರ ಹಾಕುವಂತೆ ಒತ್ತಾಯಿಸಿದ್ದಾರೆ ಎಂದು ಕಾಲೇಜಿನ ಪ್ರಾಂಶುಪಾಲರು ತಿಳಿಸಿದ್ದಾರೆ. ಪ್ರತಿಭಟನೆಯ ಬಗ್ಗೆ ತಿಳಿದ ನಂತರ ಸ್ಥಳಕ್ಕೆ ತೆರಳಿ ಫಲಕವನ್ನು ಬದಲಿಸಿದ್ದೇನೆ. ನನ್ನ ವಿರುದ್ಧ ಸಂಚು ನಡೆಸಲಾಗಿದೆ. ಗುತ್ತಿಗೆದಾರರ ತಪ್ಪಿನಿಂದ ಈ ರೀತಿ ಆಗಿದೆ ಎಂದು ಶಾಸಕಿ ಕುಶ್ವಾಹಾ ಹೇಳಿದ್ದಾರೆ.

## ಕ್ರೀಡಾಕೂಟಕ್ಕೆ ಕಾರ್ತಿಕ್ ಆಯ್ಕೆ



ದಾವಣಗೆರೆ, ಆ. 22- ನಂದಿಗುಡಿಯಲ್ಲಿ ನಡೆದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ವಲಯ ಮಟ್ಟದ ಕ್ರೀಡಾಕೂಟದಲ್ಲಿ ಮಲೇಬೆನ್ನೂರಿನ ರಾಜ ರಾಜೇಶ್ವರಿ ಪ್ರೌಢಶಾಲೆಯ 10 ನೇ ತರಗತಿ ವಿದ್ಯಾರ್ಥಿ ಓ.ಜಿ. ಕಾರ್ತಿಕ್ ಅಥ್ಲೆಟಿಕ್ಸ್ ವಿಭಾಗದ ಉದ್ದ ಜಿಗಿತ ಸ್ಪರ್ಧೆಯಲ್ಲಿ 2 ನೇ ಸ್ಥಾನ ಗಳಿಸುವ ಮೂಲಕ ತಾಲ್ಲೂಕು ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾನೆ.

## ನಗರದಲ್ಲಿ ಇಂದು ವಚನ ಕಂಠಪಾಟ ಸ್ಪರ್ಧೆ

ಬಸವಕೇಂದ್ರ, ಶ್ರೀ ಮುರುಘ ರಾಜೇಂದ್ರ ವಿರಕ್ತಮಠ ಇವರ ಜಂಟಿ ಆಶ್ರಯದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ವಿರಕ್ತಮಠದಲ್ಲಿ ವಚನ ಕಂಠಪಾಠ ಸ್ಪರ್ಧೆಯ ಉದ್ಘಾಟನಾ ಸಮಾರಂಭ ನಡೆಯಲಿದೆ.

ಅಧ್ಯಕ್ಷತೆಯನ್ನು ಶ್ರೀ ಬಸವಪ್ರಭು ಸ್ವಾಮೀಜಿ ವಹಿಸುವರು. ಕಾರ್ಯಕ್ರಮವನ್ನು ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಪ್ರವಚನಕಾರರಾದ ಶ್ರೀ ಕುಮಾರಶಾಸ್ತ್ರೀಗಳು, ಶ್ರೀ ವಿಭೂತಿ ಬಸವಾನಂದ ಶರಣರು ಆಗಮಿಸುವರು. ಶ್ರೀ ಚಿಗಟೇರಿ ಜಯದೇವದ ಸದಸ್ಯರು ಉಪಸ್ಥಿತರಿರುವರು.

# ಕಸಾಪಗೆ ಆಜೀವ ಸದಸ್ಯರಾಗಲು ಕರೆ



ದಾವಣಗೆರೆ,ಆ. 22- ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿಗೆ ಆಜೀವ ಸದಸ್ಯತ್ವ ಪಡೆಯಲು ರೂ. 250 ಆನ್‌ಲೈನ್ ಮೂಲಕವೇ ಪಾವತಿಸಿ ಸದಸ್ಯತ್ವ ಪಡೆಯುವ ಸದಾವಕಾಶವನ್ನು 18 ವರ್ಷ ತುಂಬಿದ ಪ್ರತಿಯೊಬ್ಬ ಕನ್ನಡಿಗರಿಗೂ ಕಲ್ಪಿಸಲಾಗಿದೆ ಎಂದು ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ತಿಳಿಸಿದ್ದಾರೆ.

ಪರಿಷತ್ತನ್ನು ಜನಸಾಮಾನ್ಯರ ಪರಿಷತ್ತನ್ನಾಗಿ ಮಾಡುವ ಸದುದ್ದೇಶ ದಿಂದಲೂ, ವಿಶ್ವದಾದ್ಯಂತದ ಕನ್ನಡಿಗರ ಒಗ್ಗೂಡಿಸಲು ಹೊರ ರಾಜ್ಯ, ಕೇಂದ್ರಾಡಳಿತ ಪ್ರದೇಶ ಮತ್ತು ಹೊರದೇಶದ ಘಟಕಗಳನ್ನು ಸ್ಥಾಪಿಸುವ ದೃಷ್ಟಿಯಿಂದಲೂ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತಿಗೆ ಪ್ರಸ್ತುತ ಐದು ವರ್ಷಗಳ ಈ ಅವಧಿಯಲ್ಲಿ ಒಂದು ಕೋಟಿ ಸದಸ್ಯತ್ವವನ್ನು ಹೊಂದುವ ದೃಷ್ಟಿಯಿಂದ ಶ್ರೀಸಾಮಾನ್ಯನೂ ಸಹ ಸದಸ್ಯತ್ವ ಪಡೆಯಲು ಅನುಕೂಲವಾಗುವಂತೆ ರೂ. 500 ಗಳಿದ್ದ ಸದಸ್ಯತ್ವ ಶುಲ್ಕವನ್ನು ರೂ. 250 ಗಳಿಗೆ ಇಳಿಸಲಾಗಿದೆ. ಜೊತೆಗೆ ಸಾಧಾರಣ ಗುರುತಿನ ಚೀಟಿ ನೀಡಲಾಗುತ್ತಿದ್ದು ದನ್ನು ಬದಲಾಯಿಸಿ, ರೂ. 150 ಗಳಿಗೆ ಅತ್ಯಾಧುನಿಕ ತಂತ್ರಾಂಶದ ಚಿಪ್ ವುಳ್ಳ ಸ್ಮಾರ್ಟ್ ಕಾರ್ಡ್ ಅನ್ನು ಗುರುತಿನ ಚೀಟಿಯಾಗಿ ಹೊಸದಾಗಿ ನೋಂದಾಯಿಸುವ ಸದಸ್ಯರಿಗೆ ವಿತರಿಸಲಾಗುತ್ತಿದೆ. ಈ ಹಿಂದೆ ಸದಸ್ಯತ್ವ ಪಡೆದವರೂ ಸಹ ರೂ. 150-00 ಗಳನ್ನು ಪಾವತಿಸಿ ಸ್ಮಾರ್ಟ್ ಕಾರ್ಡನ್ನು ಪಡೆಯಬಹುದು.

ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರಾಗಲು ಇದುವರೆಗೆ ಪರಿಷತ್ತಿನ ಕಚೇರಿಗೆ ಬರಬೇಕಿದ್ದ ಕನ್ನಡಿಗರು, ಇನ್ನು ಮುಂದೆ ಮನೆಯಲ್ಲಿಯೇ ಕುಳಿತು, ಸುಲಭವಾಗಿ ಆನ್‌ಲೈನ್ ಮೂಲಕ ಸದಸ್ಯತ್ವ ಪಡೆಯಲು ಸರಳವಾದ, ಅತ್ಯಾಧುನಿಕ ತಂತ್ರಜ್ಞಾನವುಳ್ಳ ಆಧುನಿಕ ಮೊಬೈಲ್ ಆಪ್ ಅನ್ನು ಇದೀಗ ಸಿದ್ಧಪಡಿಸಿ, ಲೋಕಾರ್ಪಣೆಗೊಳಿಸಲಾಗಿದೆ ಎಂದು ವಾಮದೇವಪ್ಪ ತಿಳಿಸಿದ್ದಾರೆ.

ಈ ಆ್ಯಪ್ ಅನ್ನು ತಮ್ಮ ಮೊಬೈಲಿನಲ್ಲಿ ಅನುಸ್ಥಾಪಿಸಲು https://play.google.com/store/apps/details?id=com.knobly.kasapa ಈ ಕೊಂಡಿಯನ್ನು ಒತ್ತಿ.

ಜಾಲತಾಣದ ಮೂಲಕವೂ ಸದಸ್ಯತ್ವ ಪಡೆಯಲು https://kannadasahithyaparishattu.in/app ಈ ಲಿಂಕ್ ಬಳಸಿಕೊಳ್ಳಬಹುದು.

## ಪಂಚಮಸಾಲಿ ಮಹಿಳಾ ಘಟಕದಿಂದ ಬಾಗಿನ



ಹೊನ್ನಾಳಿ, ಆ.21 - ಹೊನ್ನಾಳಿ ತಾಲ್ಲೂಕು ಹಾಗೂ ನ್ಯಾಮತಿ ಅವಳಿ ತಾಲ್ಲೂಕು ಪಂಚಮಸಾಲಿ ಮಹಿಳಾ ಘಟಕದಿಂದ ನಿನ್ನೆ ತುಂಗಭದ್ರಾ ನದಿಗೆ ಬಾಗಿನ ಅರ್ಪಿಸಲಾಯಿತು.

ತುಂಬಿದ ತುಂಗಭದ್ರಾ ನದಿಗೆ ಪಂಚಮಸಾಲಿ ತಾಲ್ಲೂಕು ಮಹಿಳಾ ಅಧ್ಯಕ್ಷೆ ಶಿಲ್ಪಾ ರಾಜುಗೌಡ ಇವರ ಅಧ್ಯಕ್ಷತೆಯಲ್ಲಿ ಪಟ್ಟಣದ ವೀರಭದ್ರೇಶ್ವರ ದೇವಸ್ಥಾನದಿಂದ ರಾಘವೇಂದ್ರ ಮಠದ ತುಂಗಭದ್ರಾ ನದಿಗೆ ಸಾಗಿ ಹೊಳೆ ಪೂಜೆ ಹಾಗೂ ಬಾಗಿನ ಪೂಜೆ ಸಲ್ಲಿಸುವ ಮೂಲಕ ನದಿಗೆ ಬಾಗಿನ ಬಿಡಲಾಯಿತು.

ಮಹಿಳಾ ಪದಾಧಿಕಾರಿಗಳಾದ ಕವಿತಾ, ಜಯಶ್ರೀ ಪರಮೇಶಣ್ಣ, ಪುರಸಭೆ ಸದಸ್ಯೆ ಪದ್ಮಾ ಪ್ರಶಾಂತ್, ನ್ಯಾಮತಿ ತಾಲ್ಲೂಕು ಅಧ್ಯಕ್ಷೆ ನಾಗರತ್ನ ನುಚ್ಚಿನ್, ಸಮಾಜದ ಗೌರವ ಅಧ್ಯಕ್ಷ ರಾಜಕುಮಾರ್, ಅಧ್ಯಕ್ಷ ವೀರಣ್ಣ ಬೆನಕನಹಳ್ಳಿ, ರಾಜ್ಯ ಉಪಾಧ್ಯಕ್ಷ ಪರಮೇಶ್ ಪಟ್ಟಣಶೆಟ್ಟಿ, ಪ್ರಧಾನ ಕಾರ್ಯದರ್ಶಿ ಹಾಲೇಶ್, ಹೋಟೆಲ್ ಗಿರೀಶ್, ಸೋಮಣ್ಣ, ಅಶೋಕ್, ರಾಜುಗೌಡ, ಹೊನ್ನಾಳಿ-ನ್ಯಾಮತಿ ಅವಳಿ ತಾಲ್ಲೂಕು ಮಹಿಳಾ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

## ಚಿತ್ರದುರ್ಗಕ್ಕೆ ಇಂದು ಎಂ.ಬಿ.ಪಾಟೀಲ್

ಕರ್ನಾಟಕ ಪ್ರದೇಶ ಕಾಂಗ್ರೆಸ್ ಪ್ರಚಾರ ಸಮಿತಿ ನೂತನ ಅಧ್ಯಕ್ಷರೂ, ಶಾಸಕರೂ ಆದ ಎಂ.ಬಿ.ಪಾಟೀಲ್ ಅವರು ಇಂದು ಚಿತ್ರದುರ್ಗಕ್ಕೆ ಆಗಮಿಸುತ್ತಿದ್ದು, ಅವರನ್ನು ಅದ್ಧೂರಿ ಮೆರವಣಿಗೆ ಮೂಲಕ ಪಕ್ಷದ ಕಚೇರಿಗೆ ಕರೆತರಲಾಗುವುದು ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಂ.ಕೆ.ತಾಜ್‌ಪೀರ್ ತಿಳಿಸಿದ್ದಾರೆ. ಬೆಳಗ್ಗೆ 10.30ಕ್ಕೆ ನೀಲಕಂಠೇಶ್ವರ ದೇವಸ್ಥಾನದಿಂದ ಡಿಸಿ ಸರ್ಕಲ್‌ವರೆಗೆ ಪಾದಯಾತ್ರೆ ಮೆರವಣಿಗೆ ಮೂಲಕ ಅಧ್ಯಕ್ಷರನ್ನು ಪಕ್ಷದ ಕಚೇರಿಗೆ ಕರೆತರಲಾಗುವುದು ಎಂದು ಅವರು ಹೇಳಿದ್ದಾರೆ.


ಬೇಕಾಗಿದ್ದಾರೆ

ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.

ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ :

ಶಾಂತಲಾ ವೆಡ್ಡಿಂಗ್ ಮಾಲ್

96861 95327

ಚಾಮರಾಜಪೇಟೆ, ದಾವಣಗೆರೆ - 577 001.

SAVI PASTRIES

(Home Made Cakes)

Charch Road, P.J. Extn., Davangere.

All Egg Less Pastries

with Door Delivery

For Customised Caks order early

Ph. : 80731 68242



ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ದಾವಣಗೆರೆ.

ಸಾರ್ವಜನಿಕ ಮಾಹಿತಿಗಾಗಿ ದಾವಣಗೆರೆ ನಗರದ ವಾಯುವಿನ ಗುಣಮಟ್ಟ

| ಕ್ರ.ಸಂ. | ಮಾಲಿನ್ಯ ಕಾರಕಗಳು | ಸತತ ವಾಯು ಗುಣಮಟ್ಟ ಮಾಪನ ಕೇಂದ್ರ, ದೇವರಾಜ್ ಅರಸ್ ಬಡಾವಣೆ, ದಾವಣಗೆರೆ | ಮಾನವ ಚಾಲಿತ ಮಾಪನ ಕೇಂದ್ರ, ಟ್ರಾಫಿಕ್ ಪೊಲೀಸ್ ಸ್ಟೇಷನ್ (ದಕ್ಷಿಣ) ಪಿ.ಬಿ. ರಸ್ತೆ, ದಾವಣಗೆರೆ. | | 24 ಗಂಟೆಗಳಿಗೆ ನಿಗದಿಪಡಿಸಿದ ಮಾನದಂಡ (µg/m³) |
|---|---|---|---|---|---|
| | | ಸರಾಸರಿ (ದಿನಾಂಕ : 15.08.2022 ರಿಂದ ದಿನಾಂಕ 21.08.2022ರವರೆಗೆ) | ದಿನಾಂಕ: 16.08.2022 | ದಿನಾಂಕ: 18.08.2022 | |
| 01 | PM-10 (µg/m³) | 52.52 | 76 | 77 | 100 |
| 02 | PM-2.5 (µg/m³) | 3.36 | NM | NM | 60 |
| 03 | $SO_2$ (µg/m³) | 3.24 | BDL | BDL | 80 |
| 04 | $NO_2$- (µg/m³) | 5.89 | 17 | 10 | 80 |
| 05 | AMMONIA (µg/m³) | 15.24 | 10 | 10 | 400 |

BDL-Below Detection Limit
NM-Not Monitored

ಸಹಿ/-
ಪರಿಸರ ಅಧಿಕಾರಿ, ಪ್ರಾದೇಶಿಕ ಕಛೇರಿ, ಕರಾಮಾನಿ ಮಂಡಳಿ, ದಾವಣಗೆರೆ.

# ಕನಿಷ್ಠ ಬೆಂಬಲ ಬೆಲೆ ಸಮಿತಿಯ ಸಭೆ

## ಶೂನ್ಯ ಬಜೆಟ್ ಕೃಷಿ, ಬೆಳೆ ವೈವಿಧ್ಯತೆ ಚರ್ಚೆ

ನವದೆಹಲಿ ಆ. 22 – ಕನಿಷ್ಠ ಬೆಂಬಲ ಬೆಲೆಯನ್ನು ಹೆಚ್ಚು ಪಾರದರ್ಶಕ ಹಾಗೂ ಪರಿಣಾಮಕಾರಿಯಾಗಿ ಜಾರಿಗೆ ತರುವ ಕುರಿತು ಕೇಂದ್ರ ಸರ್ಕಾರ ರೂಪಿಸಿರುವ ಎಂ.ಎಸ್.ಪಿ. ಸಮಿತಿ ಸೋಮವಾರ ಚರ್ಚೆ ನಡೆಸಿದೆ. ಆದರೆ, ಸಂಯುಕ್ತ ಕಿಸಾನ್ ಮೋರ್ಚಾ ಸಭೆಯಿಂದ ದೂರ ಉಳಿದಿತ್ತು.

ಮಾಜಿ ಕೃಷಿ ಕಾರ್ಯದರ್ಶಿ ಸಂಜಯ್ ಅಗರ್‌ವಾಲ್ ಅವರ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ. ಶೂನ್ಯ ಬಜೆಟ್ ಆಧರಿತ ಕೃಷಿಗೆ ಉತ್ತೇಜನ ಹಾಗೂ ಬೆಳೆ ಪದ್ಧತಿಯಲ್ಲಿ ಬದಲಾವಣೆ ಕುರಿತೂ ಸಭೆಯಲ್ಲಿ ಚರ್ಚೆ ನಡೆಸಲಾಗಿದೆ.

ಸಮಿತಿಯಲ್ಲಿ 26 ಸದಸ್ಯರಿದ್ದಾರೆ. ಮೂರು ಸ್ಥಾನಗಳನ್ನು ಸಂಯುಕ್ತ ಕಿಸಾನ್ ಮೋರ್ಚಾಗೆ ಕಾಯ್ದಿರಿಸಲಾಗಿದೆ.

ಮೂರೂ ವಿಷಯಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿದೆ. ಈ ದಿಸೆಯಲ್ಲಿ ಯಾವ ಕೆಲಸಗಳು ಆಗಬೇಕಿದೆ, ಯಾವ ರಾಜ್ಯಗಳು ಉತ್ತಮವಾಗಿ ಕೆಲಸ ಮಾಡಿವೆ ಹಾಗೂ ಉತ್ತಮ ಮಾದರಿಗಳ ಕುರಿತು ಚರ್ಚಿಸಲಾಯಿತು ಎಂದು ಸಮಿತಿಯ ಸದಸ್ಯ ಬಿನೋದ್ ಆನಂದ್ ತಿಳಿಸಿದ್ದಾರೆ.

ಮೂರು ಕೃಷಿ ಕಾಯ್ದೆಗಳ ವಿರುದ್ಧ ಎಸ್.ಕೆ.ಎಂ. ಪ್ರತಿಭಟನೆ ನಡೆಸಿದ ಹಿನ್ನೆಲೆಯಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಕನಿಷ್ಠ ಬೆಂಬಲ ಬೆಲೆ ಕುರಿತ ಸಮಿತಿ ರಚಿಸಿದ್ದರು. ಆದರೆ, ಎಸ್.ಕೆ.ಎಂ. ಸಮಿತಿಯನ್ನು ತಿರಸ್ಕರಿಸಿದೆ ಹಾಗೂ ಸಮಿತಿಗೆ ತನ್ನ ಪ್ರತಿನಿಧಿಗಳನ್ನು ಕಳಿಸುವುದಿಲ್ಲ ಎಂದು ಹೇಳಿದೆ.

# ಮುರುಘಾ ಶರಣರಿಗೆ ಬಸವ ಕಾರುಣ್ಯ ಪ್ರಶಸ್ತಿ



ಚಿತ್ರದುರ್ಗ, ಆ. 22 - ಇಳಕಲ್‌ನ ಚಿತ್ತರಗಿ ಶ್ರೀ ವಿಜಯ ಮಹಾಂತೇಶ್ವರ ಸಂಸ್ಥಾನ ಮಠದಲ್ಲಿಂದು ಚಿತ್ರದುರ್ಗದ ಶ್ರೀ ಜಗದ್ಗುರು ಮುರುಘರಾಜೇಂದ್ರ ಮಠದ ಡಾ. ಶಿವಮೂರ್ತಿ ಮುರುಘಾ ಶರಣರಿಗೆ ಬಸವ ಕಾರುಣ್ಯ ಪ್ರಶಸ್ತಿ ಪ್ರದಾನ ಮಾಡಲಾಯಿತು. ಪ್ರಶಸ್ತಿಯು ಒಂದು ಲಕ್ಷ ರೂ. ನಗದು ಮತ್ತು ಪ್ರಶಸ್ತಿ ಫಲಕ ಒಳಗೊಂಡಿದೆ. ಕಾರ್ಯಕ್ರಮದಲ್ಲಿ ಇಳಕಲ್‌ನ ಶ್ರೀ ಗುರುಮಹಾಂತ ಮಹಾಸ್ವಾಮಿಗಳು ಸೇರಿದಂತೆ ಹರಗುರು ಚರಮೂರ್ತಿಗಳು ಭಾಗವಹಿಸಿದ್ದರು.

# ಉಳ್ಳವರಿಗಿಂತ ವಿದ್ಯಾವಂತರು, ಪ್ರತಿಭಾವಂತರೇ ಜಗತ್ತನ್ನಾಳುವವರು



ಮಡಿವಾಳ ಮಾಚಿದೇವರ ಸ್ಮರಣೋತ್ಸವದಲ್ಲಿ ಶ್ರೀ ಬಸವ ಮಾಚಿದೇವ ಸ್ವಾಮೀಜಿ

ದಾವಣಗೆರೆ, ಆ.22- ಉಳ್ಳವರೇ ಜಗತ್ತನ್ನು ಆಳುತ್ತಾರೆ ಎನ್ನುವುದು ಸುಳ್ಳು. ವಿದ್ಯಾವಂತರು, ಪ್ರತಿಭಾವಂತರೇ ಜಗತ್ತನ್ನು ಆಳುತ್ತಾರೆ ಎನ್ನುವುದನ್ನು ಸೂಕ್ಷ್ಮವಾಗಿ ತಿಳಿಯಬೇಕಿದೆ ಎಂದು ಮಾಚಿದೇವ ಮಹಾಮಠದ ಡಾ. ಶ್ರೀ ಬಸವ ಮಾಚಿದೇವ ಮಹಾಸ್ವಾಮೀಜಿ ತಿಳಿಸಿದರು.

ಇಲ್ಲಿನ ವಿನೋಬ ನಗರದಲ್ಲಿರುವ ಮಾಚಿದೇವ ಸಮುದಾಯ ಭವನದಲ್ಲಿ ಮಡಿವಾಳ ಮಾಚಿದೇವ ಸಂಘದ ವತಿಯಿಂದ ಇಂದು ಹಮ್ಮಿಕೊಂಡಿದ್ದ ಶ್ರೀ ಮಡಿವಾಳ ಮಾಚಿದೇವರ ಶ್ರಾವಣ ಮಾಸದ ಸ್ಮರಣೋತ್ಸವ ಕಾರ್ಯಕ್ರಮ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭದ ಉದ್ಘಾಟನೆ ನೆರವೇರಿಸಿ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಇಂದಿನ ಯುವಪೀಳಿಗೆಯಲ್ಲಿ ಸಂಸ್ಕಾರದ ಕೊರತೆ ಇದೆ. ಶಿಕ್ಷಣ ಪಡೆದಂತೆ ನಾವು ಸಂಸ್ಕಾರವನ್ನು ಕಳೆದುಕೊಳ್ಳುತ್ತಿದ್ದೇವೆ. ಅಲ್ಲದೇ ಸಂಬಂಧಗಳ ಅರ್ಥವೇ ಗೊತ್ತಿಲ್ಲದಂತೆ ಇದ್ದೇವೆ. ಇದು ತೊಲಗದಿದ್ದರೆ ಮುಂದೊಂದು ದಿನ ನಮಗೂ ಇಂತಹ ಪರಿಸ್ಥಿತಿ ಕಟ್ಟಿಟ್ಟ ಬುತ್ತಿ. ಕಾರಣ ಮಕ್ಕಳನ್ನು ಶಿಕ್ಷಣದ ಜೊತೆಗೆ ಸುಶಿಕ್ಷಿತರನ್ನಾಗಿ ಮಾಡಬೇಕಾಗಿದೆ ಎಂದು ಕಿವಿಮಾತು ಹೇಳಿದರು.

ಸುಸಂಸ್ಕೃತ ಸಮಾಜ ನಿರ್ಮಾಣ ಯಾವುದೇ ಸಿರಿವಂತಿಕೆಯಲ್ಲಿ ಇಲ್ಲ. ಶಿಕ್ಷಿತ ಮತ್ತು ಸುಶಿಕ್ಷಿತ, ಸುಸಂಸ್ಕೃತ ಸಮಾಜ ನಿರ್ಮಾಣದ ಶಕ್ತಿ ಶರಣರ ತತ್ವದಲ್ಲಿ ಅಡಗಿದೆ ಎಂದು ಹೇಳಿದರು.

ಮೂಡಬಿದರೆ ಶ್ರೀ ಕ್ಷೇತ್ರ ಕರಿಂಜೆಯ ಶ್ರೀ ಮುಕ್ತಾನಂದ ಮಹಾಸ್ವಾಮೀಜಿ ಮಾತನಾಡಿ, ಮಡಿವಾಳ ಸಮಾಜಕ್ಕೆ ಅಸ್ಪೃಶ್ಯತೆ ಇದೆ. ನಮ್ಮನ್ನು ಯಾರೂ ಮಾತನಾಡಿಸಲ್ಲ ಎನ್ನುವ ಮಾತುಗಳು ಕೇಳಿ ಬರುತ್ತಿವೆ. ರಾಜಕೀಯವಾಗಿ ಅಸ್ತಿತ್ವಕ್ಕೆ ಬರಲು ನಾವು ಹೋರಾಟದ ಮೂಲಕ ಮುಂದೆ ಬರಬೇಕಾಗಿದೆ. ಜಯ ಸಿಗುವವರೆಗೂ ವಿರಮಿಸಬಾರದು. ಆಗ ಜಯ ನಿಶ್ಚಿತ ಎಂದರು.

12ನೇ ಶತಮಾನದಲ್ಲಿ ಮಾಚಿದೇವರು ಏಕಾಂಗಿಯಾಗಿ ಒಬ್ಬ ರಾಜನ ವಿರುದ್ಧ ಹೋರಾಡಿ ಜಯ ಕಂಡರು. ಅಂತೆಯೇ ಅವರ ಕುಲಸ್ಥರಾದ ನಾವು ಹೋರಾಟದ ಮೂಲಕವೇ ಎಲ್ಲವನ್ನೂ ಪಡೆಯಬೇಕು. ಕೇವಲ ಆಶ್ವಾಸನೆಗಳನ್ನು ನೀಡುತ್ತಿರುವ ರಾಜಕೀಯ ಪಕ್ಷಗಳಿಗೆ ನಮ್ಮ ಸಮಾಜದ ಶಕ್ತಿ ತೋರಿಸಬೇಕಿದೆ ಎಂದರು.

ವಿಧಾನ ಪರಿಷತ್‌ನ ಮಾಜಿ ಮುಖ್ಯ ಸಚೇತಕ ಡಾ. ಎ.ಹೆಚ್. ಶಿವಯೋಗಿಸ್ವಾಮಿ ಮಾತನಾಡಿ, ಶಿಕ್ಷಿತರಾಗುವುದರ ಜೊತೆಗೆ ಸುಶಿಕ್ಷಿತರಾಗುವುದು ಮುಖ್ಯ. ಇದು ಬೌದ್ಧಿಕ ಶಕ್ತಿಯ ಕಾಲಮಾನವಾಗಿದೆ. ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಅಂಕ ಗಳಿಕೆಯ ಜೊತೆ ಸುಶಿಕ್ಷಿತರಾಗಬೇಕು. ಆ ಮೂಲಕ ಸಮಾಜ, ದೇಶ, ಸಂಸ್ಕೃತಿಗೆ ಧಕ್ಕೆ ಬಂದಾಗ ಉಳಿಸಿ, ಬೆಳೆಸುವ ಕೆಲಸ ಮಾಡಬೇಕು. ಅದಕ್ಕಾಗಿ ಎಲ್ಲರೂ ಸಂಘಟಿತರಾಗಬೇಕೆಂದು ಕರೆ ನೀಡಿದರು.

ವೇದಿಕೆಯಲ್ಲಿ ಸಂಘದ ಜಿಲ್ಲಾಧ್ಯಕ್ಷ ಎಂ. ನಾಗೇಂದ್ರಪ್ಪ, ಕಾರ್ಯಾಧ್ಯಕ್ಷ ಹೆಚ್. ಜಿ. ಉಮೇಶ್, ಪ್ರಧಾನ ಕಾರ್ಯದರ್ಶಿ ಓಂಕಾರಪ್ಪ, ಆರ್.ಎನ್. ಧನಂಜಯ, ಸುರೇಶ್ ಕೋಗುಂಡೆ, ಎಂ. ನಾಗರಾಜ್, ಹರಪನಹಳ್ಳಿ ಪುರಸಭೆ ಅಧ್ಯಕ್ಷ ಹೆಚ್.ಎಂ. ಅಶೋಕ ಹರಾಳ್, ಕರ್ನಾಟಕ ರಾಜ್ಯ ಮಡಿವಾಳರ ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ ಬಿ.ಆರ್. ಪ್ರಕಾಶ್, ಎಸ್. ಎಲ್. ಆನಂದಪ್ಪ, ಜೆ.ಹೆಚ್. ನಾಗರಾಜ್, ಶ್ವೇತಾ, ಎಂ.ಎನ್. ಬಸವರಾಜಪ್ಪ, ಪತ್ರಕರ್ತ ಎಂ.ವೈ. ಸತೀಶ್, ಪಿ. ಮಂಜುನಾಥ್, ಜಿ. ವಿಜಯಕುಮಾರ್, ಯೋಗಪಟು ಎನ್. ಪರಶುರಾಮ, ಅಂಜಿನಪ್ಪ ಪೂಜಾರ್, ಎಂ. ರುದ್ರೇಶ್, ಸಿ. ಗುಡ್ಡಪ್ಪ, ಹೆಚ್. ದುಗ್ಗಪ್ಪ ಸೇರಿದಂತೆ ಇತರರು ಇದ್ದರು.

### ಬಟ್ಟೆ ಒಗೆಯಲು ಆಧುನಿಕ ಯಂತ್ರ ಅಳವಡಿಕೆಗೆ ಕ್ರಮ

ವಿನೋಬ ನಗರದಲ್ಲಿರುವ ಜಿಲ್ಲಾ ಶ್ರೀ ಮಡಿವಾಳ ಮಾಚಿದೇವ ಸಂಘದ ಸಮುದಾಯ ಭವನ ರಸ್ತೆಗೆ ಮಾಚಿದೇವ ರಸ್ತೆ ಎಂದು ಹೆಸರಿಡುವಂತೆ ಮಹಾನಗರ ಪಾಲಿಕೆಯು ಸರ್ಕಾರಕ್ಕೆ ಪ್ರಸ್ತಾವನೆ ಕಳಿಸಿತ್ತು. ಇದೀಗ ಅದಕ್ಕೆ ಅನುಮೋದನೆ ದೊರೆತಿದೆ. ಅತೀ ಶೀಘ್ರವೇ ಉದ್ಘಾಟನೆ ಮಾಡಲಾಗುವುದು. ಜಿಲ್ಲಾ ಪಂಚಾಯತ್ ಬಳಿ ಇರುವ ಮಡಿ ಕಟ್ಟೆಯಲ್ಲಿ ಆಧುನಿಕ, ಸುಸಜ್ಜಿತ ಯಂತ್ರ ಅಳವಡಿಸಲು ಬಂದಿದ್ದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳಿಸಲಾಗಿತ್ತು. ಅನುಮೋದನೆಗಾಗಿ ಸರ್ಕಾರದೊಂದಿಗೆ ಮಾತನಾಡಿ ಬಟ್ಟೆ ಒಗೆಯಲು ಆಧುನಿಕ ಯಂತ್ರ ಅಳವಡಿಸಲು ಸೂಕ್ರ ಕ್ರಮ ಕೈಗೊಳ್ಳಲಾಗುವುದು.

- ಕೆ. ಪ್ರಸನ್ನಕುಮಾರ್, ನಗರ ಪಾಲಿಕೆ ಸದಸ್ಯ.

### ಜ್ಞಾನದ ಸಿರಿವಂತಿಕೆ ಮುಂದೆ ಎಲ್ಲವೂ ಶೂನ್ಯ

ಶೋಷಿತ ಮತ್ತು ತಳ ಸಮುದಾಯಗಳು ಸಿರಿವಂತಿಕೆಯೇ ಎಲ್ಲವೂ ಎನ್ನುವ ಹುಚ್ಚಿನಲ್ಲಿ ಅದರ ಬೆನ್ನತ್ತಿ ಹೋಗುತ್ತಿದ್ದೇವೆ. ಜ್ಞಾನ ಮರೆಯುತ್ತಿದ್ದೇವೆ. ಆದರೆ ಮುಂದುವರೆದ ಸಮುದಾಯಗಳು ಜ್ಞಾನದ ಬೆನ್ನತ್ತಿರುವ ಕಾರಣ ಎಲ್ಲವೂ ಅವರಿಗೆ ಸಿಗುತ್ತವೆ. ಜ್ಞಾನದ ಸಿರಿವಂತಿಕೆಯ ಮುಂದೆ ಎಲ್ಲವೂ ಶೂನ್ಯ. ಬಾಹ್ಯವಾಗಿ ಕಾಣುವ ಸಿರಿವಂತಿಕೆ ಬದಲು ಜ್ಞಾನದ ಬೆಳಕನ್ನು ಹಚ್ಚಿಕೊಂಡು ಆಂತರಿಕವಾಗಿ ಸಿರಿವಂತರಾಗಬೇಕಿದೆ.

- ಡಾ. ಶ್ರೀ ಬಸವ ಮಾಚಿದೇವ ಮಹಾಸ್ವಾಮೀಜಿ.

# ಕೂಲಿ ಕಾರ್ಮಿಕನಿಗೆ 37.50 ಲಕ್ಷ ರೂ.ಗಳ ಜಿಎಸ್‌ಟಿ ನೋಟಿಸ್!

ಖಗಾರಿಯ (ಬಿಹಾರ), ಆ. 22 – ಕೂಲಿ ಕಾರ್ಮಿಕನಿಗೆ 37.50 ಲಕ್ಷ ರೂ.ಗಳ ಜಿ.ಎಸ್.ಟಿ. ಕಟ್ಟುವಂತೆ ನೋಟಿಸ್ ಬಂದಿರುವ ಘಟನೆ ನಡೆದಿದೆ. ಈ ಸಮಸ್ಯೆ ಬಗೆಹರಿಸಿಕೊಳ್ಳಲು ರಾಜಸ್ಥಾನಕ್ಕೆ ಬರುವಂತೆ ಅಧಿಕಾರಿಗಳು ನೋಟಿಸ್‌ನಲ್ಲಿ ತಿಳಿಸಿದ್ದಾರೆ.

ಮಘೌನ ಹಳ್ಳಿಯ ವಾಸಿ ಗಿರೀಶ್ ಯಾದವ್ ಅವರಿಗೆ ಆಗಸ್ಟ್ 2ರಂದು ನೋಟಿಸ್ ಕಳಿಸಿರುವ ರಾಜಸ್ಥಾನದ ಪಾಲಿ ಜಿಲ್ಲೆಯ ಸಿ.ಜಿ.ಎಸ್.ಟಿ. ಅಧಿಕಾರಿಗಳು, ಲಕ್ಷಗಟ್ಟಲೆ ತೆರಿಗೆ ಪಾವತಿಸಲು ತಿಳಿಸಿದ್ದಾರೆ.

ನಾನೆಂದೂ ರಾಜಸ್ಥಾನಕ್ಕೆ ಹೋಗಿಯೇ ಇಲ್ಲ ಎಂದಿರುವ ಯಾದವ್, ತಮಗೆ ನೆರವು ನೀಡುವಂತೆ ಜಿಲ್ಲಾಧಿಕಾರಿಗಳ ಬಳಿ ತೆರಳಿದ್ದಾನೆ. ಆದರೆ, ಈ ವಿಷಯದಲ್ಲಿ ಯಾದವ್‌ಗೆ ನೆರವು ನೀಡಲು ಅವಕಾಶವಿಲ್ಲ ಎಂದಿರುವ ಜಿಲ್ಲಾಧಿಕಾರಿ ಅಲೋಕ್ ರಂಜನ್ ಘೋಷ್, ರಾಜಸ್ಥಾನಕ್ಕೆ ತೆರಳಿ ತೊಡಕು ಬಗೆಹರಿಸಿಕೊಳ್ಳುವ ಬಗ್ಗೆ ಪೂರ್ಣ ಮಾರ್ಗದರ್ಶನ ಮಾಡುವುದಾಗಿ ಹೇಳಿದ್ದಾರೆ. ಗುಡಿಸಲಿನಲ್ಲಿ ವಾಸಿಸುವ ಯಾದವ್ ಅವರನ್ನು ಈ ಪ್ರಕರಣದಲ್ಲಿ ಯಾರು ಸಿಲುಕಿಸಿದ್ದಾರೆ ಎಂಬ ಬಗ್ಗೆ ತನಿಖೆ ನಡೆಸಲಾಗುವುದು ಎಂದು ಘೋಷ್ ತಿಳಿಸಿದ್ದಾರೆ.

ದೆಹಲಿಯ ಒಬ್ಬರು ಕೆಲ ದಿನಗಳ ಹಿಂದೆ ನನ್ನ ಭೇಟಿ ಮಾಡಿದ್ದರು. ಪಾನ್ ಕಾರ್ಡ್ ಮಾಡಿಸಿ ಹಲವಾರು ಸೌಲಭ್ಯ ಕೊಡಿಸುವುದಾಗಿ ಹೇಳಿದ್ದರು. ಆ ವ್ಯಕ್ತಿಯಿಂದಲೇ ವಂಚನೆ ಆಗಿರಬಹುದು ಎಂದು ಯಾದವ್ ಶಂಕಿಸಿದ್ದಾರೆ.

# ಪದ್ಮ ಪ್ರಶಸ್ತಿಗಳಿಗೆ ಶಿಫಾರಸ್ಸು ಮಾಡಲು ಸೆ.15ರವರೆಗೆ ಅವಕಾಶ

ನವದೆಹಲಿ, ಆ. 22 – ಪದ್ಮ ಪ್ರಶಸ್ತಿಗಳಿಗೆ ಆನ್‌ಲೈನ್ ಮೂಲಕ ಶಿಫಾರಸ್ಸು ಮಾಡಲು ಸೆಪ್ಟೆಂಬರ್ 15ರವರೆಗೆ ಅವಧಿ ಇದೆ ಎಂದು ಕೇಂದ್ರ ಗೃಹ ಸಚಿವಾಲಯ ತಿಳಿಸಿದೆ. ಸಾರ್ವಜನಿಕರು ಪದ್ಮ ಪ್ರಶಸ್ತಿಗಳಿಗಾಗಿ ತಮ್ಮ ಶಿಫಾರಸ್ಸುಗಳನ್ನು ರಾಷ್ಟ್ರೀಯ ಪುರಸ್ಕಾರ ಪೋರ್ಟಲ್ ಆಗಿರುವ https://awards.gov.in ಮೂಲಕ ಸಲ್ಲಿಸಬಹುದು. ಪ್ರತಿ ವರ್ಷ ಗಣ ರಾಜ್ಯೋತ್ಸವದ ಸಂದರ್ಭದಲ್ಲಿ ಈ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುತ್ತದೆ.

# ಅಂಕಗಳ ಬದಲು ಅಂಕೆಯಲ್ಲಿಟ್ಟು, ಸಂಸ್ಕಾರದಿಂದ ಮಕ್ಕಳ ಗುರುತಿಸೋಣ : ಶ್ರೀ ಓಂಕಾರ ಸ್ವಾಮೀಜಿ

### ದೇವರಮನಿ ಚನ್ನಬಸಮ್ಮ ಮುರಿಗೆಪ್ಪ ಜ್ಞಾಪಕಾರ್ಥ ಪ್ರತಿಭಾ ಪುರಸ್ಕಾರ

ದಾವಣಗೆರೆ, ಆ.22- ಅಂಕಗಳಿಂದ ಮಕ್ಕಳನ್ನು ಗುರುತಿಸುವುದು ಬೇಡ. ಅಂಕೆಯಲ್ಲಿಟ್ಟು, ಸಂಸ್ಕಾರದಿಂದ ಗುರುತಿಸುವ ಪ್ರಯತ್ನ ಮಾಡೋಣ ಎಂದು ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಪೋಷಕರಿಗೆ ಕಿವಿಮಾತು ಹೇಳಿದರು.

ನಗರದ ಮೋತಿ ಚನ್ನಬಸಮ್ಮ ವೀರಪ್ಪ ಕಲ್ಯಾಣ ಮಂಟಪದಲ್ಲಿ ದೇವರಮನಿ ಚನ್ನಬಸಮ್ಮ ಮುರಿಗೆಪ್ಪ ಚಾರಿಟೇಬಲ್ ಟ್ರಸ್ಟ್ ವತಿಯಿಂದ ದೇವರಮನಿ ಚನ್ನಬಸಮ್ಮ ಮುರಿಗೆಪ್ಪ ಅವರ ಜ್ಞಾಪಕಾರ್ಥವಾಗಿ ಕಳೆದ ವಾರ ಹಮ್ಮಿಕೊಂಡಿದ್ದ 6ನೇ ವರ್ಷದ ಪ್ರತಿಭಾ ಪುರಸ್ಕಾರ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ವಿದ್ಯಾರ್ಜನೆ ಪಡೆದರೆ ಸಾಕೆಂಬ ಆಸೆಯಿಂದ ಮಕ್ಕಳಿಗೆ ಮೊಬೈಲ್, ಲ್ಯಾಪ್ ಟಾಪ್, ಬೈಕ್ ಹೀಗೆ ಕೇಳಿದ್ದನ್ನೆಲ್ಲಾ ಕೊಡಿಸುತ್ತೀರಾ. ಮಕ್ಕಳೂ ಸಹ ಕೊಡಿಸುವ ತನಕ ಬಿಡಲ್ಲ. ಹೀಗೆ ಎಲ್ಲಾ ಸೌಲಭ್ಯಗಳನ್ನು ಪಡೆದ ಮಕ್ಕಳು ಅತ್ಯುತ್ತಮವಾಗಿ ಶೈಕ್ಷಣಿಕ ಸಾಧನೆ ಮಾಡುವುದು ಕಷ್ಟದ ಮಾತಲ್ಲ. ಅಂಬೇಡ್ಕರ್, ಅಬ್ದುಲ್ ಕಲಾಂ ಅವರಂತಹ ಮಹಾನ್ ಚೇತನಗಳು ದೀಪದ ಬೆಳಕಿನಡಿ ಓದಿ ಕಷ್ಟಪಟ್ಟು ಶೈಕ್ಷಣಿಕ ಸಾಧನೆ ಮಾಡಿ, ಅದನ್ನು ದೇಶಕ್ಕೆ ಕೊಡುಗೆಯಾಗಿ ನೀಡಿ, ವಿಶ್ವವಿಖ್ಯಾತಿಯಾದರು ಎಂದು ಹೇಳಿದರು.

ಬಹಳ ಸರಳವಾಗಿ, ಪೋಷಕರ ಕಷ್ಟ, ಕಾರ್ಪಣ್ಯಗಳ, ಕೈಲಾದ ವ್ಯವಸ್ಥೆಗೆ ಅನುಸಾರ ಮತ್ತು ಸಹಕಾರಿಯಾಗಿ ಪುಸ್ತಕದಲ್ಲಿನ ವಿದ್ಯೆಯನ್ನು ಮಸ್ತಕಕ್ಕೆ ಪಡೆದು ಆ ಮುಖೇನ ನೂರಾರು ಪುಸ್ತಕಗಳನ್ನು ಬರೆಯುವ ಸಂಕಲ್ಪ ಮಾಡಿ, ಪ್ರಯತ್ನಿಸುವ ವಿದ್ಯಾರ್ಥಿಗಳು ಭವಿಷ್ಯತ್ತಿನಲ್ಲಿ ದೀನ, ದುರ್ಬಲರ, ಅಂಧರ, ಅನಾಥರ ಬಾಳಲ್ಲಿ ಬೆಳಕು ನೀಡುವ ಮಹಾನ್ ಸಾಧಕರಾಗಿ ಹೊರಹೊಮ್ಮುತ್ತಾರೆ ಎಂದರು.

ಪ್ರಸ್ತುತ ದುಡ್ಡು ಮುಂದಿಟ್ಟುಕೊಂಡು, ಖಾಸಗೀಕರಣ ಗಮನದಲ್ಲಿಟ್ಟುಕೊಂಡು ಹಣ ಮಾಡುವ ಪದ್ದತಿ ಕಂಡುಬರುತ್ತಿದೆ. ದಾವಣಗೆರೆಯಲ್ಲಿ ಔದ್ಯೋಗಿಕ, ವಾಣಿಜ್ಯೋದ್ಯಮ ಕುಸಿದಿದ್ದು, ಗತವೈಭವವಾಗಿದೆ. ಇದೀಗ ಒಂದು ಕಡೆ ಶಿಕ್ಷಣ ಮತ್ತು ಆಸ್ಪತ್ರೆಗಳು ನಾಗಾಲೋಟದಲ್ಲಿ ಪೈಪೋಟಿಗೆ ಬಿದ್ದಿರುವ ವಾತಾವರಣ ಇದೆ. ಇಂತಹ ಈಗಿನ ದಿನಮಾನಗಳಲ್ಲಿ ಇವುಗಳನ್ನು ಮೀರಿ ಹಿರಿಯರ ಗತ ವೈಭವ, ಸಂಸ್ಕಾರ ಪುನಃ ಮೇಳೈಸುವಂತೆ ಯುವ ಪೀಳಿಗೆಯ ಮಕ್ಕಳು ಮಾಡಬೇಕು ಎಂದರು.

ಟ್ರಸ್ಟ್ ಅಧ್ಯಕ್ಷ ದೇವರಮನಿ ಮಹಾರುದ್ರಪ್ಪ ಅಧ್ಯಕ್ಷತೆ ವಹಿಸಿದ್ದರು. ವಿರಕ್ತ ಮಠದ ಶ್ರೀ ಬಸವಪ್ರಭು ಸ್ವಾಮೀಜಿ, ಕೈಗಾರಿಕೋದ್ಯಮಿ ಅಥಣಿ ವೀರಣ್ಣ, ಟ್ರಸ್ಟ್ ಕಾರ್ಯದರ್ಶಿ ದೇವರಮನಿ ಶಿವಕುಮಾರ್, ವೀರಶೈವ ಕ್ರೆಡಿಟ್ ಸೊಸೈಟಿ ಅಧ್ಯಕ್ಷ ಅಜ್ಜಂಪುರ ಶೆಟ್ರು ಮೃತ್ಯುಂಜಯ ಮತ್ತು ಇತರರು ಕಾರ್ಯಕ್ರಮದ ವೇದಿಕೆಯಲ್ಲಿ ಉಪಸ್ಥಿತರಿದ್ದರು.



# ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದಿಂದ 1008 ಶ್ರೀ ಸತ್ಯನಾರಾಯಣ ಸ್ವಾಮಿ ವ್ರತ



ದಾವಣಗೆರೆ, ಆ.22- ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನ ಸಂಘದ ವತಿಯಿಂದ ಭಕ್ತರ ಅಭ್ಯುದಯ, ಲೋಕ ಕಲ್ಯಾಣ ಮತ್ತು ಆರ್ಯ ವೈಶ್ಯರ ಶ್ರೇಯೋಭಿವೃದ್ಧಿಗಾಗಿ 1008 ಶ್ರೀ ಸತ್ಯನಾರಾಯಣ ಸ್ವಾಮಿಯ ವ್ರತವನ್ನು ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದ ಶ್ರೀ ವಾಸವಿ ಕಲ್ಯಾಣ ಮಂಟಪದಲ್ಲಿ ವಿಜೃಂಭಣೆ ಮತ್ತು ಶ್ರದ್ಧಾ-ಭಕ್ತಿಯಿಂದ ಆಚರಿಸಲಾಯಿತು. ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನ ಸಂಘದ ಅಧ್ಯಕ್ಷ ಆರ್. ಎಲ್. ಪ್ರಭಾಕರ್ ನೇತೃತ್ವದಲ್ಲಿ ಈ ಕಾರ್ಯಕ್ರಮ ಏರ್ಪಾಡಾಗಿತ್ತು.

## ವೇತನ ಹೆಚ್ಚಳಕ್ಕಾಗಿ ಬ್ರಿಟನ್ ವಕೀಲರ ಮುಷ್ಕರ

ಲಂಡನ್, ಆ. 22 – ಬೆಲೆ ಏರಿಕೆಯ ಹಿನ್ನೆಲೆಯಲ್ಲಿ ನ್ಯಾಯೋಚಿತ ವೇತನ ನೀಡುವಂತೆ ಆಗ್ರಹಿಸಿ ಇಂಗ್ಲೆಂಡ್ ಹಾಗೂ ವೇಲ್ಸ್‌ನಲ್ಲಿ ಅಪರಾಧಿಕ ಪ್ರಕರಣಗಳನ್ನು ನಿರ್ವಹಿಸುವ ವಕೀಲರು ಮುಷ್ಕರ ನಡೆಸಲು ನಿರ್ಧರಿಸಿದ್ದಾರೆ.

ಬರುವ ಸೆಪ್ಟೆಂಬರ್ 5ರಿಂದ ಮುಷ್ಕರ ನಡೆಸಲು ಸದಸ್ಯರು ನಿರ್ಧರಿಸಿದ್ದಾರೆ ಎಂದು ಪ್ರಾಸಿಕ್ಯೂಷನ್ ಹಾಗೂ ಆರೋಪಿ ಪರ ವಕೀಲರನ್ನು ಪ್ರತಿನಿಧಿಸುವ ದಿ ಕ್ರಿಮಿನಲ್ ಬಾರ್ ಅಸೋಸಿಯೇಷನ್ ತಿಳಿಸಿದೆ.

ವೇತನ, ಕೆಲಸದ ಪರಿಸ್ಥಿತಿ ಹಾಗೂ ಕಾನೂನು ನೆರವು ಅನುದಾನದ ಬಗ್ಗೆ ವಕೀಲರು ಇದುವರೆಗೂ ವಾರ ಬಿಟ್ಟು ವಾರ ಪ್ರತಿಭಟನೆ ನಡೆಸುತ್ತಿದ್ದರು. ಸೆಪ್ಟೆಂಬರ್ 5 ರಿಂದ ಸಂಪೂರ್ಣ ಪ್ರತಿಭಟನೆ ನಡೆಸಲು ನಿರ್ಧರಿಸಲಾಗಿದೆ.

# ನಮನ ಅಕಾಡೆಮಿಯಿಂದ 'ಕಲ್ಪವೃಕ್ಷ' ನೃತ್ಯ ರೂಪಕ



ದಾವಣಗೆರೆ, ಆ. 22- ನಗರದ ಕೆ.ಬಿ ಬಡಾವಣೆಯ ಶ್ರೀ ಗುರು ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಗುರುಗಳ 351ನೇ ಆರಾಧನಾ ಮಹೋತ್ಸವದ ಪ್ರಯುಕ್ತ ಆಯೋಜಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ನಗರದ ನಮನ ಅಕಾಡೆಮಿಯು ಭರತನಾಟ್ಯ ಮತ್ತು ಕಲ್ಪವೃಕ್ಷ ಎಂಬ ನೃತ್ಯರೂಪಕವನ್ನು ಪ್ರಸ್ತುತ ಪಡಿಸಿತು.

ಪುಷ್ಪಾಂಜಲಿ, ದೇವರ ನಾಮ (ಕನಕದಾಸರ ಬಾಗಿಲನು ತೆರೆದು ಸೇವೆಯನು ಕೊಡೋ ಹರಿಯೇ), ಗಣೇಶ ಸ್ತುತಿ ಹಾಗೂ ತ್ರಿಮಾತ ಕೌತುವಂ (ಸರಸ್ವತಿ, ಲಕ್ಷ್ಮಿ, ಪಾರ್ವತಿ) ಗೆ ಭರತ ನಾಟ್ಯವನ್ನು ಮಾಡಿದರು.

ನಂತರ 'ಕಲ್ಪವೃಕ್ಷ' ಎಂಬ ಗುರು ರಾಘವೇಂದ್ರ ಸ್ವಾಮಿಗಳ ಜೀವನ ಚರಿತ್ರೆ ಆಧಾರಿತ ನೃತ್ಯರೂಪಕವನ್ನು ನಮನ ಅಕಾಡೆಮಿಯ ಗುರುಗಳಾದ ವಿದುಷಿ ಶ್ರೀಮತಿ ಮಾಧವಿ ಡಿ.ಕೆ ಹಾಗೂ ಅವರ 30 ಜನ ಶಿಷ್ಯಂದಿರು ಪ್ರದರ್ಶಿಸಿದರು.

ಶ್ರೀ ರಾಘವೇಂದ್ರ ಸ್ವಾಮಿಗಳ ಹುಟ್ಟಿನಿಂದ ಅವರು ಬೃಂದಾವನಸ್ಥರಾಗು ವವರೆಗಿನ ವಿಶೇಷ ಸನ್ನಿವೇಶಗಳನ್ನು ನೃತ್ಯ ರೂಪಕದಲ್ಲಿ ಅಚ್ಚುಕಟ್ಟಾಗಿ ಅಳವಡಿಸಲಾಗಿತ್ತು. ಈ ನೃತ್ಯ ರೂಪಕದ ಪರಿಕಲ್ಪನೆ, ನಿರ್ದೇಶನ, ವಸ್ತ್ರಾಲಂಕಾರ ಹಾಗೂ ನೃತ್ಯ ಸಂಯೋಜನೆಯನ್ನು ವಿದುಷಿ ಶ್ರೀಮತಿ ಮಾಧವಿ ಡಿ.ಕೆ ಅವರು ನಿರ್ವಹಿಸಿದರು. ಮಠದ ಅಧ್ಯಕ್ಷ ಕೋಸ ಪ್ರಸನ್ನ, ಆನಂದ ತೀರ್ಥಾಚಾರ್, ಗುರುರಾಜ ಆಚಾರ್, ವಾಚಸ್ಪತಿ ಹಾಗೂ ಮಠದ ಆಡಳಿತ ಮಂಡಳಿಯವರು ಉಪಸ್ಥಿತರಿದ್ದು ಎಲ್ಲಾ ಕಲಾವಿದರಿಗೆ ಪರಿಮಳ ಪ್ರಸಾದವನ್ನು ವಿತರಿಸಿ ಆಶೀರ್ವದಿಸಿದರು.

## ಹರಿಹರ : 26ರಂದು ವೀರಭದ್ರೇಶ್ವರ ಸ್ವಾಮಿ ಪಲ್ಲಕ್ಕಿ ಉತ್ಸವ

ಹರಿಹರ, ಆ. 22- ನಗರದ ಕ್ಷೇತ್ರನಾಥ ಶ್ರೀ ವೀರಭದ್ರೇಶ್ವರ ಸ್ವಾಮಿ ಗುಗ್ಗುಳ, ಪಲ್ಲಕ್ಕಿ ಉತ್ಸವವು ಇದೇ ದಿನಾಂಕ 26 ರಂದು ಬೆಳಿಗ್ಗೆ 8 ಗಂಟೆಗೆ ಜರುಗಲಿದೆ.

ನಂತರ ಅಗ್ನಿಕುಂಡ ಹಾಗೂ ಅನ್ನ ಸಂತರ್ಪಣೆ ನಡೆಯಲಿದೆ.

ರಜಾ ಸೂಚನೆ
ಪರ್ಯುಷಣ್ ಹಬ್ಬದ ಪ್ರಯುಕ್ತ
ದಿನಾಂಕ 24-08-2022ರ ಬುಧವಾರ
ನಮ್ಮ ಅಂಗಡಿಗಳು ರಜಾ ಇರುತ್ತದೆ.
ಮಾನ್ಯ ನಮ್ಮೆಲ್ಲಾ ಗ್ರಾಹಕರು ಸಹಕರಿಸಬೇಕಾಗಿ ವಿನಂತಿ.
ಶಾಂತಲಾ ವೆಡ್ಡಿಂಗ್ ಮಾಲ್
ಚಾಮರಾಜಪೇಟೆ, ದಾವಣಗೆರೆ-577001
ಶಾಂತಲಾ ಬ್ರಾಂಚ್
ಡೆಂಟಲ್ ಕಾಲೇಜು ರೋಡ್, ದಾವಣಗೆರೆ.

|| ಶ್ರೀ ಉಜ್ಜಯಿನಿ ಮರುಳಸಿದ್ದೇಶ್ವರ ಪ್ರಸನ್ನ ||
ಕೈಲಾಸ ಶಿವಗಣಾರಾಧನೆ ಆಹ್ವಾನ



ಹುಬ್ಬಳ್ಳಿ ನಗರ ವಾಸಿ
ಶ್ರೀಮತಿ ಲಲಿತಮ್ಮ ಶ್ರೀ ವಿ.ಜಿ. ಚಂದ್ರಶೇಖರಪ್ಪನವರು
ಮಾಡುವ ವಿಜ್ಞಾಪನೆಗಳು.
ದಿನಾಂಕ : 13.08.2022ನೇ ಶನಿವಾರ ಬೆಳಿಗ್ಗೆ 03.10ಕ್ಕೆ ನನ್ನ ತಮ್ಮನಾದ
ದಿ|| ವಿ.ಜಿ. ಮಲ್ಲಿಕಾರ್ಜುನಪ್ಪನವರ ಧರ್ಮಪತ್ನಿಯಾದ
ಎಂ. ಅನುಸೂಯರವರು
ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
"ಕೈಲಾಸ ಶಿವಗಣಾರಾಧನೆ"ಯನ್ನು
ದಿನಾಂಕ : 23.08.2022ನೇ ಮಂಗಳವಾರ ಬೆಳಿಗ್ಗೆ 10.30ಕ್ಕೆ
ಶ್ರೀ ಸದ್ಯೋಜಾತ ಮಠ, ಟ್ಯಾಂಕ್ ಪಾರ್ಕ್ ಹತ್ತಿರ, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ, ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು : ಶ್ರೀಮತಿ ದಿವ್ಯಾ ಮಂಜುನಾಥ್ ಮತ್ತು ಮಕ್ಕಳು
ಶ್ರೀಮತಿ ಪ್ರತಿಭಾ ವಿಶ್ವನಾಥ್ ಮತ್ತು ಮಕ್ಕಳು ಮತ್ತು ವಡೇರಹಳ್ಳಿ ಗೌಡ್ರ ವಂಶಸ್ಥರು
ಹಾಗೂ ಬಂಧು-ಮಿತ್ರರು.
# 2814/1, 3ನೇ ಮೇನ್ 4ನೇ ಕ್ರಾಸ್, ಎಂ.ಸಿ.ಸಿ. "ಬಿ" ಬ್ಲಾಕ್, ದಾವಣಗೆರೆ. 4. ಫೋ. : 70229 00345
ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.




JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte